بِسۡمِ اللّٰہِ الرَّحۡمٰنِ الرَّحِیۡمِ    نَحۡمَدُہٗ وَنُصَلِّیۡ عَلٰی رَسُوۡلِہِ الۡکَرِیۡمِ    وَعَلٰی عَبۡدِہِ الۡمَسِیۡحِ الۡمَوۡعُوۡدِ

وَلَقَدۡ نَصَرَکُمُ اللّٰہُ بِبَدۡرٍ وَّاَنۡتُمۡ اَذِلَّۃٌ

ಕನ್ನಡ
# ಬದರ್
ವಾರ ಪತ್ರಿಕೆ
WEEKLY BADAR QADIAN KANNADA

ವರ್ಷ: 05

ಸಂಚಿಕೆ: 37

ವಾರ್ಷಿಕ ಶುಲ್ಕ ರೂ.600/-

ಸಂಪಾದಕರು: ತಾರಿಖ್ ಅಹ್ಮದ್ ಇದ್ರೀಸ್.

**12 ಸೆಪ್ಟೆಂಬರ್ 2024, 12 ತಬೂಕ್ 1403 ಹಿಜರಿ ಶಮ್‌ಸಿ,**
**08 ರಬೀಉಲ್ ಅವ್ವಲ್ 1445 ಹಿಜರಿ ಖಮರಿ.**

## ಅಹ್ಮದಿಯಾ ವಾರ್ತೆ

ಅಲ್‌ಹಮ್ದುಲಿಲ್ಲಾಹ್! ಹುಝೂರ್ ಅನ್ವರ್ ಅಯ್ಯದಹುಲ್ಲಾಹುತಆಲ ಬಿನಸ್ರಿಹಿಲ್ ಅಝೀಝ್‌ರವರು ಆರೋಗ್ಯವಾಗಿದ್ದಾರೆ. ಹುಝೂರ್ ರವರ ಯೋಗಕ್ಷೇಮಕ್ಕಾಗಿ, ಶುಭಕಾರ್ಯಗಳಲ್ಲಿ ಯಶಸ್ಸುಗಳಿಸಲಿಕ್ಕಾಗಿ ದುಆ ಮಾಡುತ್ತಾ ಇರಿ, ಅಲ್ಲಾಹನು ಹುಝೂರ್ ರವರನ್ನು ಪ್ರತಿಕ್ಷಣ ಸಂರಕ್ಷಿಸಲಿ- **ಆಮೀನ್**

اَللّٰھُمَّ اَیِّدۡ اِمَامَنَا بِرُوۡحِ الۡقُدُسِ
وَبَارِکۡ لَنَا فِیۡ عُمُرِہٖ وَاَمۡرِہٖ

## ಅಲ್ಲಾಹನ ಉಪದೇಶ

یُثَبِّتُ اللّٰہُ الَّذِیۡنَ اٰمَنُوۡا بِالۡقَوۡلِ
الثَّابِتِ فِی الۡحَیٰوۃِ الدُّنۡیَا وَفِی الۡاٰخِرَۃِ ۚ
وَیُضِلُّ اللّٰہُ الظّٰلِمِیۡنَ ۟ۙ وَیَفۡعَلُ اللّٰہُ مَا
یَشَآءُ ۝ (سورہ ابراہیم، آیت 28)

**(ಸೂರಃ ಇಬ್ರಾಹೀಂ : 28)**

**ಅಂದರೆ: ಅಲ್ಲಾಹನು ಸತ್ಯವಿಶ್ವಾಸಿಗಳಿಗೆ ಐಹಿಕ ಜೀವಿತದಲ್ಲೂ ಪರಲೋಕದಲ್ಲೂ ಸ್ಥಿರವಾದ ವಚನ ಮೂಲಕ ಶಕ್ತಿ ನೀಡುತ್ತಾನೆ. ದುಷ್ಕರ್ಮಿಗಳನ್ನು ಅಲ್ಲಾಹನು ದಾರಿತಪ್ಪಲು ಬಿಟ್ಟುಬಿಡುತ್ತಾನೆ. ಅಲ್ಲಾಹನು ತಾನು ಬಯಸಿದಂತೆ ಮಾಡುತ್ತಾನೆ.**

## ಪ್ರವಾದಿ ಮುಹಮ್ಮದ್(ಸ) ರವರ ಉಪದೇಶ

**ಓರ್ವ ಮುಸ್ಲಿಮನು ಇನ್ನೋರ್ವ ಮುಸ್ಲಿಮನ ಸಹೋದರನಾಗಿದ್ದಾನೆ, ಅವನನ್ನು ಹಿಂಸಿಸಬಾರದು ಮತ್ತು ಅವನನ್ನು ಕ್ರೂರಿಗೆ ಒಪ್ಪಿಸಬಾರದು.**

**(2442)** ಹಝ್ರತ್ ಅಬ್ದುಲ್ಲ ಬಿನ್ ಉಮರ್(ರ) ವರದಿ ಮಾಡುತ್ತಾರೆ: ರಸೂಲುಲ್ಲಾಹ್ (ಸ) ನುಡಿದರು: ಓರ್ವ ಮುಸ್ಲಿಮನು ಇನ್ನೋರ್ವ ಮುಸಲ್ಮಾನನ ಸಹೋದರನಾಗಿದ್ದಾನೆ, ಅವನನ್ನು ಹಿಂಸಿಸಬಾರದು ಮತ್ತು ಅವನನ್ನು ಕ್ರೂರಿಗೆ ಒಪ್ಪಿಸಬಾರದು. ಯಾವ ವ್ಯಕ್ತಿ ತನ್ನ ಸಹೋದರನ ಕೆಲಸದಲ್ಲಿ ತೊಡಗಿರುವವನು. ಅಲ್ಲಾಹನು ಅವನ ಕೆಲಸದಲ್ಲಿ ತೊಡಗುತ್ತಾನೆ. ಯಾರು ಒಬ್ಬ ಮುಸ್ಲಿಮನ ನೋವನ್ನು ದೂರ ಮಾಡುವನು ಅಲ್ಲಾಹನು ಪುರುತ್ಥಾನದ ದಿನ ಅವನ ನೋವು ದೂರ ಮಾಡುವನು, ಯಾರು ಒಬ್ಬ ಮುಸ್ಲಿಮನ ಪಾಪಗಳನ್ನು ಮುಚ್ಚುವನು, ಅಲ್ಲಾಹನು ಸಹ ಪುನರುತ್ತಾನದ ದಿನ ಅವನ ಪಾಪಗಳನ್ನು ಮುಚ್ಚುವನು.

**(2444)** ಹಝ್ರತ್ ಅನಸ್(ರ) ವರದಿ ಮಾಡುತ್ತಾರೆ, ರಸೂಲುಲ್ಲಾಹ್ (ಸ) ನುಡಿದರು: ತನ್ನ ಸಹೋದರನಿಗೆ ಸಹಾಯ ನೀಡಿ, ಅವನು ಕ್ರೂರಿಯಾಗಿರಲಿ ಅಥವಾ ಹಿಂಸೆಗೆ ಒಳಗಾಗಲಿ, ಸಹಾಬರು ಹೇಳಿದರು: ಯಾ ರಸೂಲಲ್ಲಾಹ್(ಸ)! ನಾವು ತುಳಿತಕ್ಕೊಳಗಾದವರಿಗೆ ಸಹಾಯ ಮಾಡುತ್ತೇವೆ, ಆದರೆ ಅವನು ಕ್ರೂರಿಯಾಗಿದ್ದರೆ ನಾವು ಅವನಿಗೆ ಹೇಗೆ ಸಹಾಯ ಮಾಡಬಹುದು. ಅದಕ್ಕೆ ಹಝ್ರತ್ ಪೈಗಂಬರ್(ಸ) ಹೇಳಿದರು: ಅವನ ಕೈಗಳನ್ನು ದಬ್ಬಾಳಿಕೆ ಮಾಡುವುದರಿಂದ ತಡೆಯಿರಿ. **(ಸಹೀಹ್ ಬುಖಾರಿ, ಸಂಪುಟ-4, ಕಿತಾಬುಲ್ ಮಝಾಲಿಮ್, ಮುದ್ರಣ 2008 ಖಾದಿಯಾನ್)**

'ಬದರ್' ವಾರಪತ್ರಿಕೆಯನ್ನು **Online** ಮುಖಾಂತರ ಓದಲು ಸಂಪರ್ಕಿಸಿ ನಮ್ಮ ವೆಬ್‌ಸೈಟ್: **https://akhbarbadr.in/Kannada/#gsc.tab=0**

## ಧರ್ಮದ ಬಗ್ಗೆ ಕಳಜಿಯು ದೊಡ್ಡ ವಿಷಯವಾಗಿದೆ ಅದು ಮರಣ ಅವಸ್ಥೆಯಲ್ಲಿಯೂ ಸಹ ಉನ್ನತ ಸ್ಥಾನ ಲಭಿಸುವಂತೆ ಮಾಡುತ್ತದೆ

### ಸಯ್ಯದುನಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಅಧ್ಯಾಪನೆಗಳು

ಝುಹ್ರ್ ನಂತರ ಅಸರ್ ಸಮಯದವರೆಗೆ ಬದುಕಿರುತ್ತೇವೆ ಎಂದು ಯಾರಿಗಾದರೂ ತಿಳಿದಿದೆಯೇ? ಕೆಲವೊಮ್ಮೆ ಇದ್ದಕ್ಕಿದ್ದಂತೆ ರಕ್ತಸ್ರಾವ ನಿಲ್ಲುತ್ತದೆ ಮತ್ತು ಜೀವ ಕಳೆದುಕೊಳ್ಳುತ್ತದೆ. ಕೆಲವೊಮ್ಮೆ ಒಳ್ಳೆಯ ಆರೋಗ್ಯವಂತರು ಸಾಯುತ್ತಾರೆ. ವಝೀರ್ ಮುಹಮ್ಮದ್ ಹಸನ್ ಖಾನ್ ಸಾಹೇಬರು ವಾಯು ವಿಹಾರಕ್ಕಾಗಿ ಬಂದಿದ್ದರು ಮತ್ತು ಸಂತೋಷದಿಂದ ಮೆಟ್ಟಿಲುಗಳನ್ನು ಹತ್ತಲು ಪ್ರಾರಂಭಿಸಿದರು. ಒಂದೆರಡು ಮೆಟ್ಟಿಲು ಏರಲಿಲ್ಲ ತಲೆಸುತ್ತು ಬಂದಾಗ ಕುಳಿತಿದರು. ನಾನು ಸಹಾಯ ಮಾಡಲೇ? ಎಂದು ಸೇವಕನು ಹೇಳಿದನು? ಇಲ್ಲ ಬೇಡ ಎಂದು ಹೇಳಿದರು. ಆಮೇಲೆ ಪುನಃ ಎರಡ್ಮೂರು ಮೆಟ್ಟಿಲು ಹತ್ತಿದ್ದು, ಈ ತಲೆತಿರುಗುವಿಕೆಯಿಂದ ತಲೆ ಸುತ್ತಿ ಸಾವನ್ನಪ್ಪಿದರು. ಅದೇ ರೀತಿ ಗುಲಾಮ್ ಮೊಹಿಯುದ್ದೀನ್ ಕೋಟ್ಲಿ ಕಾಶ್ಮೀರದ ಸದಸ್ಯ ಹಠಾತ್ ನಿಧನರಾದರು. ಆದ್ದರಿಂದ, ಸಾವು ಯಾವಾಗ ಬರುತ್ತದೆ ಎಂದು ನಮಗೆ ತಿಳಿದಿಲ್ಲ. ಅದಕ್ಕಾಗಿಯೇ ಅದರಿಂದ ಅಜಾಗರೂಕರಾಗಿರಬಾರದು ಎಂಬುದು ಮುಖ್ಯವಾಗಿದೆ. ಹಾಗಾಗಿ ಧರ್ಮದ ಬಗ್ಗೆ ಕಾಳಜಿವಹಿಸುವುದು ದೊಡ್ಡ ವಿಷಯವಾಗಿದೆ, ಅದು ಮರಣದ ಸಮಯವು ಕಾಪಾಡಿ ಉನ್ನತ ಸ್ಥಾನ ಲಭಿಸುವಂತೆ ಮಾಡುತ್ತದೆ. ಪವಿತ್ರ ಖುರ್‌ಆನ್ ಹೇಳುತ್ತದೆ: **ಇನ್ನ ಝುಲ್‌ಝುಲತಸ್ಸಾಅತಿ ಶೈಉನ್ ಅಝೀಮ್** (ಅಲ್‌ಹಜ್ಜ್: 2) ಸಾಅತ್ (ಸಮಯವನ್ನು) ಅಂತ್ಯ ತೀರ್ಮಾನ ದಿನ ಎಂದು ಅರ್ಥೈಸಲಾಗಿದೆ, ಅದನ್ನು ನಾವು ನಿರಾಕರಿಸುವುದಿಲ್ಲ, ಆದರೆ ಇದು ಸಂಪೂರ್ಣ ನಿಲುಗಡೆಯ ಸಮಯವಾದ್ದರಿಂದ ಅದು ಸಾವು ಎಂದರ್ಥ. ಒಬ್ಬ ವ್ಯಕ್ತಿಯು ತನ್ನ ಪ್ರೀತಿಯ ಮತ್ತು ಇಷ್ಟಾರ್ಥಗಳಿಂದ ಇದ್ದಕ್ಕಿದ್ದಂತೆ ಬೇರ್ಪಡುತ್ತಾನೆ ಮತ್ತು ವಿಚಿತ್ರ ರೀತಿಯ ಕಂಪನವು ಅವನಲ್ಲಿ ಉಂಟಾಗುತ್ತದೆ. ಅವನು ಒಳಗಿಂದೊಳಗೆ ಒಬ್ಬರ ಹಿಡಿತದಲ್ಲಿದ್ದೇನೆ ಎಂಬ ಅನುಭವ ಅವನಿಗಾಗುತ್ತದೆ. ಆದ್ದರಿಂದ ಮನುಷ್ಯನ ಏಕೈಕ ಸಂತೋಷವೆಂದರೆ ಅವನು ಸಾವಿನ ಬಗ್ಗೆ ಕಾಳಜಿ ವಹಿಸಬೇಕು ಮತ್ತು ಈ ಪ್ರಪಂಚ ಮತ್ತು ಅದರ ವಸ್ತುಗಳು ಅವನ ಪ್ರೀತಿಪಾತ್ರರಾಗಿರಬಾರದು ಮತ್ತು ಈ ಕೊನೆಯ ಸಮಯದಲ್ಲಿ ಪ್ರತ್ಯೇಕತೆಯ ಸಮಯದಲ್ಲಿ ಅವನಿಗೆ ದುಃಖವನ್ನು ಉಂಟುಮಾಡುತ್ತದೆ.

ಪವಿತ್ರ ಖುರ್‌ಆನ್ ಈ ವಿಷಯವನ್ನು ಈ ವಚನದ ಮೂಲಕ ವ್ಯಕ್ತಪಡಿಸಿದೆ: **ಇನ್ನಮಾ ಅಮ್ವಾಲುಕುಮ್ ವ ಔಲಾದುಕುಮ್ ಫಿತ್ನತುನ್** (ಅಲ್‌ಅನ್‌ಫಾಲ್: 29) **ಅಮ್ವಾಲುಕುಮ್** ನಲ್ಲಿ ಮಹಿಳೆಯರು ಸೇರಿದ್ದಾರೆ. ಸ್ತ್ರೀಯು ಪರದಯಲ್ಲಿರುವುದರಿಂದ ಆಕೆಯ ಹೆಸರು ಸಹ ಪರದದಲ್ಲಿಯೇ ಇಡಲಾಗಿದೆ. ಆದ್ದರಿಂದಲೇ ಪುರುಷನು ಸ್ತ್ರೀಯನ್ನು ಸಂಪತ್ತು ಖರ್ಚು ಮಾಡಿ ಕರೆತರುತ್ತಾನೆ. "ಮಾಲ್" ಎಂಬ ಪದವು "ಮಾಎಲ್" ನಿಂದ ಬಂದಿದೆ. ಅಂದರೆ, ಅವನು ಸ್ವಾಭಾವಿಕವಾಗಿ ಆಕರ್ಷಣೆಯ ಕಡೆಗೆ ವಾಲುತ್ತಾನೆ, ಸ್ತ್ರೀಯ ಕಡೆಯು ಸ್ವಾಭಾವಿಕವಾಗಿ ಗಮನ ಹರಿಸುವುದರಿಂದ ಆಕೆಯನ್ನು ಸಂಪತ್ತಿಗೆ ಸೇರಿಸಲಾಗಿದೆ... ಆದ್ದರಿಂದ ಸಂಪತ್ತು ಎಂದರೆ **ಕುಲ್ಲ ಮಾ ಯಮೀಲು ಇಲೈಹಿಲ್ ಖಲ್ಬುನ್** ಎಂದಾಗಿದೆ. ಮಕ್ಕಳನ್ನು ಉಲ್ಲೇಖಿಸಲಾಗಿದೆ ಏಕೆಂದರೆ ಮನುಷ್ಯನು ಮಕ್ಕಳನ್ನು ಯಕೃತ್ತಿನ ತುಂಡು ಮತ್ತು ಅವನ ಉತ್ತರಾಧಿಕಾರಿ ಎಂದು ಪರಿಗಣಿಸುತ್ತಾನೆ.

**(ಮಲ್‌ಫೂಝಾತ್, ಸಂಪುಟ-2, ಪುಟ-29, ಆವೃತ್ತಿ 2018, ಖಾದಿಯಾನ್)**

## ಜಗತ್ತಿನಲ್ಲಿ ಪ್ರತಿಯೊಂದಕ್ಕೂ ಏನಾದರೂ ಪ್ರಯೋಜನವಿದೆ, ಯಾವುದೂ ನಿಷ್ಪ್ರಯೋಜಕವಲ್ಲ

ದುರದೃಷ್ಟವಶಾತ್, ಮುಸ್ಲಿಮರು ಈ ಆದೇಶದಿಂದ ಪ್ರಯೋಜನ ಪಡೆಯುವುದನ್ನು ನಿಲ್ಲಿಸಿದರು ಮತ್ತು ಸಂಶೋಧನೆ ಮತ್ತು ಆವಿಷ್ಕಾರದ ಕೆಲಸವನ್ನು ನಿರ್ಲಕ್ಷಿಸಿದರು.

ಸಯ್ಯಿದುನಾ ಹಝ್ರತ್ ಮುಸ್ಲೆಹ್ ಮೌಊದ್(ರ) ಅವರು ಸೂರಾ ಅಲ್-ಕಹಫ್, ಆಯತ್-8 **ಇನ್ನಾ ಜಅಲ್‌ನಾ ಮಾ ಅಲಲ್ ಅರ್ಝಿ ಝೀನತಲ್ಲಹಾ ಲಿನಬ್ಲುವಹುಮ್ ಅಯ್ಯುಹುಮ್ ಅಹ್ಸನು ಅಮಲಾ** ದ ವ್ಯಾಖ್ಯಾನದಲ್ಲಿ

*(ಪುಟ ಸಂಖೆ 09 ರಲ್ಲಿ ಮುಂದುವರಿಸಲಾಗಿದೆ)*

# ಖುತ್‌ಬ ಜುಮುಅ

ಕಳೆದ ವಾರ ಜಲ್ಸ ಸಾಲಾನ ಯು.ಕೆ. ಅಲ್ಲಾಹನ ಅನುಗ್ರಹಗಳ ದೃಶ್ಯಗಳನ್ನು ತೋರಿಸುತ್ತಾ ಮುಕ್ತಾಯಗೊಂಡಿತು. ಈ ಮೂರು ದಿನಗಳು ಅನುಗ್ರಹೀತ ದಿನಗಳಾಗಿದ್ದುವು. ಅದು ನಮ್ಮ ಮೇಲೂ ಅನ್ಯ ಜನರ ಮೇಲೂ ಒಂದು ಸಕಾರಾತ್ಮಕ ಪ್ರಭಾವ ಬೀರಿತು.

ಮೊದಲು ಕಾರ್ಯಕರ್ತರಿಗೆ ಧನ್ಯವಾದಗಳನ್ನು ಅರ್ಪಿಸಲು ಬಯಸುತ್ತೇನೆ. ಅವರು ಜಲ್ಸಕ್ಕೆ ಮೊದಲು, ಜಲ್ಸ ಜರಗುವಾಗ ಮತ್ತು ಜಲ್ಸದ ನಂತರ ಸಹ ಅದರ ಏರ್ಪಾಡುಗಳನ್ನು ಮಾಡಲು ಮತ್ತು ಅದನ್ನು ಮುಕ್ತಾಯಗೊಳಿಸಲು ತಮ್ಮ ಪಾತ್ರವನ್ನು ವಹಿಸಿದರು ಮತ್ತು ಈಗಲೂ ವಹಿಸುತ್ತಿದ್ದಾರೆ. ಅಲ್ಲಾಹನ ಅನುಗ್ರಹದಿಂದ ಜಮಾಅತಿನ ಮಹಿಳೆಯರು, ಪುರುಷರು ಮತ್ತು ಮಕ್ಕಳಲ್ಲಿ ಎಂತಹ ಗುಣವಿದೆ ಎಂದರೆ ಅದನ್ನು ಅನ್ಯರು ಕೂಡ ಹೊಗಳುತ್ತಾರೆ. ಇದು ಸ್ವಯಂ ಸೇವಕರು ತಮ್ಮ ಕರ್ತವ್ಯಗಳನ್ನು ನಿರ್ವಹಿಸುತ್ತಾ ಮಾಡುವ ಮೌನವಾದ ತಬ್ಲೀಗ್ ಆಗಿರುತ್ತದೆ.

ಜಲ್ಸದ ಕಾರ್ಯಕ್ರಮಗಳು ಅತ್ಯುತ್ತಮವಾಗಿ ತಲುಪಿತು ಎಂದು ಹೇಳಿ ಲೋಕದ ವಿವಿಧ ದೇಶಗಳಲ್ಲಿ ಕುಳಿತುಕೊಂಡಿರುವ ಜನರು ಸಹ ಧನ್ಯವಾದಗಳನ್ನು ಅರ್ಪಿಸುತ್ತಿದ್ದಾರೆ. ನಾನು ಸಹ ಅವರಿಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಈ ವರ್ಷ ಬ್ರಿಟನಿನ ಕಾರ್ಯಕರ್ತರಲ್ಲದೇ ಮೊರಿಶಿಯಸ್‌ನಿಂದಲೂ ಮೊದಲ ಬಾರಿ ದೊಡ್ಡ ಸಂಖ್ಯೆಯಲ್ಲಿ ಖುದ್ದಾಮ್ ಮತ್ತು ಕಾರ್ಯಕರ್ತರು ಬಂದರು ಮತ್ತು ಬಹಳ ಉತ್ತಮವಾಗಿ ಕೆಲಸ ಮಾಡಿದರು. ಕೆನಡದಿಂದ ಖುದ್ದಾಮ್ ಬಂದಿರುವರು. ಅವರು ಮುಕ್ತಾಯ ಕೆಲಸದಲ್ಲಿ ಸಹಾಯ ಮಾಡುತ್ತಿದ್ದಾರೆ. ಅಲ್ಲಾಹನು ಅವರೆಲ್ಲರಿಗೂ ಪ್ರತಿಫಲ ನೀಡಲಿ.

ಇದು ಸತ್ಯ ಜಮಾಅತ್ ಮತ್ತು ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಜಮಾಅತ್ ಆಗಿದೆ ಎಂಬ ನನ್ನ ನಂಬಿಕೆ ಈ ಜಲ್ಸದಲ್ಲಿ ಭಾಗವಹಿಸಿ ದೃಢವಿಶ್ವಾಸವಾಗಿ ಮಾರ್ಪಾಡಾಗಿದೆ. ನಾವು ನಮ್ಮ ಪೈಗಂಬರ್(ಸ)ರ ಕರೆಗೆ ಓಗೊಟ್ಟು ಹಝ್ರತ್ ಮಸೀಹ್ ಮೌಊದ್(ಅ)ರನ್ನು ನಂಬದಿದ್ದರೆ ನಾವು ದಾರಿ ತಪ್ಪಿ ಹೋಗುವೆವು. (ಇಸ್ಮಾಈಲ್ ಬೇಲಿನ್, ಫ್ರೆಂಚ್ ಗಿಯಾನಾ)

ಜಗತ್ತಿನ ನೂರಕ್ಕೂ ಹೆಚ್ಚು ದೇಶಗಳ ಜನರು ಒಂದೆಡೆ ಸೇರಿದರೆ ಅನೇಕ ವಿಷಯಗಳು ವಿಭಿನ್ನವಾಗಿ ಕಾಣುತ್ತವೆ, ಹಲವು ಸಮಸ್ಯೆಗಳು ಉದ್ಭವಿಸಬಹುದು, ಆದರೆ ಇಲ್ಲಿ ಪ್ರತಿಯೊಬ್ಬರ ನೈತಿಕತೆ ಮತ್ತು ವರ್ತನೆಗಳು ಒಂದೇ ಆಗಿದ್ದವು. (ಯೂಶೀದ್ ಸಾಹಿಬ್, ಜಾಪಾನ್)

ಖಲೀಫರ ಭಾಷಣಗಳನ್ನು ಆಲಿಸಿ ನನ್ನೊಳಗೆ ಆಧ್ಯಾತ್ಮಿಕ ಬದಲಾವಣೆಯನ್ನು ಕಾಣುತ್ತಿದ್ದೇನೆ ಮತ್ತು ಆ ಭಾವನೆಗಳೊಂದಿಗೆ ನಾನು ಹಿಂದಿರುಗುತ್ತಿದ್ದೇನೆ. ಇಲ್ಲಿ ನಮಾಝ್ ನಿರ್ವಹಿಸುವುದರಿಂದ ನನ್ನ ಮನಸ್ಸಿನಲ್ಲಿ ಶಾಂತಿ ನೆಲೆಸಿದೆ. (ಅಝೀಝ್ ನಝೀರ್ ಸಾಹಿಬ್ ಕೊಸೋವೊ)

ನಾನು ನಿಮ್ಮ ಜಮಾಅತ್ತಿನ ಸದಸ್ಯರಿಗೆ ವಗ್ದಾನ ನೀಡುತ್ತೇನೆ: ನಾನು ನನ್ನ ಸಂಪೂರ್ಣ ಪಾತ್ರವನ್ನು ನಿರ್ವಹಿಸುತ್ತೇನೆ ಮತ್ತು ನನ್ನ ಪ್ರಭಾವದಲ್ಲಿರುವ ಜನರಿಗೆ ನನ್ನ ವೈಯಕ್ತಿಕ ಅನುಭವಗಳನ್ನು ತೋರಿಸುತ್ತೇನೆ, ಅಹ್ಮದಿಯರು ಕೇವಲ ಮುಸ್ಲಿಮರಲ್ಲ ಬದಲಿಗೆ ಅವರು ಅತ್ಯುತ್ತಮ ಮತ್ತು ಆದರ್ಶ ಮುಸ್ಲಿಮರಾಗಿದ್ದಾರೆ.

ಜಮಾಅತ್ ಮಾಡುತ್ತಿರುವಂತೆ ಜಗತ್ತಿನಲ್ಲಿರುವ ಪ್ರತಿಯೊಬ್ಬರೂ ಮಾನವೀಯತೆಯ ಬಗ್ಗೆ ಹೆಚ್ಚಿನ ಅರಿವು, ಜಾಗೃತಿ ಮತ್ತು ಸಹಾನುಭೂತಿ ಮೂಡಿಸಿದರೆ, ಖಂಡಿತವಾಗಿಯೂ ಜಾಗತಿಕ ಸಮಸ್ಯೆಗಳನ್ನು ಪರಿಹರಿಸಬಹುದು. (ಮಿಸಸ್ ಪೆಟ್ರೋಷಿ, ಹಾಲೆಂಡ್)

**ಜಲ್ಸ ಸಾಲಾನ ಬ್ರಿಟನ್‌ನ ಸಂದರ್ಭದಲ್ಲಿ ನಿಸ್ವಾರ್ಥರಾಗಿ ಸೇವೆಸಲ್ಲಿಸಿದ ಕಾರ್ಯಕರ್ತರರಿಗೆ ಧನ್ಯವಾದಗಳನ್ನು ಅರ್ಪಿಸುವ ಪ್ರಸ್ತಾವನೆ ಹಾಗೂ ಜಲ್ಸದಲ್ಲಿ ಭಾಗವಹಿಸಿದ ಕೆಲವು ಗಣ್ಯ ವ್ಯಕ್ತಿಗಳ ಅನಿಸಿಕೆಗಳ ಪ್ರಸ್ತಾವನೆ**

ಅನಿಸಿಕೆಗಳನ್ನು ಹೇಳುವವರ ಹೃದಯಗಳನ್ನು ಅಲ್ಲಾಹನು ತೆರೆಯಲಿ ಮತ್ತು ಅವರು ಅಹ್ಮದಿಯ್ಯತಿನ ಸಂದೇಶದ ಯಥಾರ್ಥ ಅರ್ಥವನ್ನು ಮನವರಿಕೆ ಮಾಡುವವರಾಗಲಿ. ಅದೇ ರೀತಿಯಲ್ಲಿ ಹಝ್ರತ್ ಮಸೀಹ್ ಮೌಊದ್(ಅ)ರ ಆಗಮನದ ಉದ್ದೇಶವನ್ನು ನಾವು ಗಳಿಸುವವರಾಗಲಿ. ಅನಂತರ ಈ ಮೂರು ದಿನಗಳಲ್ಲಿ ಮಾತ್ರವಲ್ಲ, ಬದಲಾಗಿ ಅವುಗಳನ್ನು ತಮ್ಮ ಜೀವಿತಗಳ ಭಾಗವನ್ನಾಗಿ ನಾವು ಮಾಡುವವರಾಗಲಿ.

ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಇಸ್ಲಾಮಾಬಾದ್ (ಯು.ಕೆ) ಯ **'ಮಸ್ಜಿದ್ ಮುಬಾರಕ್'** ನಿಂದ **02-08-2024** ರಂದು ನೀಡಿದ **ಖುತ್‌ಬ ಜುಮುಅ**

أَشْهَدُ أَنْ لَّا إِلٰهَ إِلَّا اللّٰهُ وَحْدَهُ لَا شَرِيْكَ لَهُ وَأَشْهَدُ أَنَّ مُحَمَّدًا عَبْدُهُ وَرَسُوْلُهُ

أَمَّا بَعْدُ فَأَعُوْذُ بِاللّٰهِ مِنَ الشَّيْطٰنِ الرَّجِيْمِ۔ بِسْمِ اللّٰهِ الرَّحْمٰنِ الرَّحِيْمِ

اَلْحَمْدُ لِلّٰهِ رَبِّ الْعٰلَمِيْنَ۔ اَلرَّحْمٰنِ الرَّحِيْمِ۔ مٰلِكِ يَوْمِ الدِّيْنِ۔

إِيَّاكَ نَعْبُدُ وَإِيَّاكَ نَسْتَعِيْنُ۔ اِهْدِنَا الصِّرَاطَ الْمُسْتَقِيْمَ۔

صِرَاطَ الَّذِيْنَ أَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ۔

ಅಲ್‌ಹಮ್ದುಲಿಲ್ಲಾಹ್, ಕಳೆದ ವಾರ ಜಲ್ಸ ಸಾಲಾನ ಯು.ಕೆ. ಅಲ್ಲಾಹನ ಅನುಗ್ರಹಗಳ ದೃಶ್ಯಗಳನ್ನು ತೋರಿಸುತ್ತಾ ಮುಕ್ತಾಯಗೊಂಡಿತು. ಈ ಮೂರು ದಿನಗಳು ಅನುಗ್ರಹೀತ ದಿನಗಳಾಗಿದ್ದುವು. ಅದು ನಮ್ಮ ಮೇಲೂ ಅನ್ಯ ಜನರ ಮೇಲೂ ಒಂದು ಸಕಾರಾತ್ಮಕ ಪ್ರಭಾವ ಬೀರಿತು. ನಾನು ಅನ್ಯರ ಕೆಲವು ಅನಿಸಿಕೆಗಳನ್ನು ಪ್ರಸ್ತಾಪಿಸುತ್ತೇನೆ. ಆದರೆ ಅದಕ್ಕಿಂತ ಮೊದಲು ಕಾರ್ಯಕರ್ತರಿಗೆ ಧನ್ಯವಾದಗಳನ್ನು ಅರ್ಪಿಸಲು ಬಯಸುತ್ತೇನೆ. ಅವರು ಜಲ್ಸಕ್ಕೆ ಮೊದಲು, ಜಲ್ಸ ಜರಗುವಾಗ ಮತ್ತು ಜಲ್ಸದ ನಂತರ ಸಹ ಅದರ ಏರ್ಪಾಡುಗಳನ್ನು ಮಾಡಲು ಮತ್ತು ಅದನ್ನು ಮುಕ್ತಾಯಗೊಳಿಸಲು ತಮ್ಮ ಪಾತ್ರವನ್ನು ವಹಿಸಿದರು ಮತ್ತು ಈಗಲೂ ವಹಿಸುತ್ತಿದ್ದಾರೆ. ಅಲ್ಲಾಹನ ಅನುಗ್ರಹದಿಂದ ಜಮಾಅತಿನ ಮಹಿಳೆಯರು, ಪುರುಷರು ಮತ್ತು ಮಕ್ಕಳಲ್ಲಿ ಎಂತಹ ಗುಣವಿದೆ ಎಂದರೆ ಅದನ್ನು

ಅನ್ಯರು ಕೂಡ ಹೊಗಳುತ್ತಾರೆ. ಇದು ಸ್ವಯಂ ಸೇವಕರು ತಮ್ಮ ಕರ್ತವ್ಯಗಳನ್ನು ನಿರ್ವಹಿಸುತ್ತಾ ಮಾಡುವ ಮೌನವಾದ ತಬ್ಲೀಗ್ ಆಗಿರುತ್ತದೆ. ಇದರಲ್ಲಿ ಜಲ್ಸದ ಎಲ್ಲ ವಿಭಾಗಗಳ ಕಾರ್ಯಕರ್ತರ ಮುಖ್ಯವಾದ ಪಾಲು ಇದೆ. ಅದು ಪ್ರವೇಶ ಮಾರ್ಗಗಳಲ್ಲಾಗಲೀ, ಗೇಟ್, ಚೆಕಿಂಗ್, ಪಾರ್ಕಿಂಗ್, ಊಟ ಬಡಿಸುವುದಾಗಿರಲೀ, ಅಡುಗೆ ಮಾಡುವುದಾಗಿರಲೀ ಅಥವಾ ಶುಚಿತ್ವವಾಗಿರಲೀ. ಮಕ್ಕಳು ಕುಡಿಯುವ ನೀರು ಸರಬರಾಜು ಮಾಡುವ ಅಥವಾ ಇತರ ಜಾಗಗಳಲ್ಲಾಗಲೀ ಕಾರ್ಯಕರ್ತರು ಅಚ್ಚುಕಟ್ಟಾಗಿ ಡ್ಯೂಟಿಗಳನ್ನು ನೀಡುತ್ತಿದ್ದರು. ಎಲ್ಲ ರೀತಿಯಲ್ಲೂ ಪ್ರತಿಯೊಂದು ವಿಭಾಗ ಬಹಳ ಸಕ್ರಿಯವಾಗಿತ್ತು ಮತ್ತು ಧನ್ಯವಾದಕ್ಕೆ ಅರ್ಹವಾಗಿದೆ. ಕೆಲವರು ಗಮನಿಸಬಹುದಾದ ಸಣ್ಣ ದೌರ್ಬಲ್ಯಗಳಿವೆ, ಆದರೆ ಅಂತಹ ದೊಡ್ಡ ವ್ಯವಸ್ಥೆಯಲ್ಲಿ ಅಂತಹ ದೌರ್ಬಲ್ಯಗಳನ್ನು ನಿರ್ಲಕ್ಷಿಸಬೇಕು. ಆದಾಗ್ಯೂ, ಇದು ಸ್ವಯಂ ಸೇವಕರು ತಮ್ಮ ಕರ್ತವ್ಯಗಳನ್ನು ನಿರ್ವಹಿಸುತ್ತಾ ಮಾಡುವ ಮೌನವಾದ ತಬ್ಲೀಗ್ ಆಗಿರುತ್ತದೆ ಮತ್ತು ಅನೇಕ ಜನರು ಈ ಕುರಿತು ಕಾರ್ಯಕರ್ತರ ಪರವಾಗಿ ಪ್ರಶಂಸನೀಯ ಮಾತುಗಳನ್ನು ಹೇಳುತ್ತಾರೆ, ಬರೆದು ಕಳುಹಿಸುತ್ತಾರೆ ಮತ್ತು ತಮ್ಮ ಅನಿಸಿಕೆಗಳನ್ನು ಕೂಡ ಬಿಟ್ಟು ಹೋಗುತ್ತಾರೆ. ಎಂ.ಟಿ.ಎ. ಮೂಲಕ ನಮಗೆ ಜಲ್ಸದ ಕಾರ್ಯಕ್ರಮಗಳು ಅತ್ಯುತ್ತಮವಾಗಿ ತಲುಪಿತು ಎಂದು ಹೇಳಿ ಲೋಕದ ವಿವಿಧ ದೇಶಗಳಲ್ಲಿ ಕುಳಿತುಕೊಂಡಿರುವ ಜನರು ಸಹ ಧನ್ಯವಾದಗಳನ್ನು ಅರ್ಪಿಸುತ್ತಿದ್ದಾರೆ. ನಾನು ಸಹ ಅವರಿಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಈ ವರ್ಷ ಬ್ರಿಟನಿನ ಕಾರ್ಯಕರ್ತರಲ್ಲದೇ ಮೊರಿಶಿಯಸ್‌ನಿಂದಲೂ ಮೊದಲ ಬಾರಿ ದೊಡ್ಡ ಸಂಖ್ಯೆಯಲ್ಲಿ ಖುದ್ದಾಮ್ ಮತ್ತು ಕಾರ್ಯಕರ್ತರು ಬಂದರು ಮತ್ತು ಬಹಳ ಉತ್ತಮವಾಗಿ ಕೆಲಸ ಮಾಡಿದರು. ಕೆನಡದಿಂದ ಖ಼ುದ್ದಾಮ್ ಬಂದಿರುವರು. ಅವರು ಮುಕ್ತಾಯ ಕೆಲಸದಲ್ಲಿ ಸಹಾಯ ಮಾಡುತ್ತಿದ್ದಾರೆ. ಅಲ್ಲಾಹನು ಅವರೆಲ್ಲರಿಗೂ ಪ್ರತಿಫಲ ನೀಡಲಿ.

ಈ ವರ್ಷ ಪ್ರೆಸ್ ಮತ್ತು ಮೀಡಿಯಾ ಪ್ರಸಾರ ಸಹ ಸಾಕಷ್ಟು ಆಗಿತ್ತು. ಟ್ರಾಫಿಕಿನ ವ್ಯವಸ್ಥೆ ಬಹಳ ಉತ್ತಮವಾಗಿತ್ತು. ನೆರೆಕರೆಯವರು ಕೂಡ ಸಂತೋಷದಿಂದ ಇದ್ದರು. ಕಳೆದ ವರ್ಷಕ್ಕಿಂತ ಈ ವರ್ಷ ಹಾಜರಿ ಕಡಿಮೆಯಿರುವ ಕಾರಣದಿಂದ ಇಷ್ಟು ಆರಾಮವಾಗಿ ಟ್ರಾಫಿಕ್ ಹೋಗುತ್ತಿತ್ತು ಎಂದು ಅವರು ಭಾವಿಸಿದ್ದರು. ಆದರೆ ಹಾಜರಿ ಕಳೆದ ವರ್ಷಕ್ಕಿಂತ ಎರಡು ಸಾವಿರದಷ್ಟು ಹೆಚ್ಚಾಗಿತ್ತು. ಇದನ್ನು ಅವರೊಡನೆ ಹೇಳಲಾದಾಗ ಅವರು ಆಶ್ಚರ್ಯಗೊಂಡರು. ಬಹಳ ಉತ್ತಮ ವ್ಯವಸ್ಥೆಯಾಗಿತ್ತು – ಮಾಶಾ ಅಲ್ಲಾಹ್. ಈ ಪ್ರದೇಶದ ಕೌನ್ಸಿಲರ್ ಅಹ್ಮದೀ ಮುಬಲ್ಲಿಗ್ ಆಗಿರುವರು. ಅವರು ಎಲ್ಲ ನೆರೆಕರೆಯವರೊಂದಿಗೆ ಉತ್ತಮ ಸಂಬಂಧ ಇರಿಸಿಕೊಂಡಿದ್ದರು ಮತ್ತು ಟ್ರಾಫಿಕ್ ಯೋಜನೆಯಲ್ಲಿ ಬಹಳ ಉತ್ತಮ ಪಾತ್ರವನ್ನು ವಹಿಸಿಕೊಂಡಿದ್ದರು. ಅಲ್ಲಾಹನು ಅವರಿಗೂ ಪ್ರತಿಫಲ ನೀಡಲಿ.

ಅನಿಸಿಕೆಗಳನ್ನು ಹೇಳುವವರ ಹೃದಯಗಳನ್ನು ಅಲ್ಲಾಹನು ತೆರೆಯಲಿ ಮತ್ತು ಅವರು ಅಹ್ಮದಿಯ್ಯತ್ತಿನ ಸಂದೇಶದ ಯಥಾರ್ಥ ಅರ್ಥವನ್ನು ಮನವರಿಕೆ ಮಾಡುವವರಾಗಲಿ. ಅದೇ ರೀತಿಯಲ್ಲಿ ಹಝ್ರ಼ತ್ ಮಸೀಹ್ ಮೌಊದ್(ಅ)ರ ಆಗಮನದ ಉದ್ದೇಶವನ್ನು ನಾವು ಗಳಿಸುವವರಾಗಲಿ. ಅನಂತರ ಈ ಮೂರು ದಿನಗಳಲ್ಲಿ ಮಾತ್ರವಲ್ಲ, ಬದಲಾಗಿ ಅವುಗಳನ್ನು ತಮ್ಮ ಜೀವಿತಗಳ ಭಾಗವನ್ನಾಗಿ ನಾವು ಮಾಡುವವರಾಗಲಿ.

ಫ್ರೆಂಚ್ ಗಿಯಾನಾದಿಂದ ಇಸ್ಮಾಯೀಲ್ ಸಾಹಿಬ್ ಜಲ್ಸದಲ್ಲಿ ಭಾಗವಹಿಸಿದ್ದರು. ಅವರು ಜಮಾಅತ್‌ನೊಂದಿಗೆ ಮುಂಚೆಯಿಂದಲೂ ಸಂಬಂಧವಿತ್ತು ಆದರೆ ಬೈಅತ್ ಮಾಡಿರಲಿಲ್ಲ. ಜಲ್ಸದ ವೇಳೆ ಅವರಿಗೆ ಬೈಅತ್ ಮಾಡುವ ಸೌಭಾಗ್ಯ ಸಹ ಲಭಿಸಿತು. ಅವರು ಹೇಳುತ್ತಾರೆ: ಲೋಕದ ಎಲ್ಲ ಮುಖ್ಯ ಭಾಷೆಗಳು ಮತ್ತು ವರ್ಗಗಳು ಒಟ್ಟುಗೂಡುವ ಇಂತಹ ಕಾರ್ಯಕ್ರಮವನ್ನು ನಾನು ನನ್ನ ಜೀವಿತದಲ್ಲಿ ಎಂದೂ ನೋಡಿಲ್ಲ. ಇದು ಸತ್ಯ ಜಮಾಅತ್ ಮತ್ತು ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಜಮಾಅತ್ ಆಗಿದೆ ಎಂಬ ನನ್ನ ನಂಬಿಕೆ ಈ ಜಲ್ಸದಲ್ಲಿ ಭಾಗವಹಿಸಿ ದೃಢವಿಶ್ವಾಸವಾಗಿ ಮಾರ್ಪಾಡಾಗಿದೆ. ನಾವು ನಮ್ಮ ಪೈಗಂಬರ್(ಸ)ರ ಕರೆಗೆ ಓಗೊಟ್ಟು ಹಝ್ರ಼ತ್ ಮಸೀಹ್ ಮೌಊದ್(ಅ)ರನ್ನು ನಂಬದಿದ್ದರೆ ನಾವು ದಾರಿ ತಪ್ಪಿ ಹೋಗುವೆವು. ಮುಂದೆ ಅವರು ಹೇಳುತ್ತಾರೆ: ಸರ್ವಶಕ್ತನಾದ ಅಲ್ಲಾಹನು ಈ ವಿನೀತನಿಗೆ ಮಾರ್ಗದರ್ಶನ ನೀಡಿದ್ದಾನೆ ಎಂದು ನನಗೆ ಖಾತ್ರಿಯಿದೆ ಮತ್ತು ಇಂದು ಮುಸ್ಲಿಮರು ಒಗ್ಗಟ್ಟಾಗಿರಬೇಕಾದರೆ ಅವರು ಅಹ್ಮದಿಯಾ ಜಮಾತ್‌ಗೆ ಸೇರ್ಪಡೆಯಾಗಬೇಕು ಮತ್ತು ಈ ಅನುಗ್ರಹದಾಯಕ ಜಮಾತ್‌ನಲ್ಲಿ ಖಲೀಫತ್‌ನೊಂದಿಗೆ ನಿಷ್ಠೆ ವ್ಯಕ್ತಪಡಿಸಬೇಕು. ಮತ್ತೆ ಅವರು ಹೇಳುತ್ತಾರೆ ಜಲ್ಸ ಸಾಲಾನದ ವ್ಯವಸ್ಥೆಯೂ ಅಪೂರ್ಣವಾಗಿತ್ತು. ಪ್ರತಿಯೊಬ್ಬ ಕಾರ್ಯಕರ್ತರು ಯಾವಾಗಲೂ ಮುಗುಳುನಗುತ್ತಿರುವಂತೆ ತೋರುತ್ತಿದ್ದರು ಮತ್ತು ಅವರ ಮುಖದಲ್ಲಿ ಯಾವುದೇ ಬೂಟಾಟಿಕೆ ಇರಲಿಲ್ಲ. ಪ್ರತಿಯೊಬ್ಬ ಕಾರ್ಯಕರ್ತನೂ ತುಂಬ ಸಂತೋಷದಿಂದ ಅತಿಥಿಗಳಿಗೆ ಸೇವೆ ನೀಡುತ್ತಿದ್ದರು. ನನಗೆ ಇಲ್ಲಿ ಯಾರ ಪರಿಚಯವೂ ಇರಲಿಲ್ಲ ಆದರೆ ಎಲ್ಲರೂ ಒಬ್ಬರಿಗೊಬ್ಬರು ವರ್ಷಗಟ್ಟಲೆಯಿಂದಲೂ ಪರಿಚಿತರಿರಬಹುದು ಎಂಬಂತೆ ಬಂದು ಸೇರುತ್ತಿದ್ದರು. ಜಲ್ಸಕ್ಕಿಂತ ಮುಂಚೆಯೇ, ನಾನು ಅನೇಕ ವರ್ಷಗಳಿಂದ ಮುಸ್ಲಿಮನಾಗಿದ್ದೆ, ನಾನು ಇಸ್ಲಾಮ್ ಧರ್ಮವನ್ನು ಸ್ವೀಕರಿಸಿದ್ದೆ ಮತ್ತು ಇಸ್ಲಾಮಿನ ನಿಯಮಗಳನ್ನು ಅನುಸರಿಸಲು ಪ್ರಯತ್ನಿಸುತ್ತಿದ್ದೆ, ಆದರೆ ನನಗೆ ಯಾವಾಗಲೂ ಏನಾದರೂ ಕಣ್ಮರೆಯಾಗಿದೆ ಎಂದು ಭಾವಿಸುತ್ತಿದ್ದೆ, ಆದರೆ ಈ ಜಲ್ಸದಲ್ಲಿ ಸೇರಿದ ನಂತರ, ನನ್ನ ಆ ಕಣ್ಮರೆಯಾದ ವಸ್ತು ನನಗೆ ಲಭಿಸಿದೆ ಎಂದು ನಾನು ಭಾವಿಸಿದೆ.

ಜಪಾನಿನಿಂದ ಬಂದ ಬುದ್ಧ ಧರ್ಮದ ಚೀಫ್ ಪ್ರೀಸ್ಟ್ ಹೇಳುತ್ತಾರೆ: "ನಾವು ಜಲ್ಸಾದ ಎಲ್ಲಾ ಅಧಿವೇಶನಗಳಲ್ಲಿ ಭಾಗವಹಿಸಿದ್ದೇವೆ. ನನ್ನ ಪತ್ನಿ ಕೂಡ ಮಹಿಳೆಯರ ಮಾರ್ಕ್ಯೂಗೆ ಹೋಗಿದ್ದಳು. ನಾವು ಪ್ರದರ್ಶನಗಳನ್ನು ಸಹ ಭೇಟಿ ಮಾಡಿ ಸ್ವಲ್ಪ ಸಮಯ ಬಜಾರ್‌ಗೆ ಹೋದೆವು. ಸೇವೆ ಸಲ್ಲಿಸಿದ ಸ್ವಯಂಸೇವಕರು ಶ್ರದ್ಧೆ ಮತ್ತು ಎಚ್ಚರದಿಂದ ಕಾಣುತ್ತಿರುವುದು ಎಲ್ಲೆಡೆ ಆದರ್ಶಪ್ರಾಯವಾಗಿತ್ತು. ಮೊದಲ ದಿನದಿಂದ ಕೊನೆಯ ದಿನದ ಕೊನೆಯ ಕ್ಷಣದ ವರೆಗೆ ಕಾರ್ಯಕರ್ತರ ಆವೇಶ ಮತ್ತು ಉತ್ಸಾಹ ಸ್ಥಾಯಿಯಾಗಿ ನೆಲೆನಿಂತಿತ್ತು. ಜಲ್ಸದಲ್ಲಿ ಸೇರಿದ್ದ ಅಹ್ಮದಿ ಗೆಳೆಯರು ಕೂಡ ತುಂಬಾ ಆತಿಥ್ಯ ಮತ್ತು ಸ್ನೇಹಪರರಾಗಿದ್ದರು. ಜಗತ್ತಿನ ನೂರಕ್ಕೂ ಹೆಚ್ಚು ದೇಶಗಳ ಜನರು ಒಂದೆಡೆ ಸೇರಿದರೆ ಅನೇಕ ವಿಷಯಗಳು ವಿಭಿನ್ನವಾಗಿ ಕಾಣುತ್ತವೆ, ಹಲವು ಸಮಸ್ಯೆಗಳು ಉದ್ಭವಿಸಬಹುದು, ಆದರೆ ಇಲ್ಲಿ ಪ್ರತಿಯೊಬ್ಬರ ನೈತಿಕತೆ ಮತ್ತು ವರ್ತನೆಗಳು ಒಂದೇ ಆಗಿದ್ದವು. ಯಾರನ್ನಾದರೂ ಎಲ್ಲಿ ತಡೆದರೂ ಅವರು ಅಲ್ಲಿಯೇ ನಿಲ್ಲುತ್ತಿದ್ದರು ಮತ್ತು ನಮಾಝ್‌ಗಾಗಿ ಜಲ್ಸಗಾಗಿ ಕರೆದರೂ ತಡಮಾಡದೆ ಅವರು ಅಲ್ಲಿಗೆ ತಲುಪುತ್ತಿದ್ದರು. ಈ ಜಲ್ಸಾದ ದೃಶ್ಯ ನಮ್ಮ ಪಾಲಿಗೆ ಅವಿಸ್ಮರಣೀಯ ಎನ್ನುತ್ತಾರೆ. ಈ ಚೀಫರು ನನ್ನನ್ನು ಸಹ ಭೇಟಿಯಾಗಿದ್ದರು. ನಾನು ಅವರೊಡನೆ ಹೀಗೆ ಹೇಳಿದೆ: ದೇವನೊಬ್ಬನೇ ಎಂದು ನಂಬುವುದು ಅವಶ್ಯಕ. ಇದರ ಬಗ್ಗೆ ಆಲೋಚನೆ ಮಾಡಿರಿ. ಅದಕ್ಕೆ ಅವರು ಹೀಗೆ ಪ್ರತಿಕ್ರಯಿಸಿದರು: ನಾನು ಬುದ್ಧ ಧರ್ಮಾವಲಂಬಿ ಆಗಿರುವ ಕಾರಣದಿಂದ ಸಾಂಪ್ರದಾಯಿಕವಾಗಿ ನನಗೆ ದೇವವಿಶ್ವಾಸವಿಲ್ಲ. ಆದರೆ ಈ ಪ್ರಪಂಚಕ್ಕೆ ಒಬ್ಬ ಸೃಷ್ಟಿಕರ್ತ, ಮಾಲಿಕ ಇದೆ ಎಂದು ನನ್ನ ಹೃದಯ ಹೇಳುತ್ತದೆ. ನಾವು ಅವನ ಸೃಷ್ಟಿಗಳಾಗಿದ್ದೇವೆ. ನಾವು ಆ ಸೃಷ್ಟಿಕರ್ತ ಮತ್ತು ಯಜಮಾನನಾದ ಪ್ರಭುವಿನ ಸಾಮಿಪ್ಯವನ್ನು ಗಳಿಸಬಹುದು ಎಂದು ಹೇಳಿದರು. ಹೇಗಿದ್ದರೂ ಅಲ್ಪಸ್ವಲ್ಪವಾಗಿಯಾದರೂ ಅವರಲ್ಲಿ ಅಲ್ಲಾಹನ ಕಡೆಗೆ ಹೆಜ್ಜೆ ಹಾಕುವ ಯೋಚನೆ ಉಂಟಾಗಿದೆ.

ಕೊಸೋವೋದಿಂದ ಓರ್ವ ಅತಿಥಿ ಅಝೀರ್ಝ್ ನಝೀರಿ ಸಾಹಿಬ್ ಆಗಮಿಸಿದ್ದರು. ಅವರು ಹೇಳುತ್ತಾರೆ: ನನಗೆ ಪ್ರಥಮ ಬಾರಿಗೆ ಜಲ್ಸದಲ್ಲಿ ಭಾಗವಹಿಸುವ ಅವಕಾಶ ಲಭಿಸಿದೆ. ಬಹಳ ಸಂತೋಷವಾಗಿದೆ. ಎಲ್ಲವೂ ಸುಸೂತ್ರವಾಗಿ ನಡೆಯುತ್ತಿತ್ತು. ವಿಶೇಷವಾಗಿ ಭಾಷಣಗಳು ಬಹಳ ಪ್ರಯೋಜನಕಾರಿಯಾಗಿದ್ದವು. ಖಲೀಫರ ಭಾಷಣಗಳನ್ನು ಆಲಿಸಿ ನನ್ನೊಳಗೆ ಆಧ್ಯಾತ್ಮಿಕ ಬದಲಾವಣೆಯನ್ನು ಕಾಣುತ್ತಿದ್ದೇನೆ ಮತ್ತು ಆ ಭಾವನೆಗಳೊಂದಿಗೆ ನಾನು ಹಿಂದಿರುಗುತ್ತಿದ್ದೇನೆ. ಇಲ್ಲಿ ನಮಾಝ್ ನಿರ್ವಹಿಸುವುದರಿಂದ ನನ್ನ ಮನಸ್ಸಿನಲ್ಲಿ ಶಾಂತಿ ನೆಲೆಸಿದೆ. ಅವರು ಹೇಳುತ್ತಾರೆ: ನನಗೆ ವಯಸ್ಸಾಗಿದೆ. ಮುಂದಿನ ವರ್ಷ ಮತ್ತೆ ಈ ಆಧ್ಯಾತ್ಮಿಕ ವಾತಾವರಣಕ್ಕೆ ಸೇರುವ ಅವಕಾಶ ಸಿಗಲಿ ಎಂದು ಪ್ರಾರ್ಥಿಸುತ್ತೇನೆ. ಈ ಪರಿಸರವು ನನ್ನಲ್ಲಿ ಇಸ್ಲಾಂ ಮತ್ತು ಅಹ್ಮದಿಯ್ಯತ್ತಿನ ಪ್ರೀತಿಯನ್ನು ತುಂಬಿದೆ. ನಾನು ಎಲ್ಲಿಗೆ ಹೋದರೂ ಅದನ್ನು ಖಂಡಿತವಾಗಿ ಪ್ರಸ್ತಾಪಿಸುತ್ತೇನೆ. ಅಹ್ಮದಿಯ್ಯತ್‌ನ ನಿಜವಾದ ಬೋಧನೆಗಳನ್ನು ಓದಲು ನಾನು ಜನರ ಗಮನವನ್ನು ಸೆಳೆಯುತ್ತೇನೆ. ಖಲೀಫರ ಸಮಾರೋಪ ಭಾಷಣೆ ಅದು ಪುರಾವೆಗಳಿಂದ ತುಂಬಿತ್ತು ಅದರ ಬಗ್ಗೆ ನಾನು ಖಂಡಿತವಾಗಿ ಹೇಳುತ್ತೇನೆ, ಏಕೆಂದರೆ ನಾನೇ ಸ್ವತಃ ಅದಕ್ಕೆ ಸಾಕ್ಷಿಯಾಗಿದ್ದೇನೆ. ಬೈಅತ್ ಮಾಡುವ ಮೊದಲು, ಬರ್ಷತಿನಾ ಎಂಬ ಪಟ್ಟಣದಲ್ಲಿ ಜಮಾಅತ್‌ನ ಮಿಷನ್ ಹೌಸ್ ಇದೆ. ಅದರ ಹತ್ತಿರ ಒಂದು ಅಂಗಡಿ ಇತ್ತು. ನಾನು ಆ ಅಂಗಡಿಗೆ ಹೋದಾಗಲೆಲ್ಲ ಮುಸಲ್ಮಾನನಾದ ಅಂಗಡಿಯ ಮಾಲಿಕನಿಗೆ ನಾನು ನಮಾಝ್ ನಿರ್ವಹಿಸಲು ಮಿಷನ್ ಹೌಸ್‌ಗೆ ಹೋಗಿದ್ದೆ ಎಂದು ತಿಳಿದಾಗ ಅವನು ಈ ಮಸೀದಿಗೆ ಹೋಗಬೇಡ ಇದು ಖಾದಿಯಾನಿಯರ ಮಸೀದಿಯಾಗಿದೆ ಅವರು ಹೊಸ ಪ್ರವಾದಿಯನ್ನು ಸೃಷ್ಟಿಸಿದ್ದಾರೆ. ಮತ್ತು ಆ ವ್ಯಕ್ತಿಯು ಹಝ್‌ರತ್ ಪೈಗಂಬರ್(ಸ) ಅವರನ್ನು ನಿಂದಿಸುತ್ತಾನೆ (ನೌಝುಬಿಲ್ಲಾಹ್) ಮತ್ತು ಇಸ್ಲಾಮ್ ಧರ್ಮದಲ್ಲಿ ಹೊಸತನಗಳನ್ನು ಸೃಷ್ಟಿಸಿದ್ದಾನೆ ಮತ್ತು ಇಸ್ಲಾಮಿನ ಬೋಧನೆಗಳನ್ನು ಬದಲಾಯಿಸಿದ್ದಾನೆ ಎಂದು ಹೇಳಿದನು. ಆದರೆ ನಾನು ನಮಾಝ್‌ಗೆ ಸತತವಾಗಿ ಬರುತ್ತಿದ್ದೆ ಮತ್ತು ಪ್ರಶ್ನೆಗಳಿಗೆ ಉತ್ತರಗಳನ್ನು ಪಡೆಯುತ್ತಿದ್ದೆ ಮತ್ತು ಅಲ್ಲಾಹನು ನನ್ನ ಹೃದಯವನ್ನು ಅಹ್ಮದಿಯತ್ತಿಗೆ

ಬೆಳಗಿಸಿದನು ಆದರೆ ಈಗ ಈ ಭಾಷಣವನ್ನು ಕೇಳಿದ ನಂತರ ನಾನು ಮತ್ತೊಮ್ಮೆ ಜಮಾಅತ್‌ನ ವಿರೋಧಿಗಳು ಹೇಗೆ ಜನರನ್ನು ಜಮಾಅತ್‌ನಿಂದ ದೂರವಿಡುತ್ತಾರೆ ಎಂದು ಅರಿತುಕೊಂಡೆ. ಆದಾಗ್ಯೂ, ನಾನು ಹಿಂತಿರುಗಿ ಈ ಜನರಿಗೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಬರಹಗಳಿಂದ ಉತ್ತರಿಸುತ್ತೇನೆ, ಈ ಸಂಬೋಧನೆಯನ್ನು ಅವರ ಮುಂದೆ ಇಡುತ್ತೇನೆ.

ಚಿಲಿಯ ಕೇಂದ್ರ ಸರ್ಕಾರದಲ್ಲಿ ಡೈರೆಕ್ಟರ್ ಆಫ್ ವರ್‌ಶಿಪ್ ಆಗಿ ಸೇವೆ ಮಾಡುತ್ತಿರುವ ಒಬ್ಬ ಅತಿಥಿ ಉಮರ್ ಗೈಬೂರ್ ಸಾಹಿಬ್ ಹೇಳುತ್ತಾರೆ: ಅಹ್ಮದಿಯಾ ಜಮಾತ್ ಬಗ್ಗೆ ದೇಶದಲ್ಲಿ ಸ್ಥಾಪಿತವಾದ ಮುಸ್ಲಿಂ ಸಂಘಟನೆಗಳ ಅಭಿಪ್ರಾಯವನ್ನು ನಾನು ಕೇಳಿದೆ ಮತ್ತು ಅವರೆಲ್ಲರೂ ನಕಾರಾತ್ಮಕ ಅನಿಸಿಕೆಗಳನ್ನು ವ್ಯಕ್ತಪಡಿಸಿದ್ದಾರೆ, ಅದರ ಸಾರಾಂಶವೆಂದರೆ ಅವರು ಮುಸ್ಲಿಮರಲ್ಲ. ಅವರು ಹೇಳುತ್ತಾರೆ: ಜಲ್ಸದಲ್ಲಿ ನಿಮ್ಮ ಖಲೀಫರನ್ನು ಭೇಟಿಯಾದೆ. ತದನಂತರ ನಾನು ನಿಮ್ಮ ಜಮಾಅತ್ತಿನ ಸದಸ್ಯರಿಗೆ ವಗ್ದಾನ ನೀಡುತ್ತೇನೆ: ನಾನು ನನ್ನ ಸಂಪೂರ್ಣ ಪಾತ್ರವನ್ನು ನಿರ್ವಹಿಸುತ್ತೇನೆ ಮತ್ತು ನನ್ನ ಪ್ರಭಾವದಲ್ಲಿರುವ ಜನರಿಗೆ ನನ್ನ ವೈಯಕ್ತಿಕ ಅನುಭವಗಳನ್ನು ತೋರಿಸುತ್ತೇನೆ, ಅಹ್ಮದಿಯರು ಕೇವಲ ಮುಸ್ಲಿಮರಲ್ಲ ಬದಲಿಗೆ ಅವರು ಅತ್ಯುತ್ತಮ ಮತ್ತು ಆದರ್ಶ ಮುಸ್ಲಿಮರಾಗಿದ್ದಾರೆ. ಅವರು ಹೇಳುತ್ತಾರೆ: ಚಿಲಿಯಲ್ಲಿ ನಿಮ್ಮ ಜಮಾಅತ್ ಅನ್ನು ಸ್ಥಾಪಿಸಲು ನಾನು ನನ್ನ ಕೈಲಾದಷ್ಟು ಪ್ರಯತ್ನಿಸುತ್ತೇನೆ. ಖಲೀಫರ ಮೊದಲ ದಿನದ ಭಾಷಣವು ನನಗೆ ವಿಶೇಷವಾಗಿ ಇಷ್ಟವಾಯಿತು, ಅದರಲ್ಲಿ ಅವರು ಶಿಸ್ತು ಮತ್ತು ಆಡಳಿತಾತ್ಮಕ ವಿಷಯಗಳ ಬಗ್ಗೆ ಪ್ರವಚನ ನೀಡಿದರು. ನಾನು ಅನೇಕ ಧಾರ್ಮಿಕ ಸಭೆಗಳಲ್ಲಿ ಭಾಗವಹಿಸಿದ್ದೇನೆ, ಆದರೆ ಸ್ವಯಂ ಆಡಳಿತದ ವ್ಯವಹಾರಗಳಲ್ಲಿ ಧಾರ್ಮಿಕ ಮುಖಂಡರನ್ನು ಮುನ್ನಡೆಸುವುದನ್ನು ನಾನು ನೋಡಿಲ್ಲ. ನಿಮ್ಮ ಖಲೀಫರು ಜಮಾತ್‌ನ ಆಧ್ಯಾತ್ಮಿಕ ಮತ್ತು ನೈತಿಕ ಸುಧಾರಣೆಗಾಗಿ ಮತ್ತು ಆಡಳಿತಾತ್ಮಕ ಸುಧಾರಣೆಗಾಗಿ ಶ್ರಮಿಸುತ್ತಿದ್ದಾರೆಂದು ತೋರಿಸುತ್ತದೆ ಏಕೆಂದರೆ ಈ ಧರ್ಮೋಪದೇಶವನ್ನು ಕೇಳಿ ನನಗೆ ತುಂಬಾ ಆಶ್ಚರ್ಯ ಮತ್ತು ಸಂತೋಷವಾಯಿತು.

ಹಾಲೆಂಡ್‌ನ ಮಹಿಳೆಯೊಬ್ಬರು ಶ್ರೀಮತಿ ಪೆಟ್ರೀಷಿಯಾ ಹೇಳುತ್ತಾರೆ: ಮೊದಲನೆಯದಾಗಿ, ಜಲ್ಸಾ ಯುಕೆ 2024 ರಲ್ಲಿ ನಿಮ್ಮ ಆತಿಥ್ಯಕ್ಕಾಗಿ ನಾನು ನಿಮಗೆ ಧನ್ಯವಾದ ಹೇಳಲು ಬಯಸುತ್ತೇನೆ ಮತ್ತು ಹಲವಾರು ಜನರು, ಪ್ರಪಂಚದ ವಿವಿಧ ಭಾಗಗಳಿಂದ ಬಂದಿದ್ದರು ಮತ್ತು ಸಹೋದರತ್ವದ ಅದ್ಭುತ ಪ್ರದರ್ಶನವಿತ್ತು. ಇಂಡೋನೇಷ್ಯಾದಿಂದ ಹಿಡಿದು ಅಮೆರಿಕದವರೆಗಿನ ದೇಶಗಳ ಜನರಿದ್ದರು. ಪೀಸ್ ವಾಕ್, ಪೀಸ್ ಕಾನ್ಫರೆನ್ಸ್ ಮುಂತಾದ ನಿಮ್ಮ ಕೂಟಗಳಲ್ಲಿ ನಾನು ಸೇರುತ್ತೇನೆ ಎಂದು ಅವರು ಹೇಳುತ್ತಾರೆ. ಈಗ ಈ ಜಲ್ಸದಲ್ಲಿ ಭಾಗವಹಿಸುವುದು ನನ್ನ ಮುಂದಿನ ಹೆಜ್ಜೆಯಾಗಿದೆ. ಪ್ರತಿನಿತ್ಯ ಸಾವಿರಾರು ಪಾಲ್ಗೊಳ್ಳುವವರನ್ನು ನಿಭಾಯಿಸುವುದು ಮತ್ತು ಗ್ರಾಮವನ್ನು ಸ್ಥಾಪಿಸುವುದು ಮತ್ತು ಎಲ್ಲಾ ಲಾಜಿಸ್ಟಿಕ್ಸ್ ಮತ್ತು ಎಲ್ಲಾ ಸೌಲಭ್ಯಗಳನ್ನು ಒಳಗೊಂಡಂತೆ ಅದನ್ನು ನಿರ್ಮಿಸುವುದನ್ನು ನಾನು ಇಲ್ಲಿ ನೋಡಿದೆ. ಅಪಾರ ಸಂಖ್ಯೆಯಲ್ಲಿ ಜನರು ಪರಸ್ಪರ ಸಹಕಾರ ನೀಡುತ್ತಿರುವುದು ಕಂಡು ಬಂತು. ಯಾವುದೇ ಸಾಲುಗಳು ಇರಲಿಲ್ಲ. ಜನರು ಒಟ್ಟಾಗಿ ಸ್ವಚ್ಛಗೊಳಿಸುತ್ತಿದ್ದರು. ಜಲ್ಸವನ್ನು ಸಾಧ್ಯವಾಗಿಸಿದ ಸಂಪೂರ್ಣ ಸಿಬ್ಬಂದಿ ತಂಡ ಮತ್ತು ಸ್ವಯಂಸೇವಕರ ತಂಡಕ್ಕೆ ಅಭಿನಂದನೆಗಳು. ಯುವ ವಿದ್ಯಾರ್ಥಿಗಳು ಮತ್ತು ಪ್ರತಿಯೊಬ್ಬರೂ ಸಣ್ಣ ಕಾರ್ಯಗಳಲ್ಲಿ ತೊಡಗಿಸಿಕೊಂಡಿರುವುದು, ದೊಡ್ಡ ಉದ್ದೇಶಕ್ಕೆ ಕೊಡುಗೆ ನೀಡುವುದನ್ನು ನೋಡಲು ಯಾವಾಗಲೂ ಸಂತೋಷವಾಗುತ್ತದೆ. ವಿವಿಧ ಸೆಷನ್‌ಗಳಲ್ಲಿ ಭಾಗವಹಿಸುವ ಮೂಲಕ ಶಾಂತಿಯುತ ಶಕ್ತಿಯನ್ನು ಅನುಭವಿಸಿದೆ ಎಂದು ಅವರು ಹೇಳುತ್ತಾರೆ, ವಿಶೇಷವಾಗಿ ಜಾಗತಿಕ ಬೈಅತ್ ಅಧಿವೇಶನ, ಇದು ತನ್ನ ಜೀವನದುದ್ದಕ್ಕೂ ನೆನಪಿನಲ್ಲಿ ಉಳಿಯುತ್ತದೆ. ಜಮಾಅತ್ ಮಾಡುತ್ತಿರುವಂತೆ ಜಗತ್ತಿನಲ್ಲಿರುವ ಪ್ರತಿಯೊಬ್ಬರೂ ಮಾನವೀಯತೆಯ ಬಗ್ಗೆ ಹೆಚ್ಚಿನ ಅರಿವು, ಜಾಗೃತಿ ಮತ್ತು ಸಹಾನುಭೂತಿ ಮೂಡಿಸಿದರೆ, ಖಂಡಿತವಾಗಿಯೂ ಜಾಗತಿಕ ಸಮಸ್ಯೆಗಳನ್ನು ಪರಿಹರಿಸಬಹುದು ಎಂದು ಅವರು ಹೇಳುತ್ತಾರೆ.

ಅರ್ಜೆಂಟೀನಾದ ರಾಷ್ಟ್ರೀಯ ಆರಾಧನಾ ಕಾರ್ಯದರ್ಶಿಯನ್ನು ಪ್ರತಿನಿಧಿಸಿದ ಅರ್ಜೆಂಟೀನಾದ ಅತಿಥಿ ಶ್ರೀ ತೋಮಸ್ ರಾಂಡಲ್ ಅವರು ಹೇಳುತ್ತಾರೆ: ಎಷ್ಟು ಉತ್ತಮವಾಗಿ ಮತ್ತು ಶಿಸ್ತಿನಿಂದ ನೀವು ಇಷ್ಟು ದೊಡ್ಡ ಜನಕೂಟದ ವ್ಯವಸ್ಥೆ ಮಾಡಿದ್ದೀರಿ ಎಂಬುವುದಾಗಿ ನಿಮ್ಮ ಜಮಾಅತಿನ ಜಲ್ಸವನ್ನು ನಾನು ಆಸೂಯೆಯ ದೃಷ್ಟಿಯಿಂದ ನೋಡಿದೆ. ಇದು ನಮ್ಮ ದೇಶದಲ್ಲಿ ಅಸಾಧ್ಯ. ಮಹಿಳೆಯರನ್ನು ಸಂಬೋಧಿಸಿ ಖ಼ಲೀಫರು ಮಾಡಿದ ಭಾಷಣ ನನಗೆ ಇಷ್ಟವಾಯಿತು. ಸಮಾಜದ ಒತ್ತಡ ಮತ್ತು ಪಾಶ್ಚಿಮಾತ್ಯ ಲೋಕದ ಪ್ರಭಾವ ಇದ್ದು ಕೂಡ ನೀವು ಸುದೃಢವಾಗಿ ನಿಮ್ಮ ತತ್ವಗಳಲ್ಲಿ ನೆಲೆಯೂರಿ ನಿಂತಿದ್ದೀರಿ. ಅವರು ಹೇಳುತ್ತಾರೆ, ನಾನು ಕ್ರೈಸ್ತ ಮತಕ್ಕೆ ಸೇರಿದ್ದೇನೆ ನಾನು ಸಂಪೂರ್ಣ ವಿಷಯಗಳನ್ನು ಒಪ್ಪುವುದಿಲ್ಲ ಆದರೆ ವಿಶೇಷವಾಗಿ ಕುಟುಂಬ ಜೀವನಕ್ಕೆ ಸಂಬಂಧಿಸಿದ ಸಮಸ್ಯೆಗಳು ಮುಸ್ಲಿಮೇತರನಾಗಿ ನನಗೆ ತುಂಬಾ ಉಪಯುಕ್ತವಾಗಿವೆ.

ತೈವಾನ್‌ನ ಅತಿಥಿ ಡಾ. ಕ್ರಿಸ್ಟಿ ಚಾಂಗ್ ಸಾಹಿಬಾ, ವಿಮಾನ ನಿಲ್ದಾಣದಿಂದ ನಮಗೆ ಉತ್ತಮ ಸ್ವಾಗತ ಲಭಿಸಿತು ಎಂದು ಹೇಳುತ್ತಾರೆ. ನಮ್ಮನ್ನು ತುಂಬಾ ಆತಿಥ್ಯದಿಂದ ನಡೆಸಿಕೊಳ್ಳಲಾಯಿತು ಮತ್ತು ನಂತರ ನಾವು ಜಲ್ಸಾದಲ್ಲಿ ಸೇರಲು ಹೋದೆವು, ಅಲ್ಲಿ ಸಾವಿರಾರು ಸ್ವಯಂಸೇವಕರು ಕೆಲಸ ಮಾಡುವುದನ್ನು ನಾವು ನೋಡಿದ್ದೇವೆ. ನನ್ನ ಆಶ್ಚರ್ಯಕ್ಕೆ ಕೊನೆಯೇ ಇರಲಿಲ್ಲ. ಪ್ರಪಂಚದ ಹಲವು ದೇಶಗಳಲ್ಲಿ ನಡೆದ ದೊಡ್ಡ ಸಮ್ಮೇಳನಗಳಲ್ಲಿ ನಾನು ಭಾಗವಹಿಸಿದ್ದೇನೆ, ಆದರೆ ಸ್ವಯಂಸೇವಕರು ಆಯೋಜಿಸಿದ ಅಂತಹ ದೊಡ್ಡ ಸಮ್ಮೇಳನವನ್ನು ನಾನು ನೋಡಿಲ್ಲ ಎಂದು ಅವರು ಹೇಳುತ್ತಾರೆ. ಲಜ್ನಾ ಅವರನ್ನು ಉದ್ದೇಶಿಸಿದ ಭಾಷಣದಲ್ಲಿ, ಖಲೀಫರು ಅಹ್ಮದಿ ಹುಡುಗಿಯರ ಜೀವನವನ್ನು ನಡೆಸುವ ಅತ್ಯಂತ ಸುಂದರವಾದ ಮಾರ್ಗಗಳನ್ನು ಸಹ ಬೋಧಿಸಿದರು. ಈ ಭಾಷಣದ ಸಮಯದಲ್ಲಿ, ನಾನು ಹುಡುಗಿಯರ ಅಭಿವ್ಯಕ್ತಿಗಳನ್ನು ಗಮನಿಸುತ್ತಿದ್ದೆ. ಹುಡುಗಿಯರು ಈ ಸಲಹೆಗಳನ್ನು ಕೇಳುತ್ತಿದ್ದ ಗಮನವು ಅಹ್ಮದಿ ಹುಡುಗಿಯರು ಮತ್ತು ಯುವ ಪೀಳಿಗೆ ಅವರ ಖಲೀಫಾವನ್ನು ಪ್ರೀತಿಸುತ್ತಾರೆ ಎಂದು ತೋರಿಸಿದೆ. ನಾನು ಮೊದಲ ಬಾರಿಗೆ ಇಮಾಮ್ ಅವರನ್ನು ಭೇಟಿಯಾಗುತ್ತಿದ್ದೆ, ನಮ್ಮ ಭೇಟಿಯು ಅತ್ಯಂತ ಔಪಚಾರಿಕ ರೀತಿಯಲ್ಲಿ ನಡೆಯುತ್ತದೆ, ನಾವು ಅನೇಕ ರೀತಿಯ ಸಮಸ್ಯೆಗಳನ್ನು ಮತ್ತು ಸೂಚನೆಗಳನ್ನು ಎದುರಿಸುತ್ತೇವೆ ಎಂದು ಭಾವಿಸಿದ್ದೆ, ಆದರೆ ನಮ್ಮ ಎಲ್ಲಾ ಮಾತುಕತೆಗಳು ಅತ್ಯಂತ ಅನೌಪಚಾರಿಕ ರೀತಿಯಲ್ಲಿ ನಡೆಯಿತು. ಪ್ರಸ್ತುತ ಪರಿಸ್ಥಿತಿ, ತೈವಾನ್‌ನ ಬಗ್ಗೆಯೂ ಅವರು ವಿಚಾರಿಸಿದರು, ಆದರೆ ನಾವು ಇಮಾಮ್‌ರ ಪ್ರಶ್ನೆಗಳಿಗೆ ಉತ್ತರಿಸುವುದರಲ್ಲಿ ಮುಳುಗಿದ್ದೆವು, ನಮಗೆ ಏನನ್ನೂ ಕೇಳಲು ಅವಕಾಶವೇ ಲಭಿಸಲಿಲ್ಲ. ಆದಾಗ್ಯೂ, ಜಲ್ಸವು ಅವರ ಮೇಲೆ ಸಕಾರಾತ್ಮಕ ಪರಿಣಾಮ ಬೀರಿತು.

ತೈವಾನ್‌ನ ಇನ್ನೊಬ್ಬ ಅತಿಥಿ ಡಾ. ಫ್ರಾಂಕ್ ಹೇಳುತ್ತಾರೆ: ಅವರು ಸುದೀರ್ಘ ಪ್ರಯಾಣದ ನಂತರ ಈ ಸಮ್ಮೇಳದಲ್ಲಿ ಭಾಗವಹಿಸಿದ್ದರು. ತೈವಾನ್‌ನಿಂದ ಪ್ರಯಾಣಿಸಿದ ನಂತರ, ನಾವು ಬೀಜಿಂಗ್‌ಗೆ ಬಂದೆವು ಮತ್ತು ತೈವಾನ್‌ನಲ್ಲಿ ಭೂಕಂಪ ಸಂಭವಿಸಿದ್ದರಿಂದ ನಮ್ಮ ವಿಮಾನವು ರದ್ದಾಯಿತು, ಆದರೂ ನಾವು ಪ್ರಯಾಣ ಮಾಡಿದೆವು, ಸುರಕ್ಷಿತವಾಗಿ ಬಂದಿದ್ದೇವೆ ಮತ್ತು ನಮ್ಮ ಪ್ರವಾಸವು ಪವಾಡ ಎಂದು ನಾವು ಭಾವಿಸಿದೆವು. ಅವರು ಹೇಳುತ್ತಾರೆ: ಜಲ್ಸದಲ್ಲಿ ಸೇರಿದ ನಂತರ ಇದು ಅಲ್ಲಾಹನ ವಿಧಿಯಾಗಿದೆ ಎಂದು ಭಾವಿಸಿದ್ದೆವು. ಜಲ್ಸದ ಉದ್ಘಾಟನಾ ಭಾಷಣದಲ್ಲಿ ಅಹ್ಮದಿಯಾ ಜಮಾಅತ್ತಿನ ಇಮಾಮರು ಇದು ಲೌಕಿಕ ಸಭೆಯಲ್ಲ ಬದಲಿಗೆ ಆಧ್ಯಾತ್ಮಿಕ ಸಭೆಯಾಗಿದೆ ಎಂದು ಹೇಳಿದಾಗ, ಮೇಲ್ನೋಟಕ್ಕೆ ಕಷ್ಟಕರವಾದ ಸಂದರ್ಭಗಳ ನಡುವೆಯೂ ಅಲ್ಲಾಹನು ನಮಗೆ ಜಲ್ಸದಲ್ಲಿ ಭಾಗವಹಿಸಲು ಅವಕಾಶವನ್ನು ನೀಡಿದ ರೀತಿಯಲ್ಲಿ ನನ್ನ ವಿಶ್ವಾಸವು ಇನ್ನಷ್ಟು ದೃಢವಾಯಿತು. ಇದು ದೇವರ ಕೊಡುಗೆ ಮತ್ತು ಪವಾಡದ ಫಲಿತಾಂಶವಾಗಿದೆ. ಅವರು ಹೇಳುತ್ತಾರೆ: ತೈವಾನ್‌ನಿಂದ ಜಲ್ಸಕ್ಕೆ ಸೇರುವ ಜನರಲ್ಲಿ ನಾವು ದಂಪತಿಗಳು ಮೊದಲಾಗಿದ್ದೇವೆ. ಅಹ್ಮದಿಯಾ ಜಮಾಅತ್ ಅತ್ಯಂತ ಶಾಂತಿಯುತ ಮತ್ತು ಸುಸಂಘಟಿತ ಮತ್ತು ನೈತಿಕ ಜಮಾಅತ್ ಎಂದು ನಮ್ಮ ದೇಶವಾಸಿಗಳಿಗೆ ತಿಳಿಸುವ ಪ್ರತಿಜ್ಞೆಯೊಂದಿಗೆ ನಾವು ಈ ಜಲ್ಸಾದಿಂದ ಹಿಂತಿರುಗುತ್ತಿದ್ದೇವೆ ಮತ್ತು ಮುಂದಿನ ವರ್ಷಗಳಲ್ಲಿ ಜಲ್ಸಾ ಸಲಾನದಲ್ಲಿ ಹೆಚ್ಚಿನ ಅತಿಥಿಗಳನ್ನು ಸೇರಲು ನಾವು ಪ್ರೋತ್ಸಾಹಿಸುತ್ತೇವೆ.

ಕೆನಡಾದಿಂದ ಬಂದ ಇರಾನ್ ಮೂಲದ ಅತಿಥಿ ಇವರು ನನಗೆ ಯಾಸೀನ್ ಅಹ್ಮದಿ ಸಾಹಿಬರಂತೆ ಭಾಸವಾಗುತ್ತದೆ. ಅವರು ತತ್ವಶಾಸ್ತ್ರದಲ್ಲಿ ಪಿಎಚ್‌ಡಿ ಹೊಂದಿದ್ದಾರೆ. ಪತ್ರಕರ್ತರೂ ಆಗಿದ್ದಾರೆ. ಅವರು ಹೇಳುತ್ತಾರೆ: ಅಹ್ಮದೀಯ ಜಲ್ಸಾ ಸಾಲಾನವನ್ನು ಧರ್ಮದ ರೂಪದಲ್ಲಿ ಯುಕ್ತಿ ಮತ್ತು ಬುದ್ಧಿಶಕ್ತಿಯ ಭವ್ಯವಾದ ಪ್ರದರ್ಶನವಾಗಿದೆ ಎಂದು ನಾನು ಕಂಡುಕೊಂಡೆ. ಜಲ್ಸಾ ಸಾಲಾನದ ಉತ್ಸಾಹವು ಮುಸ್ಲಿಮರಲ್ಲಿ ಸಮಾನತೆಯ ಸಂಕೇತಗಳಿಂದ ತುಂಬಿತ್ತು. ನಾನು ಈ ಜಲ್ಸದಲ್ಲಿ ಭಾಗವಹಿಸಿದಾಗ, ಮುಸ್ಲಿಮರು ಓಣ ಮತ್ತು ಹೊಂದಿಕೊಳ್ಳದ ಧಾರ್ಮಿಕ ವ್ಯಾಖ್ಯಾನಗಳಿಂದ ದೂರ ಸರಿಯುತ್ತಿದ್ದಾರೆ ಮತ್ತು ಭೂಮಿಯ ಮೇಲೆ ವಾಸಿಸುವ ಮಾನವರ ಬಗ್ಗೆ ಸಹಾನುಭೂತಿಯ ಮುಕ್ತ ದಿಗಂತಕ್ಕೆ ಮರಳುತ್ತಿದ್ದಾರೆ ಎಂದು ನಾನು ಮೊದಲ ಕ್ಷಣದಿಂದಲೇ ಭಾವಿಸಿದೆ. ಜಮಾಅತ್ ಅನ್ನು ನೋಡುವಾಗ, ಅಹ್ಮದೀಯರ ಇಸ್ಲಾಮಿನ ಬೋಧನೆಗಳ ಘನತೆ ಮತ್ತು ತಾಳ್ಮೆ ಮತ್ತು ಮಧ್ಯಮ ವ್ಯಾಖ್ಯಾನವು ಶತಮಾನಗಳ ಧಾರ್ಮಿಕ ರಕ್ತಪಾತ ಮತ್ತು ಹಿಂಸಾಚಾರದ ನಂತರ ದೈವಿಕ ಸೂಚನೆಗಳ ನೆರಳಿನಲ್ಲಿ ಭದ್ರತೆ ಮತ್ತು ಶಾಂತಿಯುತ ಜೀವನದ ಭರವಸೆಯಾಗಿದೆ ಎಂದು ನಾನು ಅರಿತುಕೊಂಡೆ.

ಆಧುನಿಕ ನಾಗರಿಕತೆಯೊಂದಿಗೆ ಅಹ್ಮದಿಯತ್ತಿನ ಬೋಧನೆಗಳ ಸಮನ್ವಯತೆಯು ಸ್ಪಷ್ಟವಾಗಿ ಹೈಲೈಟ್ ಮಾಡಲಾದ ಸುಂದರವಾದ ಅಂಶಗಳಲ್ಲಿ ಒಂದಾಗಿದೆ. ಅಹ್ಮದೀಯ ಜಮಾಅತ್‌ನ ವಿಚಾರಗಳು ಮುಸ್ಲಿಮರಲ್ಲಿ ಮತ್ತು ಭೂಮಿಯ ಮೇಲೆ ವಾಸಿಸುವ ಇತರ ಜನರಲ್ಲಿ ಹೆಚ್ಚು ಹೆಚ್ಚು ವೈಭವಯುತವಾಗಿ ಮತ್ತು ವೇಗವಾಗಿ ಹರಡಲಿ ಎಂದು ನಾನು ಭಾವಿಸುತ್ತೇನೆ ಇದರಿಂದ ಪ್ರತಿಯೊಬ್ಬರೂ ಮೋಕ್ಷ, ಸಮೃದ್ಧಿ ಮತ್ತು ಯಶಸ್ವಿ ಜೀವನವನ್ನು ಅನುಭವಿಸಬಹುದು.

ಬೆಲೀರ್ಝ್‌ನಿಂದ ಆಗಮಿಸಿದ್ದ ಅತಿಥಿಯೊಬ್ಬರು ರೊನಾಲ್ಡ್ ಹೈಡ್ ಹೇಳುತ್ತಾರೆ. ಬೈಅತ್ ಸಮಾರಂಭದಲ್ಲಿ ಅವರು ತಮ್ಮ ಭಾವನೆಗಳನ್ನು ವ್ಯಕ್ತಪಡಿಸಲು ಸಾಧ್ಯವಿಲ್ಲ. ಅವರು ಅಲ್ಲಾಹನ ಉಪಸ್ಥಿತಿಯನ್ನು ಅನುಭವಿಸುತ್ತಿದ್ದರು. ಅವರು ಹೇಳುತ್ತಾರೆ: ಅನೇಕ ಪುರುಷರು ಯಾವುದೇ ಪ್ರಾಪಂಚಿಕ ಕಾಳಜಿಯಿಲ್ಲದೆ ಜೋರಾಗಿ ಅಳುತ್ತಿದ್ದರು ಮತ್ತು ಅಲ್ಲಾಹನ ಕ್ಷಮೆಗಾಗಿ ಪ್ರಾರ್ಥಿಸುತ್ತಿದ್ದರು. ಬೈಅತ್‌ನ ಈ ಅನುಭವವು ಅವರ ಜೀವನದ ಮೇಲೆ ಆಳವಾದ ಪ್ರಭಾವವನ್ನು ಬೀರಿದೆ. ಯಾವುದೇ ಮದ್ಯ ಅಥವಾ ಸಂಗೀತವಿಲ್ಲದೆ ಇಷ್ಟು ದೊಡ್ಡ ಸಭೆ ಮತ್ತು ಇಷ್ಟು ದೊಡ್ಡ ಸಂಖ್ಯೆಯ ಜನರನ್ನು ನೋಡುವುದು ನಿಜಕ್ಕೂ ಆಶ್ಚರ್ಯಕರವಾಗಿತ್ತು ಮತ್ತು ಪ್ರತಿಯೊಬ್ಬರೂ ಆಧ್ಯಾತ್ಮಿಕತೆಯನ್ನು ವರ್ಧಿಸಿಕೊಳ್ಳಲು ಬಯಸುತ್ತಿದ್ದಾರೆ ಎಂದು ನೋಡುವುದು ನಿಜವಾಗಿಯೂ ಪ್ರಶಂಸನೀಯವಾಗಿದೆ. ಇದು ನಿಜವಾಗಿಯೂ ಜೀವನವನ್ನು ಬದಲಾಯಿಸುವ ಅನುಭವವಾಗಿತ್ತು. ಕೇವಲ ಡ್ಯುಟಿ ನಿರ್ವಹಿಸುವವರಷ್ಟೇ ಅಲ್ಲ, ಬದಲಿಗೆ ಭಾಗವಹಿಸುವವರನ್ನು ನೋಡಿ ಪ್ರಭಾವಿತರಾಗುತ್ತಾರೆ ಮತ್ತು ಇದು ಆ ಜನರಿಗೆ ಮೌನ ತಬ್ಲೀಗ್ ಆಗಿದೆ.

ಬೊಲಿವಾದ ಮುಬಲ್ಲಿಗ್ ಹೇಳುತ್ತಾರೆ: ಕಾರ್ಲೋಸ್ ಹ್ಯೂಗೋ ಸಾಹಿಬ್ ಮೂರನೇ ಬಾರಿಗೆ ಜಲ್ಸಕ್ಕೆ ಬಂದಿದ್ದಾರೆ ಮತ್ತು ಸ್ವಲ್ಪ ಕಾಲದಿಂದ ಇಸ್ಲಾಂ ಧರ್ಮದ ಬೋಧನೆಗಳನ್ನು ಅಧ್ಯಯನ ಮಾಡುತ್ತಿದ್ದಾರೆ. ಒಂದು ತಿಂಗಳ ಮಿಂಚೆ ಅವರು ಬೈಅತ್ ಮಾಡಿದರು ಮತ್ತು ಜಲ್ಸಾ ಸಾಲಾನದಲ್ಲಿ, ಅವರಿಗೆ ಜಾಗತಿಕ ಬೈಅತ್ ಸಮಾರಂಭದಲ್ಲಿ ಭಾಗವಹಿಸುವ ಅವಕಾಶವ ಲಭಿಸಿತು. ಅವರು ಹೇಳುತ್ತಾರೆ: ಜಲ್ಸಾ ಸಾಲಾನ ಯುಕೆ ನನ್ನ ಜೀವನದ ಪ್ರಮುಖ ಆಧ್ಯಾತ್ಮಿಕ ಅನುಭವವಾಗಿದೆ. ಜಾಗತಿಕ ಬೈಅತ್ ಸಮಾರಂಭಕ್ಕೆ ಸೇರಿದ ನಂತರ ನನ್ನ ಹೃದಯ ಮತ್ತು ಆತ್ಮವು ಆಧ್ಯಾತ್ಮಿಕತೆಯಿಂದ ತುಂಬಿದೆ ಎಂದು ನಾನು ಭಾವಿಸುತ್ತೇನೆ ಮತ್ತು ನಾನು ನಿಜವಾದ ಅಹ್ಮದಿಯಾಗಿದ್ದೇನೆ. ಅವರು ಓರ್ವ ನಸ ಅಹ್ಮದಿಯಾಗಿ ಹೇಳುತ್ತಾರೆ: ಖಲೀಫರು ನನಗೆ ಬಹಳ ಎಚ್ಚರಿಕೆಯಿಂದ ನಮಾಝ್ ನಿರ್ವಹಿಸಲು ಮತ್ತು ದೇವರೊಂದಿಗೆ ದೃಢಸಂಬಂಧವನ್ನು ಬೆಳೆಸಲು ಮತ್ತು ಪವಿತ್ರ ಖುರ್‌ಆನ್ ಓದಲು ಜಮಾಅತ್ ಬೊಲಿವಿಯಾದಲ್ಲಿ ಅಹ್ಮದೀಯರನ್ನು ಪ್ರೋತ್ಸಾಹಿಸಲು ಸಲಹೆ ನೀಡಿದರು. ಅವರು ಹೇಳುತ್ತಾರೆ: ನಾನು ಸ್ವತಃ ಅದನ್ನು ಅನುಸರಿಸುತ್ತೇನೆ ಮತ್ತು ತಿಳಿಸುತ್ತೇನೆ.

ಉರುಗ್ವೆಯ ಅಹ್ಮದಿಯೇತರ ಅತಿಥಿ ಮಾರಿಯಾ ಸೋಲಸ್ ಫ್ರಾಂಕೊ ಸಾಹಿಬ ಹೇಳುತ್ತಾರೆ: ಜಲ್ಸ ಸಾಲಾನವು ನನ್ನ ನಿರೀಕ್ಷೆಗಿಂತ ಉತ್ತಮವಾಗಿತ್ತು. ಮೊದಲನೆಯದಾಗಿ, ಅತಿಥಿಗಳಿಗಾಗಿ ವಸತಿಯ ವ್ಯವಸ್ಥೆಯು ಮಾದರಿಯಾಗಿತ್ತು. ಭಾಷಣಗಳು ಆಕರ್ಷಕವಾಗಿದ್ದವು. ಮೊದಲ ಅಧಿವೇಶನ ನನ್ನ ನೆಚ್ಚಿನದಾಗಿತ್ತು. ಎಲ್ಲರಿಗೂ ಪ್ರೀತಿ ಮತ್ತು ಯಾರನ್ನೂ ದ್ವೇಷಿಸಬೇಡಿ ಎಂಬ ಸಂದೇಶವನ್ನು ವಿಸ್ತರಿಸುವುದು ಮತ್ತು ಹರಡುವುದು ಬಹಳ ಮುಖ್ಯ. ಒಟ್ಟಾರೆ ವಾತಾವರಣದಲ್ಲಿ ಸಮುದಾಯದ ಆಹ್ಲಾದಕರ ಪ್ರಜ್ಞೆಯನ್ನು ನಾನು ಕಂಡುಕೊಂಡೆ. ಆಡಳಿತವೂ ಮಹತ್ವದ ಪಾತ್ರ ವಹಿಸಿದೆ. ಒಂದು ದೊಡ್ಡ ಸಮಾವೇಶಯಾಗಿದ್ದರೂ, ಅಲ್ಲಿ ಯಾವುದೇ ರೀತಿಯ ಜನಸಂದಣಿ ಕಂಡುಬಂದಿಲ್ಲ ಅಥವಾ ನಿಯಂತ್ರಣದಲ್ಲಿಲ್ಲ ಎಂದು ಭಾಸವಾಗಲಿಲ್ಲ. ಕಾರುಗಳಿಗೆ ಉತ್ತಮವಾಗಿ ಯೋಜಿತ ಮಾರ್ಗಗಳು ಮತ್ತು ಸ್ಪಷ್ಟವಾದ ಸೂಚನಾ ಫಲಕಗಳು ಅದ್ಭುತವಾದ ಲಾಜಿಸ್ಟಿಕ್ಸ್ ಆಗಿದ್ದು, ಇದು ಅನೇಕ ಭಾಗವಹಿಸುವವರನ್ನು ನಿಸ್ಸಂದೇಹವಾಗಿ ಪ್ರಭಾವಿಸಿತು. ಜಲ್ಸಾ ಸಾಲಾನಕ್ಕೆ ಹಾಜರಾಗುವುದು ನನ್ನ ಆಧ್ಯಾತ್ಮಿಕತೆಯ ಮೇಲೆ ಸಕಾರಾತ್ಮಕ ಪರಿಣಾಮ ಬೀರಿತು. ಮರೆಯಲಾಗದ ಸಮಾರಂಭ ಎಂದರೆ ಅಹ್ಮದೀಯರ ಪ್ರತಿಜ್ಞೆಯಾಗಿದೆ ಅಂದರೆ ಜಾಗತಿಕ ಬೈಅತ್ ಸಮಾರಂಭವಾಗಿದೆ ಅಲ್ಲಿ ಎಲ್ಲರೂ ಒಟ್ಟಾಗಿ ಪ್ರಾರ್ಥಿಸಿ ಕಣ್ಣೀರು ಸುರಿಸಿದ್ದು ಅವಿಸ್ಮರಣೀಯ ಕ್ಷಣಗಳಲ್ಲಿ ಒಂದಾಗಿದೆ. ಅಂತಹ ದೃಢವಾದ ನಂಬಿಕೆಯ ಮನೋಭಾವವನ್ನು ನಾನು ನೋಡಿಲ್ಲ. ನಾನು ಸೂಚಿಸಬೇಕಾದರೆ, ಕಾರ್ಯಕ್ರಮಗಳ ನಡುವೆ ಅತಿಥಿಗಳಿಗೆ ಹೆಚ್ಚಿನ ಚಟುವಟಿಕೆಗಳು ಇರಬೇಕು. ಇದಲ್ಲದೆ, ಮಹಿಳಾ ಅತಿಥಿಗಳು ಹಿಜಾಬ್ ಧರಿಸಲು ಒತ್ತಾಯಿಸಬಾರದು. ಇದು ಅವರ ಮೇಲೆ ಬಲವಂತವಲ್ಲ, ಒಂದೋ ಅವರನ್ನು ತಪ್ಪಾಗಿ ಅರ್ಥೈಸಲಾಗಿದೆ ಅಥವಾ ಕೆಲವು ಕಾರ್ಯಕರ್ತರು ಅದೇ ರೀತಿ ಹೇಳಿರಬಹುದು. ಸಾಮಾನ್ಯವಾಗಿ, ನಾವು ಇದನ್ನು ಹೇಳುವುದಿಲ್ಲ ಎಂದು ನಾನು ಭಾವಿಸುತ್ತೇನೆ ಆದಾಗ್ಯೂ, ಉಡುಗೆ ಸಾಧಾರಣವಾಗಿರಬೇಕು. ಆದಾಗ್ಯೂ, ಅವರು ಹಿಜಾಬ್ ಅವಶ್ಯವಾಗಿರಬೇಕು ಆದರೆ ಯಾರಿಗೆ ಅದು ಇಷ್ಟನೊ ಅವರು ಧರಿಸಬೇಕು ಎಂದು ಹೇಳುತ್ತಾರೆ.

ಕೋಸ್ಟರಿಕಾದಿಂದ ಆಗಮಿಸಿದ ಅತಿಥಿ ಲೊರೆನಾ ವೆಲ್ಲಾ ಲೋಬೋಸ್ ಅವರು ಹೇಳುತ್ತಾರೆ: ಕೋಸ್ಟರಿಕಾದಲ್ಲಿ ಅವರು ಮುಸ್ಲಿಂ ಧಾರ್ಮಿಕ ಸಂಸ್ಥೆಗಳೊಂದಿಗೆ ಸಂಪರ್ಕ ಹೊಂದಿದ್ದಾರೆ, ಆದರೆ ಮಹಿಳೆಯರು ಯಾವುದೇ ಪಾತ್ರವನ್ನು ಕಾಣುವುದಿಲ್ಲ, ಬದಲಿಗೆ ಪುರುಷರು ಮಾತ್ರ ವಿಶೇಷ ಧಾರ್ಮಿಕ ಸ್ಥಾನಗಳನ್ನು ಹೊಂದಿರುವವರನ್ನು ಪ್ರತಿನಿಧಿಸುತ್ತಾರೆ, ಆದರೆ ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಜಲ್ಸ ಸಾಲಾನದಲ್ಲಿ ಭಾಗವಹಿಸಿದ ನಂತರ, ಅಹ್ಮದೀಯ ಜಮಾತ್‌ನಲ್ಲಿ ಮಹಿಳೆಯರಿಗೆ ಪುರುಷರಿಗೆ ಸಮಾನ ಸ್ಥಾನಮಾನ ನೀಡಿರುವುದು ನನಗೆ ಆಶ್ಚರ್ಯ ಮತ್ತು ಸಂತೋಷ ತಂದಿದೆ. ಮರುದಿನ ಮಹಿಳೆಯರ ಸಭಾಂಗಣಕ್ಕೆ ಹೋದಾಗ ಮಹಿಳೆಯರ ಶಿಸ್ತು, ಶುಚಿತ್ವದ ಮಟ್ಟವು ಬಹಳ ಉತ್ತುಂಗವಾಗಿತ್ತು. ಅವರು ಹೇಳುತ್ತಾರೆ: ವಿಶ್ವಶಾಂತಿ, ಭದ್ರತೆ, ಸರ್ವಧರ್ಮ ಸಂವಾದ ಸ್ಥಾಪನೆಗೆ ಅಹ್ಮದಿಯಾ ಜಮಾಅತ್ ಶ್ರಮಿಸುತ್ತಿದೆ ಎಂದು ನನಗೆ ತಿಳಿಸಲಾಯಿತು. ಇವೆಲ್ಲವೂ ಹೇಳಿಕೆಗಳಿಗೆ ಸೀಮಿತ ಎಂದು ಆರಂಭದಲ್ಲಿ ನನಗೆ ಅನಿಸಿತು, ಆದರೆ ಜಲ್ಸದಲ್ಲಿ ಭಾಗವಹಿಸಿದ ನಂತರ ನಾನು ನನ್ನ ಸ್ವಂತ ಅನುಭವದಿಂದ ನೋಡಿದೆ ಮತ್ತು ಜಮಾಅತ್ ಅಪರಿಚಿತರಿಗೆ ನೀಡುವ ಹೇಳಿಕೆಗಳನ್ನು ಕೂಡ ಸ್ವತಃ ಅವರು ಅದರ ಮೇಲೆ ಕಾರ್ಯನಿರ್ವಹಿಸುತ್ತಾರೆ ಎಂದು ದೃಢೀಕರಣವಾಯಿತು. ಜಮಾಅತ್ ನ ನಂಬಿಕೆಗಳು ಮತ್ತು ಆಚರಣೆಗಳು ಒಂದೇ ಆಗಿವೆ.

ಬುರುಂಡಿಯ ಅತಿಥಿಗಳು ಶ್ರೀ ಹತುಂಗಿಮಾನ ಪಾಂಟಿಯನ್ ಸಾಹಿಬ್ ಅವರು ಬುರುಂಡಿಯ ರಾಷ್ಟ್ರೀಯ ಏಕತೆ ಮತ್ತು ಸಾಮಾಜಿಕ ವ್ಯವಹಾರಗಳು ಮತ್ತು ಮಾನವ ಹಕ್ಕುಗಳ ಸಚಿವಾಲಯದ ಕಾರ್ಯದರ್ಶಿಯಾಗಿದ್ದಾರೆ. ಅವರು ತಮ್ಮ ಅನಿಸಿಕೆಗಳನ್ನು ವ್ಯಕ್ತಪಡಿಸುತ್ತಾ ಹೇಳುತ್ತಾರೆ: ವಿಮಾನ ನಿಲ್ದಾಣದಿಂದ ನಿವಾಸಕ್ಕೆ ನನಗೆ ಆತ್ಮೀಯ ಸ್ವಾಗತ ಲಭಿಸಿತು. ಯುವ ಸ್ವಯಂಸೇವಕರು ನನ್ನನ್ನು ಸ್ವಾಗತಿಸಿದರು. ನನ್ನನ್ನು ಸತತವಾಗಿ ಅತ್ಯುತ್ತಮ ಆತಿಥ್ಯ ನೀಡಲಾಯಿತು. ಮೂರು ದಿನಗಳಲ್ಲಿ ಧರ್ಮ, ರಾಷ್ಟ್ರ, ಬಣ್ಣ ಮತ್ತು ಜಾತಿಯ ತಾರತಮ್ಯವಿಲ್ಲದೆ ನಿಸ್ವಾರ್ಥ ಪ್ರೀತಿಯಿಂದ ಅಹ್ಮದಿಯಾ ಜಮಾಅತ್ ನೀಡಿದ ರಕ್ಷಣೆ ಮತ್ತು ಆತಿಥ್ಯವನ್ನು ನಾನು ಯಾವಾಗಲೂ ಸ್ಮರಿಸುತ್ತೇನೆ. ನನ್ನ ನಂಬಿಕೆ ಸ್ವಲ್ಪ ವಿಭಿನ್ನವಾಗಿದ್ದರೂ, ನಾವೆಲ್ಲರೂ ನಮ್ಮೆಲ್ಲರನ್ನು ಪ್ರೀತಿಸುವ ಒಬ್ಬ ದೇವರ ಜೀವಿಗಳು ಮತ್ತು ನಮ್ಮಲ್ಲಿ ಒಂದೇ ರಕ್ತವಿದೆ ಎಂದು ಅವರು ಹೇಳುತ್ತಾರೆ. ಜಲ್ಸಾದ ಭಾಷಣಗಳು ಇಸ್ಲಾಮಿನ ಬೋಧನೆಗಳಲ್ಲಿ ಸಮೃದ್ಧವಾಗಿವೆ ಮತ್ತು ಅಹ್ಮದೀಯ ಸಮುದಾಯದ ನಂಬಿಕೆಗಳ ಕೆಲವು ಜನರ ತಪ್ಪು ವ್ಯಾಖ್ಯಾನಗಳ ಮೇಲೆ ಬೆಳಕು ಚೆಲ್ಲುತ್ತವೆ ಅಥವಾ ಉತ್ತರಗಳನ್ನು ನೀಡುತ್ತವೆ. ಪ್ರಪಂಚದಾದ್ಯಂತದ ನಿಮ್ಮ ಯಶಸ್ಸಿನ ವರದಿಯು ಸೇವಾ ಯೋಜನೆಗಳನ್ನು ಒದಗಿಸುವ ಮೂಲಕ ವಿಶೇಷ ಅಗತ್ಯವುಳ್ಳ ಜನರಿಗೆ ಸಹಾಯ ಮಾಡಲು ನೀವು ಕೊಡುಗೆ ನೀಡುತ್ತೀರಿ ಎಂದು ತೋರಿಸಿದೆ ಮತ್ತು ನನ್ನ ದೇಶದ ಬುರುಂಡಿಯಲ್ಲಿ ನಾನು ಈ ಸೇವೆಗಳಿಗೆ ಸಾಕ್ಷಿಯಾಗಿದ್ದೇನೆ. ಇಷ್ಟು ದೊಡ್ಡ ಸಮ್ಮೇಳನ ಯಾವುದೇ ಮಾನವನ ಕೆಲಸವಲ್ಲ, ಅದು ಸರ್ವಶಕ್ತನಾದ ಅಲ್ಲಾಹನ ವಿಷಯವಾಗಿದೆ ಎಂದು ಅವರು ಹೇಳುತ್ತಾರೆ. ಇದು ವಿಶಾಲವಾದ ಮತ್ತು ನಿರರ್ಗಳವಾದ ಸಂಕೇತವಾಗಿದ್ದು, ನೀವು ಏನೇ ಮಾಡಿದರೂ ಅಲ್ಲಾಹನ ಕೈ ಯಾವಾಗಲೂ ಇರುತ್ತದೆ ಮತ್ತು ಅಲ್ಲಾಹನು ನಿಮ್ಮನ್ನು ರಕ್ಷಿಸುತ್ತಾನೆ ಎಂದು ಪ್ರಾರ್ಥಿಸುತ್ತಾರೆ.

ಜನ್ಮತಃ ಗ್ಯಾಂಬಿಯನ್ ಆಗಿರುವ ಐಸ್‌ಲ್ಯಾಂಡ್‌ನ ಅಹಮದಿಯೇತರ ಅತಿಥಿ ಸುಲೈಮಾನ್ ಬಾಹ್ ಸಾಹಿಬ್ ಹೇಳುತ್ತಾರೆ: ಜಲ್ಸದಲ್ಲಿ ಸೇರುವುದರಿಂದ ಜಮಾಅತ್‌ನ ಬಗ್ಗೆ ನನ್ನ ಜ್ಞಾನವು ಹೆಚ್ಚಾಯಿತು. ವಿವಿಧ ಪ್ರದರ್ಶನಗಳಿಗೆ ಭೇಟಿ ನೀಡಿದ ನಂತರ, ಪ್ರಪಂಚದಾದ್ಯಂತ ಜಮಾಅತ್ ಏನು ಮಾಡುತ್ತಿದೆ ಎಂದು ನಾನು ನೋಡಿದೆ. ಜ್ಞಾನ ಸಂಪಾದಿಸಲು ಮತ್ತು ಜ್ಞಾನವನ್ನು ಹರಡಲು ಜಮಾಅತ್ ನ ಪ್ರಯತ್ನಗಳು ನನ್ನ ಮೇಲೆ ಆಳವಾದ ಪ್ರಭಾವ ಬೀರಿದೆ. ನಲವತ್ತೂರು ಸಾವಿರ ಜನರು ಭಾಗವಹಿಸಿದ್ದರೂ, ಪರದೆಯನ್ನು ಇಟ್ಟುಕೊಂಡು ಪುರುಷರು ಮತ್ತು ಮಹಿಳೆಯರು ತಮ್ಮ ತಮ್ಮ ಸ್ಥಳಗಳಲ್ಲಿ ಕೆಲಸ ಮಾಡುತ್ತಿರುವುದು ನನ್ನ ಮೇಲೆ ಆಳವಾದ ಪ್ರಭಾವ ಬೀರಿತು. ಅವರು ಹೇಳುತ್ತಾರೆ: ನಾನು ಅನೇಕ ಇಸ್ಲಾಮಿನ ಜಲ್ಸಗಳಲ್ಲಿ ಮತ್ತು ಸಭೆಗಳಲ್ಲಿ ಭಾಗವಹಿಸಿದ್ದೇನೆ ಅಲ್ಲಿ ಕೆಲವೇ ಸಾವಿರ ಜನರು ಸೇರಿದ್ದರೂ. ಪುರುಷರು ಮತ್ತು ಮಹಿಳೆಯರು ಬೆರೆಯುತ್ತಿದ್ದರು, ಆದರೆ ಜಲ್ಸದಲ್ಲಿ ಹೆಚ್ಚಿನ ಸಂಖ್ಯೆಯ ಜನರು ಇದ್ದರೂ ಪರದೆಯ ಬಗ್ಗೆ ಕಾಳಜಿ ವಹಿಸಲಾಗುತ್ತಿತ್ತು. ಇದು ಸಾಮಾನ್ಯ ವಿಷಯವಲ್ಲ, ಇದು ಕೂಡ ಅಂತಹವರ ಮೇಲೆ ನಮ್ಮ ನಡವಳಿಕೆಯಿಂದ ಸ್ಪಷ್ಟವಾಗುವ

ಒಂದು ಮೌನ ತಬ್ಲೀಗ್ ಆಗಿದೆ, ಹಾಗಾಗಿ ಜಮಾಅತ್ ಅನ್ನು ಶ್ಲಾಘಿಸಬೇಕಾಗಿದೆ. ಜಲ್ಸಾದ ಸಂಘಟನೆ ಮತ್ತು ವ್ಯವಸ್ಥೆ ತುಂಬಾ ಉತ್ತಮವಾಗಿತ್ತು. ಜನರು ಪರಸ್ಪರ ಗೌರವದಿಂದ ನಡೆಸಿಕೊಳ್ಳುತ್ತಿದ್ದರು. ಕಾರ್ಯಕರ್ತರು ಸಂತೋಷದಿಂದ ಕೆಲಸ ಮಾಡುತ್ತಿದ್ದರು ಮತ್ತು ಸುಗಮ ವ್ಯವಸ್ಥೆ ನಡೆಯುತ್ತಿತ್ತು ಮತ್ತು ಇದೆಲ್ಲವೂ ಕೆಲವು ದಿನಗಳ ತಯಾರಿಯ ಫಲಿತಾಂಶವಲ್ಲ ಬದಲಿಗೆ ಸುದೀರ್ಘ ಅವಧಿಯ ತಯಾರಿಯಾಗಿದೆ. ಅವರು ಹೇಳುತ್ತಾರೆ: ನನಗಾಗಿ ಜಾಮಿಯಾದಲ್ಲಿ ವಸತಿ ವ್ಯವಸ್ಥೆ ಮಾಡಲಾಗಿತ್ತು ಅಲ್ಲಿ ಹಾಸಿಗೆಗಳನ್ನು ಹಾಕಲಾಗಿತ್ತು ಮತ್ತು ನಾವೆಲ್ಲರೂ ಅಲ್ಲಿ ಮಲಗುತ್ತಿದ್ದೇವು ಮತ್ತು ಯಾವುದೇ ಭೇದಭಾವವಿರಲಿಲ್ಲ. ಅತಿಥಿಗಳನ್ನು ಪರಸ್ಪರ ಒಂದೇ ರೀತಿಯಲ್ಲಿ ನಡೆಸಿಕೊಳ್ಳುತ್ತಿದ್ದರು. ಮತ್ತೆ ಒಂದು ಸಲಹೆ ನೀಡುತ್ತಾ ಹೇಳುತ್ತಾರೆ: ಜಲ್ಸದ ಸಭಾಂಗಣದಲ್ಲಿ ಏ.ಸಿ ಯ ವ್ಯವಸ್ಥೆ ಇದ್ದರೂ ಶಾಖದ ತೀವ್ರತೆಯು ಇನ್ನೂ ಕಂಡುಬಂದಿದೆ ಗಾಳಿಯ ಕೊರತೆಯಿತ್ತು. ನನಗೆ ನಿದ್ದೆ ಬರುತ್ತಿತ್ತು ನನಗೆ ಮಾತ್ರ ನಿದ್ದೆ ಬರುತ್ತಿದೆ ಎಂದುಕೊಂಡಿದ್ದೆ ಆದರೆ ಎಡ ಬಲ ಭಾಗದಲ್ಲಿ ಕುಳಿತಿದ್ದವರನ್ನು ನೋಡಿದಾಗ ಅವರಿಗೂ ಕೆಲವೊಮ್ಮೆ ನಿದ್ದೆ ಬರುತ್ತಿತ್ತು. ಹಾಗಾಗಿ ಫ್ರೆಶ್ ಆಗಿರಲು ವೆಂಟಿಲೇಷನ್ ವ್ಯವಸ್ಥೆ ಇರಬೇಕು.

ಅರ್ಜೆಂಟೀನಾದ ಮುಬಲ್ಲಿಗ್ ಬರೆಯುತ್ತಾರೆ: ಮರಿನಾ ಪ್ಲಾಜಾ ಸಾಹಿಬಾ ಅರ್ಜೆಂಟೀನಾದವರು ಯುಕೆಯಲ್ಲಿ ರಾಯಭಾರಿಯಾಗಿದ್ದಾರೆ. ಅವರು ಮೊದಲ ಬಾರಿಗೆ ಜಲ್ಸದಲ್ಲಿ ಭಾಗವಹಿಸಿದರು. ಅವರು ಜಲ್ಸದ ವಾತಾವರಣ ಹಾಗೂ ಸಮಾರಂಭದ ವಾತಾವರಣದಿಂದ ಬಹಳ ಪ್ರಭಾವಿತರಾದರು, ಅವರು ಜಲ್ಸದ ನಂತರ ಅರ್ಜೆಂಟೀನಾದ ರಾಯಭಾರ ಕಚೇರಿಯಲ್ಲಿ ಔಪಚಾರಿಕ ಸ್ವಾಗತವನ್ನು ಏರ್ಪಡಿಸಿದರು ಮತ್ತು ಲ್ಯಾಟಿನ್ ಅಮೆರಿಕದಿಂದ ಜಮಾಅತೇತರ ಅತಿಥಿಗಳನ್ನು ರಿಸೆಪ್ಷನ್‌ನಲ್ಲಿ ಸೇರಲು ಆಹ್ವಾನಿಸಿದರು. ಈ ರಿಸೆಪ್ಷನ್‌ನಲ್ಲಿ ಅಕೆಂಟೀನಾದ ರಾಯಭಾರಿ ಹೇಳಿದರು: ಅವರು ವಿಶೇಷವಾಗಿ ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಜಲ್ಸದಲ್ಲಿ ಭಾಗವಹಿಸಿದ ಮತ್ತು ಜಮಾಅತ್‌ನ ಸಂದೇಶವನ್ನು ಪ್ರಚಾರ ಮಾಡುವಲ್ಲಿ ತಮ್ಮ ಪಾತ್ರವನ್ನು ವಹಿಸಿದ ಸರ್ಕಾರಿ ಜಮಾಅತೇತರ ಅತಿಥಿಗಳಿಗೆ ಕೃತಜ್ಞತೆ ಸಲ್ಲಿಸಿದರು. ಅವರು ಹೇಳಿದರು: ಸಾಮಾನ್ಯವಾಗಿ ಧಾರ್ಮಿಕ ಸಂಸ್ಥೆಗಳು ವಿಶೇಷ ಬಾಹ್ಯ ಕಾರ್ಯಕ್ರಮಗಳಿಗೆ ರಾಜತಾಂತ್ರಿಕರು ಅಥವಾ ರಾಜಕಾರಣಿಗಳನ್ನು ಮಾತ್ರ ಆಹ್ವಾನಿಸುತ್ತವೆ ಮತ್ತು ಕಾರ್ಯಕ್ರಮದ ನಿರ್ದಿಷ್ಟ ಭಾಗಕ್ಕೆ ಅವರನ್ನು ಆಹ್ವಾನಿಸಿ ನಂತರ ಅವರನ್ನು ಬೀಳ್ಕೊಡುತ್ತವೆ, ಆದರೆ ಇದಕ್ಕೆ ವಿರುದ್ಧವಾಗಿ, ನಿಮ್ಮ ಜಮಾಅತ್ ನಮ್ಮಿಂದ ಯಾವುದೇ ವಿಷಯ ರಹಸ್ಯವಾಗಿರಿಸಲಿಲ್ಲ ಇದು ತುಂಬಾ ಅಸಾಮಾನ್ಯ ಮತ್ತು ಪ್ರಶಂಸನೀಯವಾಗಿದೆ. ಇದರ ಫಲಿತಾಂಶವೆಂದರೆ ನೀವು ಯಾವುದೇ ಗುಪ್ತ ಕಾರ್ಯಸೂಚಿಯನ್ನು ಹೊಂದಿಲ್ಲ, ಆದರೆ ನಿಮ್ಮ ಎಲ್ಲಾ ಬೋಧನೆಗಳು ತೆರೆದಿರುತ್ತವೆ ಮತ್ತು ನೀವು ಇತರರಿಗೆ ಪ್ರಸ್ತುತಪಡಿಸುವ ಬೋಧನೆಗಳು ನಿಮ್ಮ ಸ್ವಂತ ಆಂತರಿಕ ನಂಬಿಕೆಗಳು ಮತ್ತು ಕಾರ್ಯಸೂಚಿಗೆ ಅನುಗುಣವಾಗಿರುತ್ತವೆ.

ಬ್ರೆಜಿಲ್‌ನ ಪತ್ರಿಕೆ ಸಂಪಾದಕಿ ಜಾಕ್ವೆಲಿನ್ ಸಾಹಿಬಾ ಆಗಮಿಸಿದ್ದರು ಅವರು ಹೇಳುತ್ತಾರೆ: ಈ ಭವ್ಯ ಜಲ್ಸದಿಂದ ನಾನು ವಿಶೇಷವಾಗಿ ಪ್ರಭಾವಿತನಾಗಿದ್ದೆ ಮತ್ತು ವಿವಿಧ ದೇಶಗಳಿಂದ ಸೇರಿರುವ ಹೆಚ್ಚಿನ ಸಂಖ್ಯೆಯ ಜನರು ಪರಸ್ಪರ ಪ್ರೀತಿ ಮತ್ತು ವಾತ್ಸಲ್ಯದಿಂದ ವಾಸಿಸುತ್ತಿದ್ದರು ಎಂದು ಅವರು ಖಚಿತಪಡಿಸಿದರು ಜಲ್ಸವು ಎಲ್ಲಾ ರೀತಿಯಲ್ಲೂ ಯಶಸ್ವಿಯಾಯಿತು. ಶಾಂತಿ, ಐಕ್ಯತೆ ಮತ್ತು ಪ್ರೀತಿಯ ವಾತಾವರಣದಿಂದ ನಾನು ತುಂಬಾ ಸಂತೋಷಗೊಂಡಿದ್ದೇನೆ ಮತ್ತು ಇಮಾಮ್ ಅವರ ಬುದ್ಧಿವಂತ ಮಾತುಗಳು ನನ್ನ ಮನಸ್ಸನ್ನು ಮುಟ್ಟಿತು ಮತ್ತು ನನ್ನ ಮನಸ್ಸನ್ನು ಒಳ್ಳೆಯ ವಿಷಯಗಳಿಗೆ ಮಾತ್ರ ತೆರೆಯಿತು. ಖಲೀಫರ ಮಾತುಗಳಲ್ಲಿ, ಬಾಹ್ಯ ಪದಗಳು ಮಾತ್ರವಲ್ಲ, ಹೃದಯದಿಂದ ಪ್ರಾಮಾಣಿಕವಾದ ಪದಗಳು ಇದ್ದವು. ಈ ಭೇಟಿಯ ಸಮಯದಲ್ಲಿ ನಾನು ಪ್ರತಿ ಕ್ಷಣ ಪ್ರೀತಿ ಮತ್ತು ಗೌರವವನ್ನು ಅನುಭವಿಸಿದೆ. ಸ್ವಯಂಸೇವಕರು ಪೂರ್ಣ ಹೃದಯದಿಂದ ಕೆಲಸ ಮಾಡಿದ ರೀತಿ ನಿಜಕ್ಕೂ ಹೃದಯಸ್ಪರ್ಶಿ ಮತ್ತು ಶ್ಲಾಘನೀಯವಾಗಿದೆ.

ಬ್ರೆಜಿಲ್‌ನ ಪತ್ರಿಕೆ ಪತ್ರಕರ್ತರೊಬ್ಬರು ಹೇಳುತ್ತಾರೆ. ಇದೊಂದು ಅಸಾಧಾರಣ ಕೂಟವಾಗಿತ್ತು. ಜಲ್ಸದ ನಂತರ ಅಹ್ಮದಿಯಾ ಜಮಾಅತ್ ಬಗ್ಗೆ ನನ್ನ ಹೃದಯದಲ್ಲಿ ಗೌರವ ಮತ್ತು ಅಭಿಮಾನ ಹೆಚ್ಚಿದೆ. ಸ್ವಯಂಸೇವಕರ ನಿಸ್ವಾರ್ಥ ಸೇವೆಯು ಅವರು ತಮ್ಮ ಸಮಯ, ತಮ್ಮ ವಾಹನಗಳು ಮತ್ತು ತಮ್ಮ ಸೇವೆಗಳನ್ನು ಅತಿಥಿಗಳಿಗಾಗಿ ಹೇಗೆ ಮೀಸಲಿಡುತ್ತಾರೆ ಎಂಬುದು ನನ್ನ ಗಮನ ಸೆಳೆಯಿತು. ಇದು ತುಂಬಾ ಸಿಹಿಯಾದ ವಿಷಯವಾಗಿದೆ.

ರಾಬರ್ಟೊ ಕ್ಯಾಟಲಾನೊ ಇಟಲಿಯ ಫ್ಲಾರೆನ್ಸ್ ವಿಶ್ವವಿದ್ಯಾಲಯದಲ್ಲಿ ಇಂಟರ್‌ಫೇಯ್ತ್ ಡೈಲಾಗ್‌ನ ಪ್ರಾಧ್ಯಾಪಕರಾಗಿದ್ದಾರೆ. ಅವರು ಜಲ್ಸದಲ್ಲಿ ಭಾಗವಹಿಸಿದ್ದರು. ಅವರು ಹೇಳುತ್ತಾರೆ: ಈ ಸಂದರ್ಭದಿಂದ ನನಗೆ ಬಹಳ ಆಶ್ಚರ್ಯವಾಯಿತು. ಈ ಜಲ್ಸವು ಪ್ರಪಂಚದಾದ್ಯಂತದ ಸಮುದಾಯಗಳ ಸಾವಿರಾರು ಪ್ರತಿನಿಧಿಗಳನ್ನು ಒಟ್ಟುಗೂಡಿಸುತ್ತದೆ. ಇದು ಅಹ್ಮದೀಯ ಜಮಾಅತ್‌ನ ಗಮನಾರ್ಹ ಏಕತೆಯನ್ನು ತೋರಿಸುತ್ತದೆ. ಜಲ್ಸದಲ್ಲಿ ಆಧ್ಯಾತ್ಮಿಕ ವಾತಾವರಣವನ್ನು ಅನುಭವಿಸಬಹುದು ಮತ್ತು ಇಮಾಮ್ ಜಮಾಅತ್ ಏನನ್ನಾದರೂ ಮಾತನಾಡುವಾಗಲೂ, ಸಭಿಕರ ಸಂಪೂರ್ಣ ಮೌನ ಮತ್ತು ಗಮನವು ಆಶ್ಚರ್ಯಕರವಾಗಿತ್ತು. ಆಳವಾದ ಆಧ್ಯಾತ್ಮಿಕ ವಾತಾವರಣ ಸೃಷ್ಟಿಯಾಯಿತು. ಸ್ವಯಂಸೇವಕರ ಸಮರ್ಪಣೆ ಕೂಡ ಎಷ್ಟು ಪ್ರಭಾವಶಾಲಿಯಾಗಿದೆ ಎಂದರೆ ಮಕ್ಕಳು ಸೇರಿದಂತೆ ಸಾವಿರಾರು ಸ್ವಯಂಸೇವಕರು ತುಂಬಾ ಶ್ರಮಿಸಿದರು. ಜಲ್ಸದಲ್ಲಿ ವಿಶೇಷವಾಗಿ ಸ್ಮರಣೀಯ ಕ್ಷಣವೆಂದರೆ ಜಾಗತಿಕ ಬೈಅತ್ ಸಮಾರಂಭವಾಗಿತ್ತು ಎಂದು ಅವರು ಹೇಳುತ್ತಾರೆ. ಇದರಲ್ಲಿ ಖಲೀಫರ ಕೈ ಮೇಲೆ ಬೈಅತ್ ಮಾಡಲಾಯಿತು. ಈ ಪವಿತ್ರ ಮತ್ತು ಭವ್ಯವಾದ ಸಮಾರಂಭವು ನಲವತ್ತು ಸಾವಿರ ಜನರನ್ನು ಅವರ ಸಾಮೂಹಿಕ ನಂಬಿಕೆ ಮತ್ತು ಬದ್ಧತೆಯ ಪ್ರಬಲ ಸಾಕ್ಷ್ಯವಾಗಿ ಒಟ್ಟುಗೂಡಿಸುತ್ತದೆ. ಅವರು ಹೇಳುತ್ತಾರೆ, ವಿಶೇಷವಾಗಿ ಪಾಕಿಸ್ತಾನದಲ್ಲಿ, ಜಮಾಅತ್ ಎದುರಿಸುತ್ತಿರುವ ದೌರ್ಜನ್ಯಗಳು ಮತ್ತು ತೊಂದರೆಗಳ ಬಗ್ಗೆ ತಿಳಿದು ನನ್ನ ಜ್ಞಾನವು ಹೆಚ್ಚಾಯಿತು. ಈ ಕಷ್ಟಗಳು ಮತ್ತು ಸಂಕಟಗಳ ನಡುವೆಯೂ ದ್ವೇಷಿಸದ ಮನೋಭಾವವು ನನ್ನನ್ನು ಮೆಚ್ಚಿಸಿದೆ, ಇದು ನಿಮ್ಮ ಈಮಾನ್‌ಗೆ ನಿಜವಾದ ಸಾಕ್ಷಿಯಾಗಿದೆ.

ಮಹಿಳಾ ವ್ಯವಹಾರಗಳು ಮತ್ತು ಕುಟುಂಬ ಕಲ್ಯಾಣ ಆಯುಕ್ತೆ ಅಗಾಥಾ ಮೇರಿ ಸಾಹಿಬಾ ಕೂಡ ರಾಡ್ರಿಗೆಸ್ ದ್ವೀಪದಿಂದ ಆಗಮಿಸಿದ್ದರು ಅವರು ಹೇಳುತ್ತಾರೆ: ನೂರಕ್ಕೂ ಹೆಚ್ಚು ದೇಶಗಳ ಜನರು ಉಪಸ್ಥಿತರಿರುವ ಮತ್ತು ವಿವಿಧ ಸಮುದಾಯಗಳಿಗೆ ಸೇರಿದ ಜನರು ಭಾಗಿಯಾಗಿದ್ದ ಇಂತಹ ದೊಡ್ಡ ಕಾರ್ಯಕ್ರಮದಲ್ಲಿ ತಾನು ಮೊದಲ ಬಾರಿಗೆ ಭಾಗವಹಿಸಿದ್ದೇನೆ. ಸುಮಾರು 44,000 ಭಾಗವಹಿಸುವವರೊಂದಿಗೆ, ಈ ಜಲ್ಸವು ರೋಡ್ರಿಗಸ್ ದ್ವೀಪದ ಸಂಪೂರ್ಣ ಜನಸಂಖ್ಯೆಯ ಕೂಟದಂತೆ ನನಗೆ ಆಗಿತ್ತು. ಜಲ್ಸಾ ಸಾಲಾನದಲ್ಲಿ ಜನರು ಎಷ್ಟು ಶಿಸ್ತಿನಿಂದ ಕುಳಿತಿದ್ದರು ಎಂಬುದು ನನ್ನ ಹೃದಯವನ್ನು ಕರಗಿಸಿತು. ಎಲ್ಲರೂ ಮುಗುಳು ನಗು ನಗುತ್ತಿದ್ದರು, ಎಲ್ಲರು ಪರಸ್ಪರ ಸಲಾಮ್ ಮಾಡುತ್ತಿದ್ದರು. ಇದು ಶ್ಲಾಘನೀಯವಾಗಿದೆ. ಮತ್ತು ಸಭೆಯನ್ನು ಉದ್ದೇಶಿಸಿ ಇಮಾಮ್ ಜಮಾಅತ್ ಮಾಡಿದ ಭಾಷಣವು ತುಂಬಾ ಅರ್ಥಪೂರ್ಣವಾಗಿತ್ತು, ಇದರಿಂದ ನಾನು ಅಹ್ಮದಿಯಾ ಮುಸ್ಲಿಮಾ ಜಮಾಅತ್‌ನಲ್ಲಿ ಮಹಿಳೆಯರ ಪಾತ್ರ ಎಷ್ಟು ಮಹತ್ವದ್ದಾಗಿದೆ ಎಂದು ಕಂಡುಕೊಂಡೆ. ಈ ಉಪನ್ಯಾಸವು ನನ್ನ ನೀತಿಯಲ್ಲೂ ಸಕಾರಾತ್ಮಕ ಬದಲಾವಣೆಗಳನ್ನು ತರುತ್ತದೆ ಎಂದು ನನಗೆ ಖಾತ್ರಿಯಿದೆ. ಈ ಜಲ್ಸದಲ್ಲಿ ನಾನು ಬಹಳಷ್ಟು ಕಲಿತಿದ್ದೇನೆ ಅದು ಖಂಡಿತವಾಗಿಯೂ ನನ್ನ ಜೀವನದಲ್ಲಿ ಮತ್ತು ನನ್ನ ಸುತ್ತಮುತ್ತಲಿನ ಜನರ ಜೀವನದಲ್ಲಿ ಸಕಾರಾತ್ಮಕ ಬದಲಾವಣೆಗಳನ್ನು ತರುತ್ತದೆ. ನಾನು ಈ ಹಿಂದೆ ಅನೇಕ ಧಾರ್ಮಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸಿದ್ದೇನೆ ಆದರೆ ನನ್ನ ಜೀವನದಲ್ಲಿ ಕೆಲವು ಆಧ್ಯಾತ್ಮಿಕ ಅಂಶಗಳ ಕೊರತೆಯಿದೆ ಎಂದು ನಾನು ಯಾವಾಗಲೂ ಆಳವಾಗಿ ತಿಳಿದಿದ್ದೆ ಆದರೆ ಜಲ್ಸಾದ ಕಾರಣದಿಂದ ನನ್ನ ಜೀವನದಲ್ಲಿದ್ದ ಕೊರತೆಯೂ ಪೂರೈಸಲಾಗಿದೆ.

ಆಧ್ಯಾತ್ಮಿಕ ಅಂಶದ ಕೊರತೆಯನ್ನು ಅನೇಕ ಜನರು ವ್ಯಕ್ತಪಡಿಸಿದ್ದಾರೆ ಮತ್ತು ನಾವು ಇಲ್ಲಿ ಉತ್ತಮ ಪರಿಸ್ಥಿತಿಗಳನ್ನು ಕಾಣುತ್ತೇವೆ.

ಟೆಮು ಆಂಡರ್ಸನ್ ಹೊಯ್ಸ್ ಸಾಹಿಬಾ. ಅವರು ಜಿನೀವಾದಲ್ಲಿರುವ ವಿಶ್ವಸಂಸ್ಥೆಯ ತಾಂಜಾನಿಯಾದ ರಾಯಭಾರಿಯಾಗಿದ್ದಾರೆ ಅವರು ಹೇಳುತ್ತಾರೆ: ನಾನು ಇಲ್ಲಿಗೆ ಬಂದಿದ್ದೇನೆ ಮತ್ತು ಪ್ರೀತಿ ಮತ್ತು ಮುಗುಳು ನಗುವನ್ನು ಕಂಡುಕೊಂಡಿದ್ದೇನೆ ಮತ್ತು ದ್ವೇಷವನ್ನು ಈ ದಿನಗಳಲ್ಲಿ ಎಲ್ಲಿಯೂ ನೋಡಲಾಗುವುದಿಲ್ಲ. ಮಹಿಳೆಯರ ಸಮಾವೇಶದ ಪ್ರಕ್ರಿಯೆಗಳು ಬಹಳ ಅರ್ಥಪೂರ್ಣ ಮತ್ತು ಸ್ಫೂರ್ತಿದಾಯಕವಾಗಿತ್ತು. ಜಮಾಅತ್‌ನ ಸ್ಥಾಪಕರು ಹಾಗೂ ಹಿರಿಯರನ್ನು ಬಹಳ ಉತ್ತಮವಾಗಿ ಪರಿಚಯಿಸಿದ ಜಲ್ಸಾದಲ್ಲಿ ನಾನು ನೋಡಿದ ಪ್ರದರ್ಶನಗಳು ಬಹಳ ಸುಂದರವಾಗಿದ್ದವು. ಈ ಪ್ರಬಲ ಜಮಾಅತ್ತಿನ ಸಂಸ್ಥಾಪಕರು ಮತ್ತು ವೀರರ ಇತಿಹಾಸವನ್ನು ಸುಂದರವಾಗಿ ಪ್ರಸ್ತುತಪಡಿಸಲಾಗಿದೆ. ಅಹ್ಮದೀಯ ಜಮಾಅತ್ ನನ್ನ ಪ್ರೀತಿಯ ದೇಶ ತಾಂಜಾನಿಯಾ ಸೇರಿದಂತೆ ಅನೇಕ ಜನರ ಜೀವನವನ್ನು ಗಮನಾರ್ಹವಾಗಿ ಬದಲಾಯಿಸಿದೆ. ಈ ಜಲ್ಸವು ಯಾವುದೇ ದ್ವೇಷವಿಲ್ಲದೆ ಮಾನವ ಸಹಾನುಭೂತಿ ಮತ್ತು ಪ್ರೀತಿ ಮತ್ತು ಮೌಲ್ಯಯುತ ಜೀವನವನ್ನು ನಡೆಸಲು ಅವಕಾಶವನ್ನು ನೀಡಿತು.

ಸೆರಾ ಲಿಯೋನ್‌ನ ಅತಿಥಿಯೊಬ್ಬರು ನ್ಯಾಯಮೂರ್ತಿ ಐವನ್ ಸೀಸೆ ಹೇಳುತ್ತಾರೆ: ಜಲ್ಸಾ ಸಾಲಾನದ ಮೂರು ದಿನಗಳು ಶಾಂತಿ, ಆಧ್ಯಾತ್ಮಿಕ ಬೆಳವಣಿಗೆ ಮತ್ತು ಜಾಗತಿಕ ಏಕತೆಯ ದಿನಗಳಾಗಿದ್ದವು. ಜಲ್ಸದ ವ್ಯವಸ್ಥೆಯು ಬಹಳ ಉತ್ತಮವಾಗಿತ್ತು. ಜಾತಿ-ಬಣ್ಣದ ಭೇದವಿರಲಿಲ್ಲ. ಎಲ್ಲಾ ಜನರು ಅಕ್ಕಪಕ್ಕದಲ್ಲಿ ಕೆಲಸ ಮಾಡುತ್ತಿದ್ದರು. ಪ್ರತಿಯೊಬ್ಬರು ಮಕ್ಕಳೇ ಆಗಿರಲಿ,

ಬೇರೆ ಯಾರೇ ಆಗಿರಲಿ ಎಲ್ಲರೂ ತಮ್ಮ ನಿಯೋಜಿತ ಕರ್ತವ್ಯವನ್ನು ಚೆನ್ನಾಗಿ ಮಾಡುತ್ತಿದ್ದರು. ಇದನ್ನು ನೋಡಿ ನನಗೆ ತುಂಬಾ ಆಶ್ಚರ್ಯವಾಯಿತು. ಹಿರಿಯ ವಿದ್ವಾಂಸರು ಸೇರಿದಂತೆ ಭಾಷಣಕಾರರು ಆಳವಾದ ಒಳನೋಟಗಳನ್ನು ನೀಡಿದರು ಮತ್ತು ಪ್ರತಿಯೊಬ್ಬರ ಹೃದಯವನ್ನು ಸ್ಪರ್ಶಿಸುವ ಸ್ಫೂರ್ತಿದಾಯಕ ಸಂದೇಶಗಳನ್ನು ನೀಡಿದರು. ಶಾಂತಿ, ಏಕತೆ ಮತ್ತು ತಿಳುವಳಿಕೆಗೆ ಒತ್ತು ನೀಡುವ ಬೋಧನೆಗಳಿಂದ ನಾನು ವಿಶೇಷವಾಗಿ ಪ್ರಭಾವಿತನಾಗಿದ್ದೇನೆ. ಹಲವಾರು ಚಟುವಟಿಕೆಗಳು ಮತ್ತು ಪ್ರದರ್ಶನಗಳು ಜಲ್ಸಾವನ್ನು ಜೀವಂತಗೊಳಿಸಿದವು. ಐತಿಹಾಸಿಕ ಮತ್ತು ಸಾಂಸ್ಕೃತಿಕ ಒಳನೋಟಗಳನ್ನು ನೀಡುವ ಶೈಕ್ಷಣಿಕ ಪ್ರದರ್ಶನಗಳನ್ನು ಉತ್ತಮವಾಗಿ ಪ್ರಸ್ತುತಪಡಿಸಲಾಯಿತು. ನಂತರ ನಾನು ವಿವಿಧ ಹಿನ್ನೆಲೆಯ ಜನರನ್ನು ಭೇಟಿ ಮಾಡಲು ಮತ್ತು ಸಂವಹನ ನಡೆಸಲು ಅಸಂಖ್ಯಾತ ಅವಕಾಶಗಳನ್ನು ಪಡೆದುಕೊಂಡಿದ್ದೇನೆ, ಇದು ಏಕತೆ ಮತ್ತು ಸಹೋದರತ್ವದ ಭಾವನೆಯನ್ನು ಬೆಳೆಸಿತು ಎಂದು ಅವರು ಹೇಳುತ್ತಾರೆ. ಇಮಾಮ್ ಜಮಾಅತ್ ಅವರು ಮಾನವೀಯತೆಗೆ ಸಹಾನುಭೂತಿ ಮತ್ತು ಸೇವೆಯ ಮಹತ್ವವನ್ನು ಎತ್ತಿ ಹಿಡಿದ ಮುಖ್ಯ ಭಾಷಣವು ನನಗೆ ಒಂದು ಪ್ರಮುಖ ಕ್ಷಣವಾಗಿತ್ತು. ಸಾಮಾಜಿಕ ಮಾಧ್ಯಮ ಅಥವಾ ಎಲೆಕ್ಟ್ರಾನಿಕ್ ನೆಟ್‌ವರ್ಕ್‌ಗಳ ಮಧ್ಯೆ ತಮ್ಮ ಮಕ್ಕಳಿಗೆ ಪೋಷಕರ ಪಾತ್ರ ಮತ್ತು ಅವರು ಮೇಲ್ವಿಚಾರಣೆ ಮಾಡದಿದ್ದರೆ ಮಕ್ಕಳ ಮೇಲೆ ನಕಾರಾತ್ಮಕ ಪರಿಣಾಮ ಬೀರುವ ಬಗ್ಗೆ ಅವರು ನೀಡಿದ ಒತ್ತು ನಮಗೆ ಪೋಷಕರಿಗೆ ಸ್ಫೂರ್ತಿದಾಯಕವಾಗಿದೆ. ಜಲ್ಸ ಸಾಲಾನದ ವ್ಯವಸ್ಥೆಗಳು, ಭಾಷಣಗಳು ಮತ್ತು ಜಲ್ಸದ ಸದಸ್ಯರ ಸೇವೆಯು ನನ್ನ ನಿರೀಕ್ಷೆಗಳನ್ನು ಮೀರಿದೆ ಎಂದು ಅವರು ಹೇಳುತ್ತಾರೆ.

ಕಝಾಕಿಸ್ತಾನದ ಅತಿಥಿಯೊಬ್ಬರು ಗುಲ್ ಸೈರನ್ ಮೆಂಗಾಲಿ ಸಾಹಿಬಾ ಹೇಳುತ್ತಾರೆ: ನಾನು ಮೊದಲ ಬಾರಿಗೆ ಇಂತಹ ದೊಡ್ಡ ಧಾರ್ಮಿಕ ಸಭೆಯಲ್ಲಿ ಸೇರಿದ್ದೇನೆ. ಮಾಜಿ ರಾಜಕಾರಣಿಯಾಗಿ ನನಗೆ ಅನುಭವವಿದೆ, ಇಂತಹ ಉನ್ನತ ಮಟ್ಟದ ನಿರ್ವಹಣೆಗಾಗಿ ವೆಚ್ಚಗಳು ಆಗುತ್ತವೆ ಮತ್ತು ಇಂತಹ ಉತ್ತಮ ಸುವ್ಯವಸ್ಥೆಗಾಗಿ ಎಷ್ಟು ಜನರು ದಣಿವರಿಯದ ಕೆಲಸ ಮಾಡಿರಬಹುದು ಮತ್ತು ಪ್ರತಿ ವಿಭಾಗದ ಎಲ್ಲಾ ಸಿಬ್ಬಂದಿಗಳ ಬಹಳ ಉತ್ಸಾಹದಿಂದ ಕಾರ್ಯನಿರ್ವಹಿಸುತ್ತಿದ್ದನ್ನು ಕಂಡು ನಾನು ತುಂಬಾ ಪ್ರಭಾವಿತನಾಗಿದ್ದೇನೆ. ಮತ್ತು ಸಂತೋಷದಿಂದ ಕೆಲಸ ಮಾಡುತ್ತಿದ್ದಾರೆ. ಪ್ರತಿಯೊಬ್ಬ ಕಾರ್ಯಕರ್ತರು ದಣಿವರಿಯಿಲ್ಲದೆ ದುಡಿಯುತ್ತಿದ್ದರು ಆದರೆ ಅತಿಥಿಗಳನ್ನು ಪ್ರೀತಿ, ಗೌರವ ಮತ್ತು ವಾತ್ಸಲ್ಯದಿಂದ ನಡೆಸಿಕೊಳ್ಳುತ್ತಿದ್ದರು. ಆದರೆ ನನ್ನನ್ನು ಹೆಚ್ಚು ಪ್ರಭಾವಿಸಿದದ್ದು ಖಲೀಫರ ಭಾಷಣಗಳಾಗಿವೆ. ಈ ಭಾಷಣಗಳಲ್ಲಿ, ಸ್ಪಷ್ಟವಾಗಿ, ಸಾಮಾನ್ಯ ದೈನಂದಿನ ಜೀವನದಲ್ಲಿ ಉಪಯುಕ್ತವಾದ ನೈತಿಕತೆಗಳು ಇದ್ದವು, ಆದರೆ ಅವುಗಳ ಹಿಂದೆ ಹೆಚ್ಚು ವಿಶಾಲವಾದ ಮತ್ತು ಆಳವಾದ ವಿಷಯವಿತ್ತು.

ಮಕ್ಕಳ ಶಿಕ್ಷಣದ ಮೇಲೆ ಸಾಮಾಜಿಕ ಜಾಲತಾಣಗಳ ದುಷ್ಪರಿಣಾಮವನ್ನು ಬಹಳ ಸ್ಪಷ್ಟವಾಗಿ ವಿವರಿಸಿದ್ದು ನನಗೆ ತುಂಬಾ ಇಷ್ಟವಾಯಿತು. ನಾನು ಇದರಿಂದ ಬಹಳಷ್ಟು ಕಲಿತಿದ್ದೇನೆ ಮತ್ತು ಈಗ ನಾನು ಅದನ್ನು ನನ್ನ ಜೀವನದಲ್ಲಿ ಅನ್ವಯಿಸಲು ಪ್ರಯತ್ನಿಸುತ್ತೇನೆ, ನಾನು ನನ್ನ ಮೊಮ್ಮಕ್ಕಳೊಂದಿಗೆ ಮಾತನಾಡುವಾಗ, ನಮ್ಮ ಜೀವನದಲ್ಲಿ ಯಶಸ್ಸನ್ನು ಸಾಧಿಸಲು, ನಾವು ನೈತಿಕತೆಯನ್ನು ಎಂದಿಗೂ ಮರೆಯಬಾರದು ಎಂದು ನಾನು ಅವರಿಗೆ ವಿವರಿಸುತ್ತೇನೆ.

ಇದರಿಂದ ಅವರು ತುಂಬಾ ಪ್ರಭಾವಿತರಾದರು, ಈ ಬಾರಿ ನಾನು ಅತಿಥಿಯಾಗಿ ಬಂದಿದ್ದೇನೆ ಆದರೆ ಈ ಜಲ್ಸದಲ್ಲಿ ನಾನು ಕೇಳಿದ್ದು ನನಗೆ ಇಷ್ಟವಾದ ಕಾರಣ ನಾನು ಶೀಘ್ರದಲ್ಲೇ ಈ ಜಮಾಅತ್ತಿನಲ್ಲಿ ಸೇರುತ್ತೇನೆ ಎಂದು ನನಗೆ ಖಚಿತವಾಗಿದೆ ಎಂದು ಹೇಳಿದರು.

ಬೆಲೀಜ್ ದೇಶದ ಅತಿಥಿಯೊಬ್ಬರು ಕಾಶ್ ಸಾಂಕುಫಾ ಸಾಹಿಬ್ ಹೇಳುತ್ತಾರೆ: ಅಹ್ಮದಿಯತ್ ನಿಜವಾದ ಇಸ್ಲಾಂ ಅಲ್ಲ ಎಂದು ಯಾರಾದರೂ ಹೇಗೆ ನಿರಾಕರಿಸಬಹುದು? ನನ್ನ ಎಲ್ಲಾ ಅನುಮಾನಗಳು ಮತ್ತು ಪ್ರಶ್ನೆಗಳಿಗೆ ಉತ್ತರ ಲಭಿಸಿದೆ. ಹಝ್ರತ್ ಮುಹಮ್ಮದ್ ಮುಸ್ತಫಾ(ಸ) ಅವರನ್ನು ಎಷ್ಟು ಪ್ರೀತಿಸುತ್ತಾರೆ ಎಂದು ಅವರನ್ನು ನಾನು ನೋಡಿರುವೆನು. ಅಹ್ಮದೀಯತ್ ಅನೇಕ ಫಲಭರಿತ ಶಾಖೆಗಳನ್ನು ಹೊಂದಿರುವ ದೊಡ್ಡ ಬಲಿಷ್ಟವಾದ ಮರವಾಗಿದೆ.

ಸ್ಪೇನ್‌ನಿಂದ ಓರ್ವ ಅತಿಥಿ ಅಮಾಲಿಯಾ ಸಾಹಿಬಾ ಅವರು ಕಾರ್ಡೋಬಾ ವಿಶ್ವವಿದ್ಯಾಲಯದಿಂದ ಬಂದವರು. ಅವರು ಬರೆಯುತ್ತಾರೆ: ಮನೋವಿಜ್ಞಾನದ ಪ್ರಾಧ್ಯಾಪಕರಾಗಿ, ನಿಮ್ಮ ಅನುಭವಗಳನ್ನು ತಿಳಿದುಕೊಳ್ಳಲು ನನಗೆ ತುಂಬಾ ಆಸಕ್ತಿ ಇತ್ತು. ನನ್ನ ನೆನಪುಗಳ ಭಾಗವಾಗುವ ಮತ್ತು ನಾನು ಬಹಳ ಪ್ರೀತಿಯಿಂದ ನೆನಪಿಸಿಕೊಳ್ಳುವ ಕ್ಷಣಗಳನ್ನು ಗಮನಿಸಲು ಮತ್ತು ನನ್ನ ಮನಸ್ಸಿನಲ್ಲಿ ಸಂಗ್ರಹಿಸಲು ನಾನು ಅವಕಾಶವನ್ನು ಪಡೆದುಕೊಂಡೆ. ಈ ಜಲ್ಸದ ವೈವಿಧ್ಯತೆ ಮತ್ತು ವೈಶಾಲ್ಯದಿಂದ ಮತ್ತು ಪ್ರತಿಯೊಂದು ಮೂಲೆಯಲ್ಲಿಯೂ ಅನುಭವಿಸಿದ ಶಾಂತಿ ಮತ್ತು ಸೌಹಾರ್ದತೆಯಿಂದ ನಾನು ತುಂಬಾ ಪ್ರಭಾವಿತನಾಗಿದ್ದೆ.

ಅರ್ಬರ್ ಝಿಕಿರಾಜ್ ಅವರು ಕೊಸೊವೊ ವಿಶ್ವವಿದ್ಯಾಲಯದಲ್ಲಿ ಭೌತಶಾಸ್ತ್ರ ಪ್ರಾಧ್ಯಾಪಕರಾಗಿದ್ದಾರೆ ಅವರು ಹೇಳುತ್ತಾರೆ: ನಾನು ಮೊದಲ ಬಾರಿಗೆ ಬ್ರಿಟನ್‌ನ ಜಲ್ಸದಲ್ಲಿ ಸೇರಿದ್ದೇನೆ ಮತ್ತು ಖಲೀಫರ ಶುಕ್ರವಾರದ ಧರ್ಮೋಪದೇಶವನ್ನು ಆಲಿಸಿದ ನಂತರ ಇಡೀ ವಾತಾವರಣವು ಇದ್ದಕ್ಕಿದ್ದಂತೆ ಸುಧಾರಿಸಿದೆ ಎಂದು ಗಮನಿಸಲಾಯಿತು. ಕಾರ್ಯಕರ್ತರು ಮತ್ತು ಅತಿಥಿಗಳ ನಡುವಿನ ಪ್ರೀತಿ ಮತ್ತು ವಾತ್ಸಲ್ಯದ ಭಾವನೆಗಳು ಪರಸ್ಪರ ಸ್ಪಷ್ಟವಾಗಿ ಕಂಡುಬರುತ್ತವೆ. ಅಸ್ಸಲಾಮ್ ಅಲೈಕುಮ್ ಅವರ ನಗು ಮುಖಗಳು ಮತ್ತು ಧ್ವನಿಗಳು ಎಲ್ಲೆಡೆ ಕೇಳಿಬಂದವು. ಅಂತಹ ಪರಿಸರವನ್ನು ಸ್ವರ್ಗಕ್ಕೆ ಹೋಲಿಸಬಹುದು. ಇಷ್ಟು ದೊಡ್ಡ ಸಮಾಹದಲ್ಲಿ ಇಂತಹ ವಾತಾವರಣ ನಿರ್ಮಾಣವಾದರೆ ಇಡೀ ಜಗತ್ತಿನಲ್ಲಿ ಇಂತಹ ವಾತಾವರಣ ನಿರ್ಮಾಣವಾಗುವ ಕಾಲ ದೂರವಿಲ್ಲ ಆದರೆ ಅಹ್ಮದಿಯಾ ಜಮಾಅತ್ ಮಾತ್ರ ಇದನ್ನು ಮಾಡಬಲ್ಲದು. ಕಾರ್ಯಕರ್ತರು ಬಲವಂತದಿಂದ ಏನನ್ನೂ ಹೇಳದಿದ್ದರೂ, ಅತಿಥಿಯನ್ನು ಎಲ್ಲ ರೀತಿಯಿಂದಲೂ ನೋಡಿಕೊಳ್ಳಲು ತಕ್ಷಣವೇ ಪರಿಹಾರವನ್ನು ಕಂಡುಕೊಳ್ಳುವುದು ನನ್ನನ್ನು ಹೆಚ್ಚು ಪ್ರಭಾವಿಸಿತು. ಅವರು ಮುಂದೆ ಹೇಳುತ್ತಾರೆ: ಜಾಗತಿಕ ಬೈಅತ್ ಸಮಾರಂಭವನ್ನು ನೋಡಿ ನನಗೆ ಬಹಳ ಆಶ್ಚರ್ಯವಾಯಿತು, ಹೇಗೆ ವಿವಿಧ ಕನಾಂಗದವರು ಒಂದೇ ದಾರದಲ್ಲಿ ಮುತ್ತುಗಳನ್ನು ಪೋಣಿಸಿರುವಂತೆ ಭಾಸವಾಯಿತು.

ಉರುಗ್ವೆಯದಿಂದ ಬಂದಿರುವ ಅಹ್ಮದಿಯೇತರ ಜರ್ನಲಿಷ್ಟ್ ಬಂದಿದ್ದರು. ಅವರು ಹೇಳುತ್ತಾರೆ: ಜಲ್ಸದಲ್ಲಿ ಭಾಗವಹಿಸುವ ಮೊದಲು, ನಾನು ಅನೇಕ ನಿರೀಕ್ಷೆಗಳನ್ನು ಮತ್ತು ಪಕ್ಷಪಾತಗಳನ್ನು ಹೊಂದಿದ್ದೆ. ಉರುಗ್ವೆಯಲ್ಲಿನ ನನ್ನ ಪ್ರಾಜೆಕ್ಟ್‌ಗಾಗಿ ಇಸ್ಲಾಂ ಅನ್ನು ನಿಕಟವಾಗಿ ತಿಳಿದುಕೊಳ್ಳುವುದು ಮತ್ತು ವಿಶೇಷವಾಗಿ ನಿಮ್ಮ ಸಮುದಾಯ ಮಾಡುತ್ತಿರುವ ಕೆಲಸವನ್ನು ತಿಳಿದುಕೊಳ್ಳುವುದು ಮುಖ್ಯವಾಗಿತ್ತು. ಖಲೀಫರ ಆತಿಥ್ಯದ ಬಗ್ಗೆ ಮಾತನಾಡಿದ ಮೊದಲ ದಿನದ ಭಾಷಣ ವಿಶೇಷವಾಗಿ ಪ್ರಭಾವಶಾಲಿಯಾಗಿತ್ತು. ಅತಿಥಿಯಾಗಿ ನಾವು ಅತಿಥಿಗಳು ಅಂತರಧರ್ಮದ ಸಂದೇಶವನ್ನು ನಿರೀಕ್ಷಿಸುತ್ತಿದ್ದೇವೆ ಎಂದು ನಾನು ಭಾವಿಸುತ್ತೇನೆ ಆದರೆ ಈ ಸಂದೇಶವನ್ನು ಸಮುದಾಯಕ್ಕೆ ತಿಳಿಸಲಾಗಿದೆ. ಅವರು ಹೇಳುತ್ತಾರೆ: ನಾನು ದೇವರ ಮಹಿಮೆ ಮತ್ತು ನಿರಂತರ ಹೊಗಳಿಕೆಯ ವಾತಾವರಣದಲ್ಲಿ ತುಂಬಾ ಆರಾಮದಾಯಕವಾಗಿದ್ದೇನೆ. ಮತ್ತೆ ಹೇಳುತ್ತಾರೆ: ನಾನು ಅಹ್ಮದೀಯ ಮುಸ್ಲಿಂ ಸಮುದಾಯದ ವಿವಿಧ ಸಂಸ್ಕೃತಿಗಳ ಬಗ್ಗೆ ಸಾಕಷ್ಟು ಕಲಿತಿದ್ದೇನೆ ಮತ್ತು ಅದು ನನ್ನ ಅನೇಕ ಪಕ್ಷಪಾತ ಭಾವನೆಗಳನ್ನು ತೆರವುಗೊಳಿಸಿದೆ. ನಂತರ ನನಗೆ ಮಹಿಳೆಯರ ವಿಭಾಗದಲ್ಲಿ ಏನನ್ನೂ ರೆಕಾರ್ಡ್ ಮಾಡಲು ಅನುಮತಿ ಇರಲಿಲ್ಲ. ಇದರಲ್ಲಿ ಯಾವುದೇ ಅಪಾಯ ಅಥವಾ ಹಾನಿ ಇಲ್ಲ ಎಂದು ನಾನು ಭಾವಿಸುತ್ತೇನೆ. ಅವರು ಚಿತ್ರಗಳನ್ನು ಉಲ್ಲೇಖಿಸುತ್ತಿದ್ದರೆ, ಅದನ್ನು ತಡೆದಿರುವುದು ಸರಿ ಇದೆ. ಅದನ್ನು ಹೊರತುಪಡಿಸಿ ರೆಕಾರ್ಡ್ ಮಾಡಬಹುದು. ರೆಕಾರ್ಡಿಂಗ್‌ಗಳನ್ನು ನಂತರವೂ ಸಹ ತೆಗೆದುಕೊಳ್ಳಬಹುದಾಗಿತ್ತು. ಆದಾಗ್ಯೂ, ಈ ವಿಷಯವನ್ನು ಅಲ್ಲಿಂದ ಬಂದಿರುವ ಮುರಬ್ಬಿ ಸಾಹಿಬರು ಅವರನ್ನು ಅರ್ಥ ಮಾಡಿಸಬಹುದು. ಮತ್ತೆ ಅವರು ಹೇಳುತ್ತಾರೆ: ನಮಗೆ ಅವಕಾಶ ನೀಡಿದ್ದರೆ ನಮ್ಮ ದೇಶದಲ್ಲಿ ಅದನ್ನು ಹರಡಲು ಉತ್ತಮವಾದ ವಿಷಯಗಳನ್ನು ತಯಾರಿಸಬಹುದಿತ್ತು ಯಾವುದೇ ತೊಂದರೆ ಇರಲಿಲ್ಲ. ಜಲ್ಸ ಸಾಲಾನಗೆ ಹಾಜರಾಗುವುದು ನನ್ನ ಆಧ್ಯಾತ್ಮಿಕ ಜೀವನದ ಮೇಲೆ ಮಹತ್ವದ ಪ್ರಭಾವ ಬೀರಿದೆ. ಸರ್ವಶಕ್ತನಾದ ಅಲ್ಲಾಹನಲ್ಲಿ ಪ್ರಾರ್ಥಿಸುವಾಗ ಪುರುಷರು ಅಳುವುದನ್ನು ನೋಡುವುದು ನನಗೆ ಅತ್ಯಂತ ಸ್ಮರಣೀಯ ಕ್ಷಣವಾಗಿದೆ. ಪತ್ರಕರ್ತರ ಸಹಭಾಗಿತ್ವದ ನಿರ್ವಹಣೆಯು ಈವೆಂಟ್‌ನ ಉತ್ತಮ ಪ್ರಸಾರಕ್ಕೆ ಕಾರಣವಾಗುವ ರೀತಿಯಲ್ಲಿ ಸುಧಾರಿಸಬಹುದು ಎಂದು ನಾನು ಭಾವಿಸುತ್ತೇನೆ. ಸಮುದಾಯದ ಚಟುವಟಿಕೆಗಳು ಮತ್ತು ಕಾರ್ಯ ವಿಧಾನಗಳನ್ನು ಜಗತ್ತಿಗೆ ಹೆಚ್ಚು ವ್ಯಾಪಕವಾಗಿ ತಿಳಿಯುವಂತೆ ಮಾಡುವುದು ನನ್ನ ಸಲಹೆ.

ಪೋಲೆಂಡ್‌ನ ಮಹಿಳಾ ಅತಿಥಿ ಐನ್ನಾ ಪೆತ್ರುಸ್ಕಾ ಸಾಹಿಬಾ ಆಗಮಿಸಿದ್ದರು. ಅವರು ಗ್ರಾಹಕ ಬೆಂಬಲ ವಿಭಾಗದಲ್ಲಿ ಕೆಲಸ ಮಾಡುತ್ತಾರೆ. ಅವರು ಹೇಳುತ್ತಾರೆ: ನಾನು ದೇವರನ್ನು ನಂಬುತ್ತೇನೆ ಆದರೆ ತನ್ನನ್ನು ಯಾವುದೇ ಧರ್ಮದ ಭಾಗವೆಂದು ಪರಿಗಣಿಸುವುದಿಲ್ಲ. ನನ್ನ ಜೊತೆ ಕೆಲಸ ಮಾಡುತ್ತಿದ್ದ ಒಬ್ಬ ಅಹ್ಮದಿಯಿಂದ ನನಗೆ ಜಮಾಅತ್ ಪರಿಚಯವಾಯಿತು. ಅವರು ತಮ್ಮ ಜಮಾಅತ್ ಬಗ್ಗೆ ತುಂಬಾ ಹೆಮ್ಮೆಪಡುತ್ತಾರೆ ಮತ್ತು ಅದರ ಬಗ್ಗೆ ಇತರರಿಗೆ ಹೇಳುತ್ತಿದ್ದರು ಎಂದು ನಾನು ಭಾವಿಸಿದೆ. ಹಾಗಾಗಿ ನಾನು ಅಹ್ಮದಿಯಾ ಜಮಾಅತ್ ಬಗ್ಗೆ

ಕೆಲವು ವಿಷಯುಗಳು ಮತ್ತು ವೆಬ್‌ಸೈಟ್ ಲಿಂಕ್ ಅನ್ನು ಸಹ ಪಡೆದುಕೊಂಡಿದ್ದೇನೆ ನಂತರ ಕೆಲವು ಅಧ್ಯಯನದ ನಂತರ ನಾನು ಜಲ್ಸಾ ಸಾಲಾನಾ ಯುಕೆಗೆ ಸೇರಲು ನಿರ್ಧರಿಸಿದೆ. ನಾನು ಜಲ್ಸಾದ ಅನುಗುಣವಾಗಿ ನನ್ನ ಡ್ರೆಸ್ ಮತ್ತು ಸ್ಕಾರ್ಫ್ ಅನ್ನು ಸಹ ಖರೀದಿಸಿದೆ. ನಾನು ಜಲ್ಸದ ಕಡೆಗೆ ಪ್ರಯಾಣ ಪ್ರಾರಂಭಿಸಿದಾಗ ನನಗೆ ಮಿಶ್ರ ಭಾವನೆಗಳು ಬಂದವು. ಸ್ವಲ್ಪ ಭಯವು ಇತ್ತು. ಮತ್ತೆ ಹೇಳುತ್ತಾರೆ: ಜಲ್ಸದ ಮೊದಲ ದಿನ, ನಾನು ಯಾವ ಮಾರ್ಗವನ್ನು ತೆಗೆದುಕೊಳ್ಳಬೇಕೆಂದು ನನಗೆ ತಿಳಿದಿರಲಿಲ್ಲ. ಅಷ್ಟರಲ್ಲಿ ಹುಡುಗಿಯೊಬ್ಬಳು ಕೇಳದೆ ನನಗೆ ಸಹಾಯ ಮಾಡಲು ಮುಂದಾದಳು ಇದು ನನಗೆ ಬಹಳ ಆಶ್ಚರ್ಯಗೊಳಿಸಿತು. ಜಲ್ಸದ ಸ್ಥಳವನ್ನು ತಲುಪಿದ ತಕ್ಷಣ, ಅಲ್ಲಿ ಹೆಚ್ಚಿನ ಸಂಖ್ಯೆಯ ಜನರಿದ್ದರೂ ನಾನು ಸುರಕ್ಷಿತವಾಗಿರುತ್ತೇನೆ ಎಂದು ಭಾವಿಸಿದೆ, ನಾನು ಯಾವುದೇ ಒತ್ತಡವನ್ನು ಅನುಭವಿಸಲಿಲ್ಲ. ಜಲ್ಸದ ಸಂದರ್ಭದ ವಿವಿಧ ಭಾಷಣಗಳು, ವಿಶೇಷವಾಗಿ ಜಮಾಅತ್ ನ ಇಮಾಮ್ ಅವರ ಭಾಷಣಗಳು ಅಹ್ಮದಿಯಾ ಜಮಾಅತ್‌ನೊಂದಿಗೆ ನನ್ನ ಸಂಪರ್ಕವನ್ನು ಬಲಪಡಿಸಿದೆ. ಮಕ್ಕಳನ್ನು ಹೇಗೆ ಬೆಳೆಸಬೇಕು ಎಂಬುದರ ಬಗ್ಗೆ ಮಾರ್ಗದರ್ಶನ ನೀಡಿದ ಲಜ್ನಾ ಭಾಷಣವು ನನಗೆ ಅತ್ಯಂತ ಸ್ಮರಣೀಯವಾಗಿತ್ತು. ಭಾಷಣದ ಸಮಯದಲ್ಲಿ ನಾನು ನನ್ನ ಮಕ್ಕಳ ಬಗ್ಗೆಯೇ ಯೋಚಿಸುತ್ತಿದ್ದೆ, ಇಮಾಮ್‌ರು ಪ್ರಸ್ತಾಪಿಸಿದ ಮೌಲ್ಯಗಳನ್ನು ನಾನು ಸಂಪೂರ್ಣವಾಗಿ ಒಪ್ಪುತ್ತೇನೆ ಮತ್ತು ಅವೆಲ್ಲವನ್ನೂ ಬಹಳ ಮುಖ್ಯ ಮತ್ತು ಗಮನಾರ್ಹವೆಂದು ಪರಿಗಣಿಸುತ್ತೇನೆ.

ಕೊಸೊವೊ ವಿಶ್ವವಿದ್ಯಾಲಯದಲ್ಲಿ ಪ್ರಾಧ್ಯಾಪಕರಾಗಿರುವ ಪ್ರಿಷ್ಟೀನಾ ಸಾಹಿಬಾ ಅವರು ಮೊದಲ ಬಾರಿಗೆ ಜಲ್ಸಕ್ಕೆ ಸೇರಿದ್ದರು ತಮ್ಮ ಅನಿಸಿಕೆಗಳನ್ನು ವಿವರಿಸುತ್ತಾ ಹೇಳುತ್ತಾರೆ: ನನಗೆ ಎಲ್ಲೆಡೆ ಪ್ರೀತಿ ಮತ್ತು ವಾತ್ಸಲ್ಯವನ್ನು ಪಡೆದುಕೊಂಡೆ. ಈ ಜಲ್ಸವು ನನ್ನ ಪ್ರಕಾರ ಬಹಳ ಯಶಸ್ವಿಯಾಗಿತ್ತು ವಿಶೇಷವಾಗಿ ಪ್ರದರ್ಶನಗಳು. ಅವರು ಹೇಳುತ್ತಾರೆ: ನಾವು ಕೊಸೊವೊದಿಂದ ಬಂದವರು ಮತ್ತು ಪ್ರಪಂಚದಾದ್ಯಂತ ಜಮಾಅತ್‌ನ ವಿರೋಧವನ್ನು ಕೇಳಲು ತುಂಬಾ ನೋವಾಯಿತು. ಜಮಾಅತ್ ನ ಇಮಾಮ್ ಅವರ ಸಮಾರೋಪ ಭಾಷಣವು ಇಸ್ಲಾಂ ಅಹ್ಮದಿಯ್ಯತ್‌ನ ನಿಜವಾದ ಬೋಧನೆ ಏನು ಎಂಬುದನ್ನು ನನ್ನ ಗಮನಕ್ಕೆ ತಂದಿತು. ಮತ್ತು ನನ್ನ ಪ್ರಶ್ನೆಗಳಿಗೆ ನಾನು ಉತ್ತರಗಳನ್ನು ಪಡೆದುಕೊಂಡಿದ್ದೇನೆ. ನಾನು ಖಂಡಿತವಾಗಿಯೂ ಕೊಸೊವೊಗೆ ಹೋಗುತ್ತೇನೆ ಮತ್ತು ಅಹಮದಿಯಾ ಜಮಾಅತ್‌ನ ನಂಬಿಕೆಗಳ ವಿರುದ್ಧ ಮಾತನಾಡುವವರಿಗೆ ಉತ್ತರವನ್ನು ನೀಡುತ್ತೇನೆ.

ಅದೇ ರೀತಿ ನೆದರ್‌ಲ್ಯಾಂಡ್‌ನ ಅತಿಥಿ ಸನ್ಮಾನ್ಯ ಚುರ್ಕ್ ವ್ಯಾನ್ ಹೇಳುತ್ತಾರೆ: ಅಹ್ಮದೀಯ ಸಮುದಾಯದ ಆತಿಥ್ಯ ಮತ್ತು ಸಾವಿರಾರು ಜನರ ಸ್ವಯಂಪ್ರೇರಿತ ಪ್ರಯತ್ನದಿಂದ ನಾನು ತುಂಬಾ ಪ್ರಭಾವಿತನಾಗಿದ್ದೆನೆ. ಎಲ್ಲರಿಗೂ ಗೌರವ, ಪ್ರೀತಿ ಮತ್ತು ಶಾಂತಿಯ ವಾತಾವರಣವಿತ್ತು. ಮತ್ತೆ ಹೇಳುತ್ತಾರೆ: ನಾನು ಕೂಡ ಜಮಾಅತ್ ನ ಇಮಾಮ್ ಅವರನ್ನು ಭೇಟಿಯಾದೆ. ಇದು ಒಂದು ಉತ್ತಮ ಅನುಭವವಾಗಿತ್ತು ಮತ್ತು ಅವರು ನಮ್ಮನ್ನು ಭೇಟಿಯಾಗುವುದು ಮಾತ್ರವಲ್ಲದೆ ಇಸ್ಲಾಂ ಧರ್ಮದ ಬಗ್ಗೆ ಅಹ್ಮದಿಗಳು ಮತ್ತು ಮುಸ್ಲಿಮೇತರರ ಪ್ರಶ್ನೆಗಳಿಗೆ ಉತ್ತರಿಸಲು ಸಮಯವನ್ನು ತೆಗೆದುಕೊಂಡರು ಮತ್ತು ನಾನು ಹೆಚ್ಚು ಪ್ರಯೋಜನ ಪಡೆದಿದ್ದೇನೆ. ಈ ವಿಷಯಗಳು ನನ್ನ ಹೃದಯವನ್ನು ಪ್ರವೇಶಿಸಿವೆ ಮತ್ತು ಯಾವುದೇ ಹಿಂಜರಿಕೆಯಿಲ್ಲದೆ ಅವರು ನಮ್ಮ ಮಾತುಗಳನ್ನು ಸಾಂತ್ವನದಿಂದ ಕೇಳಿದರು ಮತ್ತು ನಮಗೆ ಉತ್ತರಿಸಿದರು ಎಂದು ಅವರು ಹೇಳುತ್ತಾರೆ.

ಇವು ಕೆಲವು ಅನಿಸಿಕೆಗಳಾಗಿದ್ದುವು. ಅವುಗಳನ್ನು ನಾನು ಪ್ರಸ್ತಾಪಿಸಿದೆ. ಜಲ್ಸ ಸಾಲಾನದ ಕಾರಣದಿಂದ ಉಂಟಾದ ಬೈಅತ್‌ಗಳ ರಿಪೋರ್ಟ್ ಹೀಗಿದೆ: ಗಿನಿಬಸಾವ್‌ನ ಒಬ್ಬ ನೇತಾರ ಎಂಬತ್ತೈದು ವ್ಯಕ್ತಿಗಳೊಂದಿಗೆ ಬೈಅತ್ ಮಾಡಿದರು. ತನ್ಸಾನಿಯದ ಒಂದು ಗ್ರಾಮದ ಮಸೀದಿಯ ಇಮಾಂ ಮತ್ತು ನೈಜೀರಿಯದಲ್ಲಿ ಒಂದು ಮದ್ರಸದ ಶಿಕ್ಷಕಿ ಬೈಅತ್ ಮಾಡಿದರು. ಕಾಂಗೋ ಬರಾರ್ಝಾವೇಲ್‌ನಲ್ಲಿ ಜಲ್ಸದ ವೇಳೆ ಹನ್ನೆರಡು ವ್ಯಕ್ತಿಗಳು ಬೈಅತ್ ಮಾಡಿದರು. ಗಿನಿಬಸಾವ್‌ನ ಮುಬಲ್ಲಿಗ್ ಬರೆಯುತ್ತಾರೆ: ಗಿನಿಬಸಾವ್‌ನ ಒಂದು ಸ್ಥಳ ಸಾರಿಯೇಕೂವನ ನೇತಾರರು ಜಮಾಅತ್‌ನ ಕಟುವಿರೋಧಿಯಾಗಿದ್ದರು. ಜಲ್ಸ ಸಾಲಾನದ ಸಂದರ್ಭದಲ್ಲಿ ಅವರು ಜಲ್ಸದ ಕಾರ್ಯಕ್ರಮಗಳನ್ನು ಮತ್ತು ನನ್ನ ಭಾಷಣಗಳನ್ನು ಆಲಿಸಿದರು. ಅವರನ್ನು ಬಂದು ಕೇಳಲು ಆಹ್ವಾನಿಸಲಾಗಿತ್ತು. ಅವರು ಹಳೇಉತ್ತಾರೆ: ನನ್ನ ಈ ಭಾಷಣವನ್ನು ಆಲಿಸಿದ ನಂತರ ಅವರು ಹೇಳಿದರು, ನಿಮ್ಮ ಖಲೀಪರು ಮತ್ತು ಅಹ್ಮದಿಯಾ ಜಮಾಅತ್‌ನ ಸಂಸ್ಥಾಪಕರು ಹಝ್ರತ್ ಪೈಗಂಬರ್(ಸ)ರ ನಿಜವಾದ ಪ್ರೇಮಿಯಾಗಿದ್ದಾರೆ ಮತ್ತು ಅಹ್ಮದಿಯಾ ಜಮಾಅತ್ ಹಝ್ರತ್ ಪೈಗಂಬರ್(ಸ) ಅವರನ್ನು ನಬೀ ಎಂದು ನೊಂಬುವುದಿಲ್ಲ ಮತ್ತು ಅವರು ತಮ್ಮದೇ ಆದ ನಬೀಯನ್ನು ಸೃಷ್ಟಿಸಿದ್ದಾರೆ ಎಂದು ನಮಗೆ ಯಾವಾಗಲೂ ಹೇಳಲಾಗುತ್ತಿತ್ತು, ಆದರೆ ನಿಮ್ಮ ಇಮಾಮ್ ಅವರ ಭಾಷಣವನ್ನು ಆಲಿಸಿದ ನಂತರ, ನಿಮ್ಮ ಜಮಾಅತ್ ಹಝ್ರತ್ ಪೈಗಂಬರ್(ಸ) ಅವರ ನಿಜವಾದ ಸಾದಿಕ್ ಜಮಾಅತ್ ಆಗಿದೆ ಎಂದು ನನಗೆ ಮನವರಿಕೆಯಾಯಿತು ಮತ್ತು ಅವರು ಅದೇ ಸಮಯದಲ್ಲಿ ತಮ್ಮೊಂದಿಗೆ ಎಂಭತ್ತೈದು ಜನರೊಂದಿಗೆ ಅಹ್ಮದಿಯ್ಯತ್ ಅನ್ನು ಸ್ವೀಕರಿಸಲು ಘೋಷಿಸಿದರು. ವಿರೋಧಿಸಿದವರು ಜಲ್ಸಾವನ್ನು ಆಲಿಸಿ ಜಮಾಅತ್‌ನಲ್ಲಿ ಸೇರ್ಪಡೆಯಾದರು. ಸರ್ವಶಕ್ತನಾದ ಅಲ್ಲಾಹನು ಪಾಕಿಸ್ತಾನದ ಮೌಲವಿಗಳನ್ನು ಸಹ ಬುದ್ಧಿ ನೀಡಲಿ.

ತಾಂಜಾನಿಯಾದ ಅಬುಜಾ ಎಂಬ ಹಳ್ಳಿಯ ಮಸೀದಿಯ ಇಮಾಮ್ ಹೇಳುತ್ತಾರೆ: ಎಂಟಿಎ ನಲ್ಲಿ ಜಲ್ಸಾ ಸಾಲಾನದ ದೃಶ್ಯಗಳನ್ನು ನೋಡಿ ಆಶ್ಚರ್ಯಚಕಿತನಾಗಿದ್ದೇನೆ. ಈ ದೃಶ್ಯ ಬಹಳ ಪ್ರಭಾವಶಾಲಿಯಾಗಿತ್ತು. ಬೈಅತ್ ಸಮಾರಂಭದ ಸಮಯದಲ್ಲಿ ಬಹಳ ಭಾವನಾತ್ಮಕ ಕ್ಷಣಗಳು ಇದ್ದವು ಮತ್ತು ಎಲ್ಲರೂ ಇಮಾಮ್ ಹಿಂದೆ ಪದಗಳನ್ನು ಪುನರಾವರ್ತಿಸುತ್ತಿದ್ದರು ಮತ್ತು ನಂತರ ಪ್ರಾರ್ಥಿಸುತ್ತಿರುವುದು ನನಗೆ ಆಶ್ಚರ್ಯವಾಯಿತು. ಈ ದೃಶ್ಯಗಳು ನನ್ನನ್ನು ಸಂಪೂರ್ಣವಾಗಿ ಬದಲಾಯಿಸಿದವು ಮತ್ತು ನನ್ನ ಮೇಲೆ ಆಳವಾದ ಪರಿಣಾಮ ಬೀರಿದವು. ಇನ್‌ಶಾಅಲ್ಲಾಹ್, ನಾನು ನನ್ನ ಜೀವನದುದ್ದಕ್ಕೂ ಈ ಜಮಾಅತ್ತಿನೊಂದಿಗೆ ಸಂಬಂಧ ಹೊಂದಿರುತ್ತೇನೆ. ನಾನು ಸುನ್ನಿ ಮಸೀದಿಯಲ್ಲಿ ಇಮಾಮ್ ಆಗಿದ್ದೆ ಆದರೆ ಈಗ ನಾನು ಹೃದಯಾಳದಿಂದ ಅಹ್ಮದಿಯಾಗಿದ್ದೇನೆ ಮತ್ತು ಸಂಪೂರ್ಣವಾಗಿ ಬದಲಾಗಿದ್ದೇನೆ.

ಜಲ್ಸದ ವೇಳೆ ಯು.ಕೆ.ಯ ಇಪ್ಪತ್ತೆರಡು ವ್ಯಕ್ತಿಗಳಿಗೆ ಬೈಅತ್ ಮಾಡುವ ಸೌಭಾಗ್ಯ ಲಭಿಸಿತು ಎಂದು ತಬ್ಲೀಗ್ ವಿಭಾಗ ವರದಿ ನೀಡಿದೆ. ಅವರಲ್ಲಿ ಇಬ್ಬರು ಬ್ರಿಟಿಷ್, ಇಬ್ಬರು ನೈಜೀರಿಯನ್, ಹನ್ನೊಂದು ಮಂದಿ ಪಾಕಿಸ್ತಾನಿ, ಒಬ್ಬರು ರೊಮಾನಿ, ಐವರು ಅರಬ್ ಮತ್ತು ಒಬ್ಬರು ಬೆಂಗಾಲಿ. ಜಲ್ಸದ ಸಂದರ್ಭದಲ್ಲಿ ಸುಮಾರು ಒಂದು ಸಾವಿರ ಅಹ್ಮದಿಯೇತರ ಅತಿಥಿಗಳು ಜಲ್ಸದಲ್ಲಿ ಭಾಗವಹಿಸಿದ್ದರು. ವಿವಿಧ ತಬ್ಲಿಘಿ ಸೆಷನ್‌ಗಳು ನಡೆದವು, ಇದರಲ್ಲಿ ಪ್ರಶ್ನೋತ್ತರ ಸಭೆಗಳು ಸೇರಿವೆ ಮತ್ತು ವಿವಿಧ ಜನರು ತಮ್ಮ ಪ್ರತಿಕ್ರಿಯೆಯನ್ನು ಸಹ ನೀಡಿದರು. ಹದಿನಾಲ್ಕಕ್ಕೂ ಹೆಚ್ಚು ರಾಷ್ಟ್ರೀಯ ಟಿವಿ ಚಾನೆಲ್‌ಗಳು ಎಂಟಿಎ ಆಫ್ರಿಕಾ ಅಡಿಯಲ್ಲಿ ನನ್ನ ಭಾಷಣಗಳನ್ನು ಪ್ರಸಾರ ಮಾಡಿದವು. ಜಾಗತಿಕ ಬೈಅತ್ ಸಮಾರಂಭವನ್ನು ನೇರ ಪ್ರಸಾರ ಮಾಡಲಾಯಿತು, ಇದನ್ನು ಹಲವಾರು ಮಿಲಿಯನ್ ಜನರು ವೀಕ್ಷಿಸಿದರು. ಆಫ್ರಿಕಾದಿಂದ ಸೇರ್ಪಡೆಗೊಂಡ ಹೊಸ ಚಾನೆಲ್‌ಗಳಲ್ಲಿ ಮಲಾವಿಯ ನ್ಯಾಷನಲ್ ಟಿವಿ ಚಾನೆಲ್, ಬೆನಿನ್‌ನಲ್ಲಿ ಕೆನಾಲ್ ಪ್ಲಸ್ ಟಿವಿ ಚಾನೆಲ್, ಗ್ಯಾಂಬಿಯಾ, ಘಾನಾ, ಉಗಾಂಡಾ, ಲೈಬೀರಿಯಾ ಮತ್ತು ಸೆರಾಲಿಯೋನ್‌ನ ಸರ್ಕಾರಿ ಚಾನೆಲ್‌ಗಳು ಸೇರಿವೆ. ಮೂವತ್ತು ದಶಲಕ್ಷಕ್ಕೂ ಹೆಚ್ಚು ಜನರು ಈ ಚಾನಲ್‌ಗಳನ್ನು ವೀಕ್ಷಿಸುತ್ತಾರೆ. ಹದಿನಾಲ್ಕು ವಿಭಿನ್ನ ದೂರದರ್ಶನ ಪತ್ರಕರ್ತರು ಜಲ್ಸದಲ್ಲಿ ಭಾಗವಹಿಸಿದ್ದರು ಮತ್ತು ಐವತ್ತೇಳು ವರದಿಗಳನ್ನು ಪ್ರಸಾರ ಮಾಡಲಾಯಿತು. ಈ ವರದಿಗಳು ಐವತ್ತೈದು ದಶಲಕ್ಷಕ್ಕೂ ಹೆಚ್ಚು ಜನರನ್ನು ತಲುಪುತ್ತವೆ. ಸೆನೆಗಲ್‌ನಲ್ಲಿ ಜಲ್ಸವನ್ನು ಆಲಿಸಲು ಮಿಷನ್ ಹೌಸ್‌ನಲ್ಲಿ ವ್ಯವಸ್ಥೆ ಮಾಡಲಾಗಿತ್ತು. ಕಾಲೇಜಿನಲ್ಲಿ ಪವಿತ್ರ ಖುರ್‌ಆನ್, ಹದೀಸ್ ಮತ್ತು ಫಿಕ್ಹ್ ಉಪನ್ಯಾಸಕರಾಗಿರುವ ಇಮಾಮ್ ಅವರು ಜಲ್ಸದ ನಂತರ ಹೇಳಿದರು: ಇಂದು ನಾನು ಬಹಳ ಅದೃಷ್ಟಶಾಲಿಯಾಗುದ್ದೇನೆ ಏಕೆಂದರೆ ಇಂದು ನಾನು ಇಮಾಮ್ ಮಹದಿ ಅವರ ಖಲೀಫರನ್ನು ನೇರವಾಗಿ ನೋಡುವ ಮತ್ತು ಅವರ ಉಪನ್ಯಾಸವನ್ನು ಕೇಳುವ ಅವಕಾಶ ಲಭಿಸಿದೆ. ಈ ಹಿಂದೆ, ಅಹ್ಮದೀಯ ಜಮಾಅತ್ ಬಗ್ಗೆ ನನಗೆ ಅನೇಕ ಸಂದೇಹಗಳಿದ್ದವು, ಅಹ್ಮದೀಯರು ಹಝ್ರತ್ ಪೈಗಂಬರ್(ಸ)ರ ಮಹಿಮೆಯನ್ನು ಕಡಿತಗೊಳಿಸುತ್ತಾರೆ (ನೌಝುಬಿಲ್ಲಾಹ್) ಆದರೆ ಇಂದು ಖಲೀಫತುಲ್ ಮಸೀಹ್ ಅವರ ಭಾಷಣವನ್ನು ಕೇಳಿದ ನಂತರ, ಈ ಬಗ್ಗೆ ನನ್ನ ಎಲ್ಲಾ ಅನುಮಾನಗಳು ತೆಗೆದುಹಾಕಲಾಗಿದೆ ಮತ್ತು ಇಂದಿನ ಭಾಷಣವನ್ನು ಕೇಳಿದ ನಂತರ, ಅಹ್ಮದಿಯಾ ಸಮುದಾಯವು ಹಝ್ರತ್ ಪೈಗಂಬರ್(ಸ) ಅವರ ಮಹಿಮೆಯ ಬಗ್ಗೆ ಅಹಂಕಾರ ಹೊಂದಿಲ್ಲ ಎಂದು ನಾನು ಸ್ಪಷ್ಟವಾಗಿ ಹೇಳಬಲ್ಲೆ, ಅವರು ಇಡೀ ಪ್ರಪಂಚವನ್ನು ಹಝ್ರತ್ ಪೈಗಂಬರ್(ಸ) ಅವರೊಂಗೆ ವಿಧೇಯತೆಯನ್ನು ಬೋಧಿಸುತ್ತದೆ.

ಆನ್‌ಲೈನ್ ಕವರೇಜಿನ ರಿಪೋರ್ಟ್ ಹೀಗಿದೆ: ಈ ವರ್ಷ ಐವತ್ತು ವೆಬ್‌ಸೈಟ್‌ಗಳಲ್ಲಿ ಜಲ್ಸದ ವಾರ್ತೆ ಓದಿದವರ ಸಂಖ್ಯೆ ಹದಿನೈದು ಮಿಲಿಯನ್ ಎಂದು ಹೇಳಲಾಗುತ್ತದೆ. ಪ್ರಿಂಟ್ ಕವರೇಜ್ ಲೇಖನಗಳ ಸಂಖ್ಯೆ ಹದಿನಾಲ್ಕು. ಆ ವಾರ್ತಾಪತ್ರಿಕೆಗಳ ಓದುಗರ ಸಂಖ್ಯೆ ಐದು ಮಿಲಿಯನ್ ಎಂದು ಹೇಳಲಾಗುತ್ತದೆ. ಟಿ.ವಿ. ಮತ್ತು ರೇಡಿಯೋದ ಮೂಲಕ ನೋಡಿದವರ ಸಂಖ್ಯೆ ಹತ್ತು ಮಿಲಿಯನ್ ಎಂದು ಹೇಳಲಾಗುತ್ತದೆ. ವಿವಿಧ ರೇಡಿಯೋ ಸ್ಟೇಶನ್‌ಗಳ ಮೂಲಕ ಆಲಿಸಿದವರ ಸಂಖ್ಯೆ ಸಹ ಹತ್ತು ಮಿಲಿಯನ್ ಆಗಿದೆ. ಅದೇ ರೀತಿಯಲ್ಲಿ ಮಖ್ಝ್‌ಝೂನೇ ತಸಾವೀರ್, ಹಿಸ್ಟರಿ ಮತ್ತು

ಇತರ ವಿಭಾಗಗಳ ಎಕ್ಸಿಬಿಶನ್‌ಗಳನ್ನು ನೋಡಿ ಅನೇಕರು ಪ್ರಭಾವಿತಗೊಂಡಿರುವರು. ಈ ಎಲ್ಲ ಎಕ್ಸಿಬಿಶನ್‌ಗಳು ತಬ್ಲೀಗಿನ ಒಂದು ಮಾರ್ಗವಾಗಿ ಬಿಟ್ಟಿವೆ. ಅಲ್ಲಾಹನ ಅನುಗ್ರಹದಿಂದ ಅಂದಾಜು ನಲ್ವತ್ತಾರು ಮಿಲಿಯನ್‌ಗಿಂತ ಹೆಚ್ಚು ಜನರು ಜಲ್ಸ ಸಾಲಾನದ ವಾರ್ತೆಗಳನ್ನು ನೋಡಿದರು ಮತ್ತು ಆಲಿಸಿದರು. ಬರುವ ದಿನಗಳಲ್ಲಿ ಇನ್ನಷ್ಟು ಕವರೇಜಿನ ಪ್ರತೀಕ್ಷೆಯಿದೆ.

ಅಲ್ಲಾಹನ ಅನುಗ್ರಹದಿಂದ ಈ ಜಲ್ಸ ನಮ್ಮ ಜನರಿಗೆ ತರಬೇತಿ ಮತ್ತು ಆಧ್ಯಾತ್ಮಿಕತೆಯಲ್ಲಿ ಅಭಿವೃದ್ಧಿಗೆ ಕಾರಣವಾಗಿರುವ ಹಾಗೆಯೇ ಅನ್ಯರಿಗೂ ಇಸ್ಲಾಮಿನ ಪಾಠಗಳನ್ನು ತಿಳಿಯಲು ಮತ್ತು ಅವರನ್ನು ಅಲ್ಲಾಹನ ಸಮೀಪಕ್ಕೆ ತರುವ ಮಾರ್ಗವಾಗಿ ಬಿಟ್ಟಿದೆ. ಒಟ್ಟಿನಲ್ಲಿ ಅದಕ್ಕಾಗಿ ನಾವು ಅಲ್ಲಾಹನ ಮುಂದೆ ಇನ್ನಷ್ಟು ಬಾಗಬೇಕು ಮತ್ತು ಅವನಿಗೆ ಕೃತಜ್ಞತೆ ಅರ್ಪಿಸಬೇಕು. ಹಾಗೆಯೇ ನಾವು ಸದಾ ಅಲ್ಲಾಹನ ಮತ್ತು ಹಝ್ರತ್ ಮಸೀಹ್ ಮೌಊದ್(ಅ)ರ ಸಂದೇಶವನ್ನು ತಲುಪಿಸಲು ಮೊದಲಿಗಿಂತ ಹೆಚ್ಚು ಪ್ರಯತ್ನಿಸಬೇಕು. ಅಲ್ಲಾಹನು ನಮಗೆ ಅದರ ಸೌಭಾಗ್ಯ ನೀಡಲಿ.
**(ಅಲ್-ಫಝ್ಲ್ ಇಂಟರ್‌ನ್ಯಾಷನಲ್, ಆಗಸ್ಟ್ 23, 2024, ಪುಟ 1-8)**

------------*****------------

*(ಪುಟ ಸಂಖ್ಯೆ 01ರ ಉಳಿದ ಭಾಗ)*

ಹೇಳುತ್ತಾರೆ:

ಸರ್ವಶಕ್ತನಾದ ಅಲ್ಲಾಹನು ನುಡಿಯುತ್ತಾನೆ. ನಾವು ಜಗತ್ತಿನಲ್ಲಿ ಸಾವಿರಾರು ವಸ್ತುಗಳನ್ನು ಸೃಷ್ಟಿಸಿದ್ದೇವೆ ಮತ್ತು ಮನುಷ್ಯನಿಗೆ ಉದ್ಯೋಗವನ್ನು ಸೃಷ್ಟಿಸುವುದು ಉದ್ದೇಶವಾಗಿದೆ, ಇದರಿಂದ ಅವನು ಈ ವಿಷಯಗಳನ್ನು ಕಂಡುಹಿಡಿಯಬಹುದು ಮತ್ತು ನಂತರ ಅವುಗಳನ್ನು ಬಳಸಿಕೊಳ್ಳಬಹುದು. ಅದು ಪ್ರಯೋಜನವನ್ನು ನೀಡುತ್ತದೆ. ಯಾವುದೇ ಪ್ರಯೋಜನವಿಲ್ಲ ಎಂಬುದಿಲ್ಲ. **ಬಾತಿಲನ್** ಎಂದು ಹೇಳಿ ಗಮನಸೆಳೆಯಲು ಕಾರಣ ಜಗತ್ತಿನಲ್ಲಿ ಪ್ರತಿಯೊಂದಕ್ಕೂ ಏನಾದರೂ ಪ್ರಯೋಜನವಿದೆ, ಯಾವುದೂ ನಿಷ್ಪ್ರಯೋಜಕವಲ್ಲ. ಇದೊಂದೆ ಪದದಿಂದ ಎಷ್ಟು ಸ್ಪಷ್ಟವಾಗಿ ಹೇಳಲಾಗಿದೆ. ಜಗತ್ತಿನ ಯಾವ ವಸ್ತು ಸಹ ನಿಷ್ಪ್ರಯೋಜಕವಲ್ಲ. **ಬಲ್‌ಖಲಹಾ ಬಾತಿಲನ್** ಎಂದು ಹೇಳಲಾಗುತ್ತಿದ್ದರೆ, ಕೆಲವು ವಸ್ತುಗಳು ಪ್ರಯೋಜನಕಾರಿಯಾಗಿವೆ ಮತ್ತು ಕೆಲವು ವಸ್ತುಗಳು ನಿಷ್ಪ್ರಯೋಜಕವಾಗಿವೆ ಎಂದು ಹೇಳಬಹುದಾಗಿತ್ತು. ಆದರೆ ಅಲ್ಲಾಹನು ಜಗತ್ತಿನ ಎಲ್ಲಾ ವಸ್ತುಗಳು ಪ್ರಯೋಜನಕಾರಿಯಾಗಿವೆ ಮತ್ತು ಕೆಲವು ವಸ್ತುಗಳು ನಿಷ್ಪ್ರಯೋಜಕವಾಗಿವೆ ಎಂದು ಹೇಳಬಹುದಾಗಿತ್ತು. ಆದರೆ ಅಲ್ಲಾಹನು ಜಗತ್ತಿನ ಎಲ್ಲಾ ವಸ್ತುಗಳು ಪ್ರಯೋಜನಕಾರಿಯಾಗಿವೆ ಎನ್ನುತ್ತಾನೆ. ಆದ್ದರಿಂದ ತಿಳಿದುಬರುವುದೇನೆಂದರೆ ಇಸ್ಲಾಮಿನ ದೃಷ್ಟಿಯಲ್ಲಿ ಜಗತ್ತಿನ ಎಲ್ಲಾ ವಸ್ತುಗಳು ಪ್ರಯೋಜನಕಾರಿಯಾಗಿವೆ. ಏನೆಲ್ಲ ಏನು ಒಂದು ಗುಣ ತನ್ನೊಳಗೆ ಹೊಂದಿರುತ್ತದೆ. ಯಾವುದೇ ವಸ್ತು ನಿಷ್ಪ್ರಯೋಜಕವಾಗಿಲ್ಲ. ದುರದೃಷ್ಟವಶಾತ್ ಮುಸ್ಲಿಮರು ಈ ಆದೇಶದಿಂದ ಪ್ರಯೋಜನ ಪಡೆಯುವುದನ್ನು ನಿಲ್ಲಿಸಿದರು ಮತ್ತು ಸಂಶೋಧನೆ ಹಾಗೂ ಅವಿಷ್ಕಾರ ಕೆಲಸವನ್ನು ನಿರ್ಲಕ್ಷಿಸಿದರು. ಮತ್ತು ಯೂರೋಪಿಯನ್ನರು ಪವಿತ್ರ ಖುರ್‌ಆನ್‌ನ್ನು ಪಾಲಿಸದಿದ್ದರೂ ಈ ಆದೇಶವನ್ನು ಅನುಸರಿಸಿದರು ಮತ್ತು ಅದು ಇಡೀ ಪ್ರಪಂಚವನ್ನು ಪ್ರಾಬಲ್ಯ ಸಾಧಿಸುವ ಮಟ್ಟಿಗೆ ವಿಜ್ಞಾನದಲ್ಲಿ ಮುಂದುವರೆಸಿದರು.

**"ಲಿನಬ್ಲುವಹುಮ್ ಅಯ್ಯುಹುಮ್ ಅಹ್ಸನು ಅಮಲ"** ಮೂಲಕ ಸೂಚಿಸಲಾಗಿದೆ. ಜಗತ್ತಿನ ವಸ್ತುಗಳನ್ನು ಸಂಶೋಧಿಸಲಿಕ್ಕಾಗಿಯೇ ಸೃಷ್ಟಿಸಲಾಗಿದೆ. ಆ ಮೂಲಕ ಪ್ರಪಂಚದ ಸ್ಥಿತಿಯನ್ನು ಸುಧಾರಿಸಬಹುದು. ಈ ಭಾಗದ ಮಟ್ಟಿಗೆ ಕ್ರಿಸ್ತರಿಂದ ಅವಗಣನೆ ಆಗಿದೆ. ಅವರು ಲೌಕಿಕ ಸಂಶೋಧನೆಗಳನ್ನಂತೂ ಮಾಡಿದರು. ಆದರೆ ಸತ್ಕರ್ಮಗಳ ಮಾದರಿ ತೋರಿಸಲಿಲ್ಲ ಎಂದರೆ ಈ ಸಂಶೋಧನೆ ಅವಿಷ್ಕಾರಗಳ ಫಲವಾಗಿ ಅವರು ಲೋಕದಲ್ಲಿ ದೌರ್ಜನ್ಯ ಮತ್ತು ದುಷ್ಕರ್ಮಗಳ ಬುನಾದಿಯನ್ನು ಹಾಕಿದರು. ಬಹುಶಃ ಅದರೆಡೆಯೇ ಈ ಆಯತ್‌ನಲ್ಲಿ ಸೂಚಿಸಲಾಗಿದೆ.
**(ತಫ್ಸೀರ್ ಕಬೀರ್, ಸಂಪುಟ-4, ಪುಟ-390, ಮುದ್ರಣ 2010 ಖಾದಿಯಾನ್)**

## ಜಲ್ಸ ಸಾಲಾನ ಖಾದಿಯಾನ್

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: "ಈ ಜಲ್ಸದೊಂದಿಗೆ ಅನೇಕ ಅನುಗ್ರಹಗಳು ಅನಿವಾರ್ಯವಾಗಿ ಸೇರಿಕೊಂಡಿರುವುದರಿಂದ ದಾರಿ ಖರ್ಚಿಗೆ ಸಾಮರ್ಥ್ಯವಿರುವ ಪ್ರತಿಯೊಬ್ಬನು ಈ ಜಲ್ಸಕ್ಕೆ ಆಗಮಿಸಬೇಕು. ಚಳಿಗಾಲಕ್ಕೆ ಆವಶ್ಯಕವಾದ ಹಾಸುವ ಮತ್ತು ಹೊದಿಕೆ ಬಟ್ಟೆಗಳನ್ನು ಆವಶ್ಯಕವಾದಷ್ಟು ತರಬೇಕು. ಅಲ್ಲಾಹನ ಮತ್ತು ಅವನ ರಸೂಲರ ಮಾರ್ಗದಲ್ಲಿ ಚಿಕ್ಕಪುಟ್ಟ ಅಡ್ಡಿ ಆತಂಕಗಳನ್ನು ನಿರ್ಲಕ್ಷಿಸಬೇಕು. ಅಲ್ಲಾಹನು ನಿಷ್ಠಾವಂತನಿಗೆ ಪ್ರತಿಯೊಂದು ಹೆಜ್ಜೆಯಲ್ಲಿಯೂ ಅನುಗ್ರಹ ನೀಡುತ್ತಾನೆ. ಅವನ ಮಾರ್ಗದಲ್ಲಿ ಪಡುವ ಕಷ್ಟಗಳನ್ನು ವ್ಯರ್ಥಗೊಳಿಸುವುದಿಲ್ಲ. ನಾನು ಪುನರಾವರ್ತಿಸಿ ಬರೆಯುತ್ತೇನೆ ಈ ಜಲ್ಸವನ್ನು ಮಾನವರ ಸಾಮಾನ್ಯ ಜಲ್ಸದ ಹಾಗೆಂದು ಯೋಚಿಸಬೇಡಿರಿ. ಇದು ಸತ್ಯಕ್ಕೆ ಬೆಂಬಲ ನೀಡುವ ಮತ್ತು ಇಸ್ಲಾಮಿನ ಪ್ರಚಾರ ಮಾಡುವ ಅಸ್ತಿಭಾರವನ್ನು ಹೊಂದಿದೆ. ಈ ಜಮಾಅತಿನ ಅಸ್ತಿಭಾರವನ್ನು ಅಲ್ಲಾಹನು ತನ್ನ ಕೈಯಿಂದ ಹಾಕಿದ್ದಾನೆ. ಇದಕ್ಕೋಸ್ಕರ ಅಲ್ಲಾಹನು ಸಮುದಾಯಗಳನ್ನು ಸಿದ್ಧಪಡಿಸಿಟ್ಟಿದ್ದಾನೆ. ಅವರು ಬೇಗನೆ ಇದರಲ್ಲಿ ಬಂದು ಸೇರುವರು. ಯಾಕೆಂದರೆ ಇದು ಸರ್ವಶಕ್ತನಾದವನ ಕೆಲಸವಾಗಿದೆ. ಅವನಿಗೆ ಅಸಾಧ್ಯವಾದುದು ಏನೂ ಇಲ್ಲ."

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಪುನಃ ಹೇಳುತ್ತಾರೆ: "ಅಲ್ಲಾಹನಿಗೋಸ್ಕರ ಈ ಜಲ್ಸದಲ್ಲಿ ಭಾಗವಹಿಸಲು ಪ್ರಯಾಣ ಮಾಡುವ ಪ್ರತಿಯೊಬ್ಬನ ಜೊತೆಗೆ ಅಲ್ಲಾಹನು ಜೊತೆಗಾರನಾಗಿರಲಿ. ಅವನಿಗೆ ಬೃಹತ್ತಾದ ಪ್ರತಿಫಲ ನೀಡಲಿ. ಅವರೆಲ್ಲರಿಗೆ ಕಾರುಣ್ಯದೋರಲಿ. ಅವರ ಕಷ್ಟಗಳನ್ನೂ ಆತಂಕಭರಿತ ಸ್ಥಿತಿಯನ್ನೂ ನಿವಾರಿಸಿ ಅವರಿಗೆ ಸೌಲಭ್ಯ ನೀಡುವಂತಾಗಲಿ. ಅವರ ಚಿಂತೆಗಳನ್ನೂ ದುಃಖಗಳನ್ನೂ ದೂರ ಸರಿಸಲಿ. ಅವರಿಗೆ ಪ್ರತಿಯೊಂದು ಕಷ್ಟದಿಂದ ಮುಕ್ತಿಯನ್ನು ದಯಪಾಲಿಸಲಿ. ಅವರ ಇಚ್ಛೆಗಳ ಮಾರ್ಗಗಳನ್ನು ಅವರಿಗೆ ತೆರೆದುಕೊಡಲಿ. ಆಖಿರತ್‌ನಲ್ಲಿ ಅಲ್ಲಾಹನು ಅವರನ್ನು ತಾನು ಅನುಗ್ರಹ ಮತ್ತು ಕಾರುಣ್ಯ ನೀಡಿದ ತನ್ನ ದಾಸರೊಂದಿಗೆ ಎದ್ದೇಳಿಸಲಿ. ಅವರ ಪ್ರಯಾಣದ ಅಂತ್ಯದ ವರೆಗೂ ಅವರ ಬದಲು ಅವರ ಪ್ರತಿನಿಧಿಯಾಗಿರಲಿ. ಓ ಅಲ್ಲಾಹ್, ಕೀರ್ತಿಶಾಲಿಯೂ ವರದಾನ ನೀಡುವವನೂ ಕಾರುಣ್ಯಮಯನೂ ಕಷ್ಟ ಪರಿಹರಿಸುವವನೂ ಆಗಿರುವ ನೀನು ಈ ಎಲ್ಲ ಪ್ರಾರ್ಥನೆಗಳನ್ನೂ ಅಂಗೀಕರಿಸು. ನಮ್ಮ ವಿರೋಧಿಗಳ ವಿರುದ್ಧ ಪ್ರಕಾಶಮಾನವಾದ ದೃಷ್ಟಾಂತಗಳ ಮೂಲಕ ನಮಗೆ ಜಯವನ್ನು ನೀಡು. ಎಲ್ಲಾ ಶಕ್ತಿಸಾಮರ್ಥ್ಯಗಳು ನಿನ್ನಲ್ಲಿ ಮಾತ್ರ ಇವೆ" – ಆಮೀನ್ ಸುಮ್ಮ ಆಮೀನ್. **(ಮಜ್‌ಮೂಅ ಇಶ್ತಿಹಾರಾತ್ ಸಂಪುಟ-1 ಪುಟ 341-342, ಇಶ್ತಿಹಾರ್ 1892 ಡಿಸೆಂಬರ್ ದಿನಾಂಕ 7)**

### *129 ನೇ ಜಲ್ಸಾ ಸಾಲಾನ ಖಾದಿಯಾನ್*
### *27, 28, 29 ಡಿಸೆಂಬರ್ 2024ರಂದು ಆಯೋಜಿಸಲಾಗುವುದು*

ಸಯ್ಯಿದನಾ ಹುಝೂರ್ ಅನ್ವರ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್‌ರವರು 129ನೇ (ವಾರ್ಷಿಕ ಸಮ್ಮೇಳನ) ಜಲ್ಸಾ ಸಾಲನ ಖಾದಿಯಾನಿಗೆ 27, 28 ಮತ್ತು 29ನೇ ಡಿಸೆಂಬರ್ 2024 (ಶುಕ್ರವಾರ, ಶನಿವಾರ ಮತ್ತು ಭಾನುವಾರ) ದ ದಿನಾಂಕಗಳ ಅನುಮತಿ ನೀಡಿದ್ದಾರೆ. ಎಲ್ಲಾ ಸದಸ್ಯರು ಇಂದಿನಿಂದಲೇ ದುಆ ಮಾಡಬೇಕಾಗಿ ಹಾಗೂ ಈ ಸಮ್ಮೇಳನದಲ್ಲಿ ಭಾಗವಹಿಸಲು ವಿನಂತಿ. ಅಲ್ಲಾಹನು ನಮಗೆಲ್ಲ ಈ ಸಮ್ಮೇಳನದಲ್ಲ ಭಾಗಿಯಾಗಲು ತೌಫೀಕ್ ನೀಡಲೀ. ಜಲ್ಸಾ ಸಾಲಾನ ಪ್ರತಿಯೊಂದು ವಿಷಯದಲ್ಲೂ ಅನುಗ್ರಹದಾಯಕವಾಗಲಿ ಅದೇ ರೀತಿ ಶುದ್ಧ ಆತ್ಮಗಳ ಮಾರ್ಗದರ್ಶನಕ್ಕೆ ಕಾರಣವಾಗಲಿ ಎಂದು ದುಆ ಮಾಡುತ್ತಾಯಿರಿ. **ಜಝಾಕುಮುಲ್ಲಾಹ್**.
**(ನಾಝಿರ್ ಇಸ್ಲಾಹ್-ವ-ಇರ್‌ಶಾದ್ ಖಾದಿಯಾನ್)**

### ಖಾದಿಯಾನ್ ದಾರುಲ್ ಅಮಾನ್‌ನಲ್ಲಿ ಸಾಲಾನ ಇಜ್ತೆಮಾ 2024 ನಡೆಯುವ ದಿನಾಂಕಗಳು

ಸಯ್ಯಿದನಾ ಹಝ್ರತ್ ಅಮೀರುಲ್ ಮೂಮಿನೀನ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್‌ರವರು ಭಾರತದಲ್ಲಿ ಅಂಗ ಸಂಸ್ಥೆಗಳ (ಮಜ್ಲಿಸ್ ಅನ್ಸರುಲ್ಲಾ, ಮಜ್ಲಿಸ್ ಖುದ್ದಾಮುಲ್ ಅಹ್ಮದಿಯಾ, ಲಜ್ನಾ ಇಮಾಇಲ್ಲಾ) ರಾಷ್ಟ್ರೀಯ ವಾರ್ಷಿಕ ಕೂಟಗಳನ್ನು (ಇಜ್ತೆಮಾ) 25, 26 ಮತ್ತು 27ನೇ ಅಕ್ಟೋಬರ್ 2024 ರಂದು (ಶುಕ್ರವಾರ, ಶನಿವಾರ, ಭಾನುವಾರ) ಆಯೋಜಿಸಲು ಅನುಮತಿ ನೀಡಿದ್ದಾರೆ.

ಎಲ್ಲಾ ಉಪ ಸಂಸ್ಥೆಗಳ ಸದಸ್ಯರು ಖಾದಿಯಾನಿನಲ್ಲಿ ಈ ಆಧ್ಯಾತ್ಮಿಕ ಪರಿಸರದಲ್ಲಿ ಆಯೋಜಿಸಲಾಗುವಂತಹ ಇಜ್ತೆಮಾಗಳಲ್ಲಿ ಪಾಲ್ಗೊಳ್ಳಲು ಇಂದಿನಿಂದಲೆ ತಯಾರಿ ಪ್ರಾರಂಭಿಸಿರಿ. ಈ ಇಜ್ತೆಮಾಗಳು ತರಬೇತಿಯ ಮುಖ್ಯ ಮೂಲವಾಗಿದೆ.

**(ಸದರ್ ಮಜ್ಲಿಸ್ ಖುದ್ದಾಮುಲ್ ಅಹ್ಮದಿಯಾ ಭಾರತ)**

# ಖುತ್‌ಬ ಜುಮುಅ

ಕಪಟವಿಶ್ವಾಸಿಗಳ ಸರದಾರ ಅಬ್ದುಲ್ಲಾಹ್ ಬಿನ್ ಉಬಯ್‌ನ ಪುತ್ರನಿಗೆ ಇದರ ಬಗ್ಗೆ ಗೊತ್ತಾದಾಗ ಅವರು ಹಝ್ರತ್ ಪೈಗಂಬರ್(ಸ)ರೊಡನೆ ಹೀಗೆ ವಿನಂತಿಸಿಕೊಂಡರು: ಯಾ ರಸೂಲಲ್ಲಾಹ್, ನೀವು ನನಗೆ ಆದೇಶ ನೀಡಿದರೆ ನಾನು ತಕ್ಷಣವೇ ಅಬ್ದುಲ್ಲಾಹ್ ಬಿನ್ ಉಬಯ್‌ನ ತಲೆಯನ್ನು ನಿಮ್ಮ ಸನ್ನಿಧಿಯಲ್ಲಿ ಇರಿಸುವೆನು.

---

ಹಝ್ರತ್ ಪೈಗಂಬರ್(ಸ) ಅವರ ಮಾತುಗಳನ್ನು ಆಲಿಸಿ ಹೇಳಿದರು: ಓ ಅಬ್ದುಲ್ಲಾ! ನಾನು ಆತನನ್ನು ವಧಿಸಲು ಉದ್ದೇಶಿಸಿಲ್ಲ ಮತ್ತು ವಧಿಸಲು ಯಾರಿಗೂ ಆದೇಶವೂ ನೀಡಿಲ್ಲ. ಖಂಡಿತವಾಗಿಯೂ ನಾವು ಆತನೊಡನೆ ಉತ್ತಮವಾಗಿ ವರ್ತಿಸುವೆವು.

---

ಹಝ್ರತ್ ಪೈಗಂಬರ್(ಸ)ರ ಈ ಪರಿಸ್ಥಿತಿಯನ್ನು ಮುಗಿದಾಗ, ಹಝ್ರತ್ ಪೈಗಂಬರ್(ಸ)ರು ನನ್ನ ಕಿವಿಯನ್ನು ಹಿಡಿದರು ಮತ್ತು ನಾನು ನನ್ನ ಸವಾರಿಯ ಮೇಲೆಯೇ ಇದ್ದೆ. ಆಗ ಹಝ್ರತ್ ಪೈಗಂಬರ್(ಸ) ಹೇಳಿದರು, ಓ ಹುಡುಗ! ನಿಮ್ಮ ಕಿವಿ ನಿಷ್ಠವಾಗಿತ್ತು ಮತ್ತು ಸರ್ವಶಕ್ತನಾದ ಅಲ್ಲಾಹನು ನೀನು ಹೇಳಿದ್ದನ್ನು ದೃಢಪಡಿಸಿದನು, ಅದು ಬಹಿರಂಗವಾಗಿದೆ.

---

ಯಹೂದಿ ವಿದ್ವಾಸ ಝೈದ್ ಬಿನ್ ಲುಸೈತ್ ಹೇಳಿದನು ನನಗೆ ಹಝ್ರತ್ ಪೈಗಂಬರ್(ಸ)ರ ವಿಷಯದಲ್ಲಿ ಗೊಂದಲವಿತ್ತು ಆದರೆ ಈಗ ಹಝ್ರತ್ ಪೈಗಂಬರ್(ಸ)ರು ಅಲ್ಲಾಹನ ಕಡೆಯಿಂದ ನಿಜವಾದ ಸಂದೇಶವಾಹಕರಾಗಿದ್ದಾರೆ ಎಂದು ಸಾಕ್ಷಿ ನೀಡುತ್ತೇನೆ. ನಾನು ಇಂದಿನ ದಿನವೇ ಇಸ್ಲಾಮ್ ಧರ್ಮವನ್ನು ಸ್ವೀಕರಿಸಿದ್ದೇನೆ. ಈ ಘಟನೆಯ ನಂತರ ಆತನು ಹೇಳುತ್ತಾನೆ ಈಗ ನಾನು ನಿಜವಾಗಿಯು ಇಸ್ಲಾಮ್ ಧರ್ಮವನ್ನು ಸ್ವೀಕರಿಸಿದ್ದೇನೆ.

**ಮುರೈಸಿ ಯುದ್ಧದ ಘಟನೆಗಳ ವಿವರಾತ್ಮಕ ಪ್ರಸ್ತಾವನೆ ಹಾಗೂ ಬಾಂಗ್ಲದೇಶ, ಪಾಕಿಸ್ತಾನದ ಅಹ್ಮದಿಯರಿಗಾಗಿ ಮತ್ತು ಪ್ಯಾಲಟೈನಿನ ಮುಸ್ಲಿಮರಿಗಾಗಿ ದುಆ ಮಾಡುವುದಾಗಿ ಕೋರಿಕೆ**

ಮಾನ್ಯ ಡಾ॥ ಝಕಾ ಉರ್‌ರ್ರಹ್ಮಾನ್ ಸಾಹಿಬ್ ಶಹೀದ್ ಮತ್ತು ಮುಹ್ತರಮ ಸಈದಾ ಬಶೀರ್ ಸಾಹಿಬ ರವರ ಸದ್ಗುಣಗಳ ಪ್ರಸ್ತಾವನೆ ಹಾಗೂ ನಮಾಝ್ ಜನಾಝ ಗಾಯಿಬ್‌ನ ಪ್ರಸ್ತಾವನೆ

ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಇಸ್ಲಾಮಾಬಾದ್ (ಯು.ಕೆ) ಯ **'ಮಸ್ಜಿದ್ ಮುಬಾರಕ್'** ನಿಂದ **09–08–2024** ರಂದು ನೀಡಿದ **ಖುತ್‌ಬ ಜುಮುಅ**

أَشْهَدُ أَنْ لَّا إِلٰهَ إِلَّا اللّٰهُ وَحْدَهٗ لَا شَرِيكَ لَهٗ وَأَشْهَدُ أَنَّ مُحَمَّدًا عَبْدُهٗ وَرَسُولُهٗ

أَمَّا بَعْدُ فَأَعُوذُ بِاللّٰهِ مِنَ الشَّيْطٰنِ الرَّجِيْمِ - بِسْمِ اللّٰهِ الرَّحْمٰنِ الرَّحِيْمِ

اَلْحَمْدُ لِلّٰهِ رَبِّ الْعَالَمِيْنَ ۔ اَلرَّحْمٰنِ الرَّحِيْمِ ۔ مٰلِكِ يَوْمِ الدِّيْنِ ۔

اِيَّاكَ نَعْبُدُ وَاِيَّاكَ نَسْتَعِيْنُ ۔ اِهْدِنَا الصِّرَاطَ الْمُسْتَقِيْمَ ۔

صِرَاطَ الَّذِيْنَ اَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ ۔

ಜಲ್ದ ಮುಂಚಿನ ಖುತ್‌ಬ ಜುಮುಅದಲ್ಲಿ ಮುರೈಸೀಅ್ ಯುದ್ಧಕ್ಕೆ ಸಂಬಂಧಿಸಿ ಪ್ರಸ್ತಾಪಿಸಲಾಗುತ್ತಿತ್ತು. ಅಬ್ದುಲ್ಲಾಹ್ ಬಿನ್ ಉಬಯ್ ಹಝ್ರತ್ ಪೈಗಂಬರ್(ಸ)ರ ಕುರಿತು ತಪ್ಪಾದ ಮಾತುಗಳನ್ನಾಡಿದರು ಮತ್ತು ಕಾಪಟ್ಯದಿಂದ ವರ್ತಿಸಿದರು ಎಂದೂ ಪ್ರಸ್ತಾಪಿಸಲಾಗಿತ್ತು. ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್(ರ) ಸೀರತ್ ಖಾತಮುನ್ನಬಿಯ್ಯೀನ್‌ನಲ್ಲಿ ಈ ಘಟನೆಯನ್ನು ಹೀಗೆ ವಿವರಿಸಿದ್ದಾರೆ: ಯುದ್ಧ ಕೊನೆಗೊಂಡ ನಂತರ ಹಝ್ರತ್ ಪೈಗಂಬರ್(ಸ) ಕೆಲವು ದಿನಗಳ ತನಕ ಮುರೈಸೀಅ್‌ನಲ್ಲಿ ತಂಗಿದರು. ಆದರೆ ಈ ತಂಗುವಿಕೆಯ ವೇಳೆ ಕಪಟವಿಶ್ವಾಸಿಗಳ ಕಡೆಯಿಂದ ಎಂತಹ ಅಸಹನೀಯವಾದ ಘಟನೆ ನಡೆಯಿತು ಎಂದರೆ ಅದರಿಂದ ದುರ್ಬಲ ಮುಸ್ಲಿಮರ ನಡುವೆ ಆಂತರಿಕ ಯುದ್ಧ ನಡೆಯುವ ಸಾಧ್ಯತೆಯಿತ್ತು. ಆದರೆ ಹಝ್ರತ್ ಪೈಗಂಬರ್(ಸ)ರ ಸಂದರ್ಭೋಚಿತ ಹಾಗೂ ವಿವೇಕಯುತ ಪ್ರಭಾವವು ಮುಸ್ಲಿಮರನ್ನು ಅದರ ಅಪಾಯಕಾರಿ ಪರಿಣಾಮಗಳಿಂದ ರಕ್ಷಿಸಿತು.

ಘಟನೆಯೇನೆಂದರೆ, ಹಝ್ರತ್ ಉಮರ್(ರ)ರ ಜಹ್‌ಜಾಹ್ ಎಂಬ ಹೆಸರಿನ ಒಬ್ಬ ಸೇವಕ ಮುರೈಸೀಅ್‌ದ ಒಂದು ಕಾರಂಜಿಗೆ ನೀರು ತರಲು ಹೋದನು. ಅದೇ ವೇಳೆ ಸನಾನ್ ಎಂಬ ಹೆಸರಿನ ಮತ್ತೊಬ್ಬ ವ್ಯಕ್ತಿ ಸಹ ನೀರು ತರಲು ಅಲ್ಲಿಗೆ ತಲುಪಿದನು. ಆತನು ಅನ್ಸಾರರ ಮಿತ್ರಪಕ್ಷದವನಾಗಿದ್ದನು. ಅವರಿಬ್ಬರೂ ಸಾಮಾನ್ಯ ಮತ್ತು ಮೂಢ ವ್ಯಕ್ತಿಗಳಾಗಿದ್ದರು. ಕಾರಂಜಿಯ ಬಳಿ ಅವರಿಬ್ಬರೂ ಪರಸ್ಪರ ಜಗಳವಾಡಿದರು. ಜಹ್‌ಜಾಹ್ ಸನಾನ್‌ನನ್ನು ಹೊಡೆದನು. ಸನಾನ್ ಜೋರಾಗಿ ಎಲೈ ಅನ್ಸಾರ್ ಸಮೂಹವೇ ನನ್ನ ಸಹಾಯಕ್ಕಾಗಿ ಬನ್ನಿರಿ ಎಂದು ಕಿರುಚಿದನು. ಇದನ್ನು ನೋಡಿದಾಗ ಜಹ್‌ಜಾಹ್ ಕೂಡ ಮುಹಾಜಿರರನ್ನು ಸಹಾಯಕ್ಕಾಗಿ ಕರೆದನು. ಈ ಶಬ್ದಗಳನ್ನು ಕೇಳಿದ ಅನ್ಸಾರ್ ಮತ್ತು ಮುಹಾಜಿರರು ಖಡ್ಗಗಳನ್ನು ಎತ್ತಿ ಕಾರಂಜಿಯ ಬಳಿಗೆ ಧಾವಿಸಿದರು. ನೋಡುತ್ತಿದ್ದಂತೆಯೇ ಅಲ್ಲಿ ಬಹಳಷ್ಟು ಜನರು ಒಟ್ಟುಗೂಡಿದರು. ಉಭಯ ಪಕ್ಷಗಳು ಪರಸ್ಪರ ದಾಳಿ ನಡೆಸುವ ಸಾಧ್ಯತೆಯಿತ್ತು. ಅಷ್ಟರಲ್ಲಿ ಕೆಲವು ವಿವೇಕಶಾಲಿ ಜನರು ಮುಹಾಜಿರರನ್ನು ಮತ್ತು ಅನ್ಸಾರರನ್ನು ಬೇರ್ಪಡಿಸಿ ಸಂಧಾನ ಮಾಡಿಸಿಕೊಂಡರು. ಹಝ್ರತ್ ಪೈಗಂಬರ್(ಸ)ರಿಗೆ ಈ ವಾರ್ತೆ ತಲುಪಿದಾಗ ಅವರು ಅದನ್ನು ಮೂಢತನದ ಪ್ರಕಟಣೆ ಎಂದು ಹೇಳಿದರು ಮತ್ತು ಕೋಪವನ್ನು ಪ್ರಕಟಿಸಿದರು. ಹೀಗೆ ಆ ಘಟನೆಯನ್ನು ಅಲ್ಲಿಯೇ ಮುಗಿಸಿದರು ಆದರೆ ಕಪಟವಿಶ್ವಾಸಿಗಳ ಸರದಾರ ಅಬ್ದುಲ್ಲಾಹ್ ಬಿನ್ ಉಬಯ್ ಬಿನ್ ಸುಲೂಲ್‌ಗೆ ಈ ಘಟನೆಯ ಬಗ್ಗೆ ಗೊತ್ತಾದಾಗ ಆತನು ಈ ಗಲಭೆಯನ್ನು ಪುನಃ ಎಬ್ಬಿಸಲು ಬಯಸಿದನು. ಆತನು ತನ್ನ ಸಂಗಡಿಗರನ್ನು ಹಝ್ರತ್ ಪೈಗಂಬರ್(ಸ) ಮತ್ತು ಮುಸ್ಲಿಮರ ವಿರುದ್ಧ ಚೆನ್ನಾಗಿ ರೊಚ್ಚಿಗೆಬ್ಬಿಸಿದನು. ಎಷ್ಟರ ಮಟ್ಟಿಗೆ ಮಿತಿ ಮೀರಿದನು ಎಂದರೆ, **ಲಇನ್ ರಜಅ್‌ನಾ ಇಲಲ್ ಮದೀನತಿ ಲಯುಖ್ರಿಜನ್ನಲ್ ಅಅಝ್ಝು ಮಿನ್‌ಹಲ್‌ಅಝಲ** (ಅಲ್‌ಮುನಾಫಿಖೂನ್: 09) ಅಂದರೆ, ನಾವು ಮದೀನಕ್ಕೆ ಹೋಗಿ ಆದರಣೀಯ ವ್ಯಕ್ತಿ ಅಥವಾ ಗುಂಪು ನೀಚ ವ್ಯಕ್ತಿಯನ್ನು ಅಥವಾ ಗುಂಪನ್ನು ಪಟ್ಟಣದಿಂದ ಹೊರಗೆ ಹಾಕುವೆವು ಎಂದು ಕೂಡ ಆತನು ಹೇಳಿದನು. ಆ ವೇಳೆ ಒಬ್ಬ ನಿಷ್ಠಾವಂತ ಮುಸ್ಲಿಮ್ ಬಾಲಕ ಝೈದ್ ಬಿನ್ ಅರ್‌ಕಮ್ ಅಲ್ಲಿದ್ದನು. ಆತನು ಹಝ್ರತ್ ಪೈಗಂಬರ್(ಸ)ರ ಬಗ್ಗೆ ಅಬ್ದುಲ್ಲಾನ ಬಾಯಿಂದ ಈ ಮಾತುಗಳನ್ನು ಕೇಳಿದಾಗ, ಅವನು ಉತ್ಸುಕನಾದನು ಮತ್ತು ತಕ್ಷಣವೇ ಈ ಘಟನೆಯ ಬಗ್ಗೆ ಹಝ್ರತ್ ಪೈಗಂಬರ್(ಸ) ರಿಗೆ ಆತನ ಚಿಕ್ಕಪ್ಪನ ಮೂಲಕ ತಿಳಿಸಿದನು. ಆ ಸಮಯದಲ್ಲಿ ಹಝ್ರತ್ ಉಮರ್(ರ) ಕೂಡ ಹಝ್ರತ್ ಪೈಗಂಬರ್(ಸ) ಅವರ ಪಕ್ಕದಲ್ಲಿ ಕುಳಿತಿದ್ದರು. ಈ ಮಾತುಗಳನ್ನು ಕೇಳಿ ಅವರು ಕೋಪದಿಂದ ಹಝ್ರತ್ ಪೈಗಂಬರ್(ಸ) ರನ್ನು ಹೀಗೆ ಹೇಳಿದರು: ಯಾ ರಸೂಲಲ್ಲಾಹ್(ಸ)!! ದಯವಿಟ್ಟು ಈ ಕಪಟಿಯನ್ನು ವಧಿಸಲು ನನಗೆ ಅನುಮತಿಸಿರಿ. ಅದಕ್ಕೆ ಹಝ್ರತ್ ಪೈಗಂಬರ್(ಸ) ಅವರು ಹೇಳಿದರು, "ಉಮರ್! ಹೊಗಲಿ ಬಿಡು. ಮುಹಮ್ಮದ್ (ಸ) ತನ್ನ ಸಹಚರರನ್ನು ಕೊಲ್ಲುತ್ತಾ ತಿರುಗುತ್ತಾನೆ ಎಂದು ಜನರಲ್ಲಿ ಮಾತನಾಡುವುದು ನಿಮಗೆ ಇಷ್ಟವಾಯಿತೇ?" ನಂತರ ಅವರು(ಸ) ಅಬ್ದುಲ್ಲಾ ಬಿನ್ ಉಬಯ್ ಮತ್ತು ಅವನ ಸಂಗಡಿಗರನ್ನು ಕರೆದು ವಿಷಯದ ಬಗ್ಗೆ ಕೇಳಿದರು. ಅವರೆಲ್ಲರು ನಾವು ಹಾಗಂತ ಏನೂ ಹೇಳಲಿಲ್ಲ ಎಂದು ಪ್ರಮಾಣ ಮಾಡಿದರು. ಝೈದ್ ಬಿನ್ ಅರ್ಕಮ್ ತಪ್ಪು ಮಾಡಿರಬೇಕು ಎಂದು ಕೆಲವು ಅನ್ಸಾರ್‌ಗಳು

ಸಹ ಸಲಹೆ ನೀಡಿದರು. ಆ ಸಮಯದಲ್ಲಿ, ಅವರು ಅಬ್ದುಲ್ಲಾ ಇಬ್ನ್ ಉಬಯ್ ಮತ್ತು ಅವರ ಸಂಗಡಿಗರ ಹೇಳಿಕೆಯನ್ನು ಒಪ್ಪಿಕೊಂಡರು ಮತ್ತು ಝೈದ್‌ನ ಹೇಳಿಕೆಯನ್ನು ತಿರಸ್ಕರಿಸಿದರು, ಇದು ಝೈದ್(ರ) ಅವರನ್ನು ಬೆಚ್ಚಿಬೀಳಿಸಿತು, ಆದರೆ ನಂತರ ಪವಿತ್ರ ಖುರ್‌ಆನ್‌ನ ದೈವವಾಣಿಯು ಝೈದ್ ಅವರನ್ನು ದೃಢಪಡಿಸಿತು ಮತ್ತು ಕಪಟಿಗಳು ಸುಳ್ಳುಗಾರರೆಂದು ದೃಢವಾಯಿತು. ಅಷ್ಟರಲ್ಲಿ ಹಝ್ರತ್ ಪೈಗಂಬರ್(ಸ) ಅವರು ಅಬ್ದುಲ್ಲಾ ಬಿನ್ ಉಬಯ್ ಮತ್ತು ಇತರರನ್ನು ಕರೆದು ಇದನ್ನು ಖಚಿತಪಡಿಸಲು ಪ್ರಾರಂಭಿಸಿದರು ಮತ್ತು ಇನ್ನೊಂದು ಕಡೆ ಹಝ್ರತ್ ಉಮರ್(ರ) ರವರಿಗೆ ತಕ್ಷಣವೇ ಅಲ್ಲಿಂದ ಹೊರಡಲು ಆದೇಶ ನೀಡಿದರು. ಈ ಸಮಯ ಮಧ್ಯಾಹ್ನವಾಗಿತ್ತು, ಸಾಮಾನ್ಯವಾಗಿ ಹಝ್ರತ್ ಪೈಗಂಬರ್(ಸ) ಅವರು ಆ ಸಮಯದಲ್ಲಿ ಪ್ರಯಾಣಿಸುತ್ತಿರಲಿಲ್ಲ, ಏಕೆಂದರೆ ಅರೇಬಿಯಾದ ಹವಾಮಾನದ ಪ್ರಕಾರ, ಈ ಸಮಯವು ವಿಪರೀತ ಶಾಖದ ಸಮಯವಾಗಿತ್ತು ಮತ್ತು ಅದರಲ್ಲಿ ಪ್ರಯಾಣಿಸುವುದು ತುಂಬಾ ಸಂಕಟದಿಂದ ಕೂಡಿರುತ್ತದೆ, ಆದರೆ ಪರಿಸ್ಥಿತಿಗಳ ಪ್ರಕಾರ ಆ ಸಮಯದಲ್ಲಿ, ಇದು ಸರಿಯಾದ ಉಪಾಯವಾಗಿದೆ ಎಂದು ಹೇಳಿದರು. ಆದ್ದರಿಂದ, ನಿಮ್ಮ ಆದೇಶದ ಮೇರೆಗೆ, ಇಡೀ ಇಸ್ಲಾಮಿಕ್ ಸೈನ್ಯವು ತಕ್ಷಣವೇ ಮರಳಲು ಸಿದ್ಧವಾಯಿತು. ಬಹುಶಃ ಇದೇ ಸಂದರ್ಭದಲ್ಲಿ, ಔಸ್ ಗೋತ್ರದ ಅತ್ಯಂತ ಪ್ರಸಿದ್ಧ ಮುಖ್ಯಸ್ಥರಾಗಿದ್ದ ಉಸೈದ್ ಬಿನ್ ಹುದೈರ್ ಅನ್ಸಾರಿ ಅವರು ಹಝ್ರತ್ ಪೈಗಂಬರ್(ಸ) ಅವರ ಸೇವೆಯಲ್ಲಿ ಬಂದು ಕೇಳಿದರು. ಯಾ ರಸೂಲಲ್ಲಾಹ್(ಸ)! ನೀವು ಸಾಮಾನ್ಯವಾಗಿ ಇಂತಹ ಸಮಯದಲ್ಲಿ ಪ್ರಯಾಣಿಸುವುದಿಲ್ಲ. ಇಂದಿನ ವಿಷಯವೇನು? ಅದಕ್ಕೆ ಹಝ್ರತ್ ಪೈಗಂಬರ್(ಸ) ಹೇಳಿದರು: ನೀನು ಅಬ್ದುಲ್ಲಾಹ್ ಬಿನ್ ಉಬಯ್‌ನ ಮಾತುಗಳನ್ನು ಆಲಿಸಲಿಲ್ಲವೇ? ಉಸೈದ್(ರ) ಹೇಳಿದರು: ಹೌದು ಯಾ ರಸೂಲಲ್ಲಾಹ್, ನೀವು ಬೇಕಾದರೆ ಮದೀನಕ್ಕೆ ತಲುಪಿ ಅಬ್ದುಲ್ಲಾಹ್ ಬಿನ್ ಉಬಯ್‌ನನ್ನು ಪಟ್ಟಣದಿಂದ ಹೊರಗೆ ಹಾಕಬಹುದಾಗಿದೆ, ಏಕೆಂದರೆ ನೀವು ಗೌರವಾನ್ವಿತರು ಮತ್ತು ಅವನು ಅವಮಾನಿತನಾಗಿದ್ದಾನೆ." ಆಗ ಉಸೈದ್ ಬಿನ್ ಹುದೈರ್ ಹೇಳಿದರು, ಯಾ ರಸೂಲಲ್ಲಾಹ್(ಸ)! ನೀವು ಬರುವ ಮೊದಲು, ಅಬ್ದುಲ್ಲಾ ಬಿನ್ ಉಬಯ್ ತನ್ನ ಜನರಲ್ಲಿ ಬಹಳ ಗೌರವಾನ್ವಿತನಾಗಿದ್ದನು ಮತ್ತು ಅವನ ಜನರು ಅವನನ್ನು ತಮ್ಮ ರಾಜನನ್ನಾಗಿ ಮಾಡಲು ಯೋಜಿಸುತ್ತಿದ್ದರು, ಅದು ನಿಮ್ಮ ಬರುವಿಕೆಯಿಂದ ನಾಶವಾಯಿತು. ಆದ್ದರಿಂದ, ಈ ಕಾರಣಕ್ಕಾಗಿ, ಅವನು ನಿಮ್ಮ ಬಗ್ಗೆ ಅಸೂಯೆಪಡುತ್ತಾನೆ. ಆದ್ದರಿಂದ ಅವನ ಅಸಂಬದ್ಧತೆಯ ಬಗ್ಗೆ ಚಿಂತಿಸಬೇಡಿ ಮತ್ತು ಅವನನ್ನು ಕ್ಷಮಿಸಿ." (ಸೀರತ್ ಖಾತಮುನ್ನಬಿಯೀನ್(ಸ), ಹಝ್ರತ್ ಸಾಹಿಬ್ಜಾದಾ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್ ಎಂ.ಎ, ಪುಟ-559 ರಿಂದ 561)

ಮತ್ತೊಂದು ವರದಿಯಲ್ಲಿ ಹೀಗೆ ಉಲ್ಲೇಖಿಸಲಾಗಿದೆ: ಅಬ್ದುಲ್ಲಾಹ್ ಬಿನ್ ಉಬಯ್‌ನ ಪುತ್ರನಿಗೆ ಇದರ ಬಗ್ಗೆ ಗೊತ್ತಾದಾಗ ಅವರು ಹಝ್ರತ್ ಪೈಗಂಬರ್(ಸ)ರೊಡನೆ ಹೀಗೆ ವಿನಂತಿಸಿಕೊಂಡರು: ಯಾ ರಸೂಲಲ್ಲಾಹ್, ನೀವು ನನಗೆ ಆದೇಶ ನೀಡಿದರೆ ನಾನು ತಕ್ಷಣವೇ ಅಬ್ದುಲ್ಲಾಹ್ ಬಿನ್ ಉಬಯ್‌ನ ತಲೆಯನ್ನು ನಿಮ್ಮ ಸನ್ನಿಧಿಯಲ್ಲಿ ಇರಿಸುವೆನು. ಅಲ್ಲಾಹನ ಆಣೆ! ಖಝ್‌ರಜ್‌ನಲ್ಲಿರುವ ಯಾವುದೇ ವ್ಯಕ್ತಿ ತನ್ನ ತಂದೆತಾಯಿಯವರನ್ನು ನನಗಿಂತ ಉತ್ತಮವಾಗಿ ನಡೆಸಿಕೊಳ್ಳುವವರು ಯಾರೂ ಇಲ್ಲ ಎಂದು ಖಝ್‌ರಜ್ ಗೋತ್ರದವರು ತಿಳಿದುಕೊಂಡಿದ್ದಾರೆ. ಮತ್ತು ಯಾ ರಸೂಲಲ್ಲಾಹ್(ಸ)! ನನ್ನನ್ನು ಬಿಟ್ಟು ಬೇರೆಯವರನ್ನು ವಧಿಸಲು ನೀವು ಅನುಮತಿ ನೀಡಿದರೆ ನನ್ನ ತಂದೆಯನ್ನು ವಧಿಸಿದ್ದವನು ಜನರ ನಡುವೆ ಓಡಾಡುವುದನ್ನು ನೋಡಿ ಅವನನ್ನು ಕೊಂದು ಅಗ್ನಿಪ್ರವೇಶಿಸಲು ನನ್ನ ಆತ್ಮವು ನನ್ನನ್ನು ಬಿಡುವುದಿಲ್ಲ ಎಂದು ನಾನು ಭಯಭೀತನಾಗುತ್ತೇನೆ. ಬೇರೆ ಯಾರಾದರೂ ವಧಿಸಿದರೆ, ನಾನು ಕೋಪದಿಂದ ಅವನನ್ನು ವಧಿಸುತ್ತೇನೆ. ಹಝ್ರತ್ ಪೈಗಂಬರ್(ಸ)ರ ಕ್ಷಮಿಸುವ ಶ್ರೇಷ್ಠ ಗುಣವು ಮತ್ತು ಅವರ ಬಗ್ಗೆ ದಯೆ ತೋರುವ ಗುಣವು ಶ್ರೇಷ್ಠವಾಗಿದೆ. ಹಝ್ರತ್ ಪೈಗಂಬರ್(ಸ) ಅವರ ಮಾತುಗಳನ್ನು ಆಲಿಸಿ ಹೇಳಿದರು:

ಓ ಅಬ್ದುಲ್ಲಾ! ನಾನು ಆತನನ್ನು ವಧಿಸಲು ಉದ್ದೇಶಿಸಿಲ್ಲ ಮತ್ತು ವಧಿಸಲು ಯಾರಿಗೂ ಆದೇಶವೂ ನೀಡಿಲ್ಲ. ಖಂಡಿತವಾಗಿಯೂ ನಾವು ಆತನೊಡನೆ ಉತ್ತಮವಾಗಿ ವರ್ತಿಸುವೆವು.

ಅಬ್ದುಲ್ಲಾ ಹೇಳಿದರು, ಯಾ ರಸೂಲಲ್ಲಾಹ್(ಸ)! ನನ್ನ ತಂದೆಯ ತಲೆಯ ಮೇಲೆ ಕಿರೀಟವನ್ನು ಇಡಲು ಈ ನಗರದ ಜನರು ಖಂಡಿತವಾಗಿ ಒಪ್ಪಿಕೊಂಡಿದ್ದಾರೆ. ಸರ್ವಶಕ್ತನಾದ ಅಲ್ಲಾಹನು ನಿಮ್ಮನ್ನು ಕರೆತಂದನು ಮತ್ತು ಅಲ್ಲಾಹನು ಅವನನ್ನು ಕೆಳಗಿಳಿಸಿ ನಿಮ್ಮ ಮೂಲಕ ನಮ್ಮನ್ನು ಬೆಳೆಸಿದನು. ಮತ್ತು ಅವರೊಂದಿಗೆ ಕೆಲವು ಜನರು ಅವರ ಬಳಿಗೆ ಬರುತ್ತಾರೆ ಮತ್ತು ಅಲ್ಲಾಹನು ಜಯಿಸಿದ ವಿಷಯಗಳನ್ನು ನೆನಪಿಸುತ್ತಾರೆ. ಇದನ್ನು ಅಬ್ದುಲ್ಲಾ ಬಿನ್ ಉಬಯ್ಯ್ ಅವರ ಪುತ್ರರು ಹೇಳುತ್ತಿದ್ದಾರೆ. (ಸಬ್ಲುಲ್ ಹುದಾ ವಲ್-ರಶಾದ್, ಸಂಪುಟ-4, ಪುಟ 348-350, ದಾರುಲ್ ಕುತುಬ್ ಇಲ್‌ಮಿಯಾ ಬೈರುತ್)

ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್ ಅವರು ಹೇಳುತ್ತಾರೆ: "ಅಬ್ದುಲ್ಲಾ ಬಿನ್ ಉಬಯ್‌ಯ ಪುತ್ರನ ಹೆಸರು ಹುಬಾಬ್ ಎಂದಾಗಿತ್ತು, ಆದರೆ ಹಝ್ರತ್ ಪೈಗಂಬರ್(ಸ) ಅದನ್ನು ಅಬ್ದುಲ್ಲಾ ಎಂದು ಬದಲಾಯಿಸಿದರು." (ಸೀರತ್ ಖಾತಮುನ್ನಬಿಯೀನ್(ಸ), ಹಜರತ್ ಸಾಹಿಬ್ಜಾದಾ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್ ಎಂ.ಎ, ಪುಟ-561)

ಆದಾಗ್ಯೂ, ಹಝ್ರತ್ ಪೈಗಂಬರ್(ಸ) ಅವರ ಸೂಚನೆಯ ಮೇರೆಗೆ ಹಿಂದಿರುಗುವ ಪ್ರಯಾಣವು ಪ್ರಾರಂಭವಾಯಿತು. ಅದರ ವಿವರಣೆಯಲ್ಲಿ ಹೀಗೆ ಬರೆಯಲಾಗಿದೆ: ಹಝ್ರತ್ ಪೈಗಂಬರ್(ಸ) ಆ ದಿನದಂದು ಸಂಜೆಯವರೆಗೆ ಮತ್ತು ಇಡೀ ರಾತ್ರಿ ಬೆಳಿಗ್ಗೆ ಮತ್ತು ದಿನದ ಆರಂಭದವರೆಗೆ ಪ್ರಯಾಣಿಸಿದರು. ಸೂರ್ಯನು ಜನರನ್ನು ನೋಯಿಸಲು ಪ್ರಾರಂಭಿಸಿದನು, ನಂತರ ಹಝ್ರತ್ ಪೈಗಂಬರ್(ಸ)ರು ಜನರೊಂದಿಗೆ ನೆಲೆಸಿದ್ದರು. ಅವರು ನೆಲಕ್ಕೆ ಇಳಿದ ಕೂಡಲೇ ನಿದ್ದೆಗೆ ಜಾರಿದರು. ಈ ಸಂಪೂರ್ಣ ಪ್ರಯಾಣದಲ್ಲಿ, ವ್ಯಭಿಚಾರಕ್ಕಾಗಿ ಅಥವಾ ನಮಾಝ್‌ಗಾಗಿ ಹೊರತುಪಡಿಸಿ ಒಬ್ಬ ವ್ಯಕ್ತಿಯು ತನ್ನ ಕುದುರೆಯಿಂದ ಇಳಿಯಲಿಲ್ಲ ಮತ್ತು ಹಝ್ರತ್ ಪೈಗಂಬರ್(ಸ), ಅವರ ಕುದುರೆಯನ್ನು ಓಡಿಸುತ್ತಿದ್ದರು ಮತ್ತು ತನ್ನ ಸವಾರಿಯ ಹಿಂದಿನ ಕಾಲುಗಳಿಗೆ ಹೊಡೆಯುತ್ತಿದ್ದರು. ಹಝ್ರತ್ ಪೈಗಂಬರ್(ಸ) ಅವರು ಹಿಂದಿನ ದಿನ ಅಬ್ದುಲ್ಲಾ ಬಿನ್ ಉಬಯ್ ಹೇಳಿದ್ದನ್ನು ಜನರು ಮರೆತುಬಿಡಲು ಈ ಸುದೀರ್ಘ ಪ್ರಯಾಣವನ್ನು ಮಾಡಿದರು. (ಸಬ್ಲುಲ್ ಹುದಾ ವರ್‌ರಶಾದ್, ಸಂಪುಟ-4, ಪುಟ-350, ದಾರುಲ್ ಕುತುಬ್ ಇಲ್‌ಮಿಯಾ ಬೈರುತ್)

ಒಂದು ವರದಿ ಹೀಗಿದೆ: ಹಝ್ರತ್ ಪೈಗಂಬರ್(ಸ)ರು ಆ ದಿನ ಪ್ರಯಾಣಿಸುತ್ತಿದ್ದರು ಮತ್ತು ಹಝ್ರತ್ ಝೈದ್ ಬಿನ್ ಅರ್ಕಮ್(ರ) ಹಝ್ರತ್ ಪೈಗಂಬರ್(ಸ) ಅವರ ಕುದುರೆಯ ಬದಿಯಲ್ಲಿ ತಮ್ಮ ಸವಾರಿಯಲ್ಲಿದ್ದರು. ರಸೂಲುಲ್ಲಾಹ್(ಸ) ಅವರ ಮುಖ ನೋಡುತ್ತಿದ್ದರು. ಹಝ್ರತ್ ಪೈಗಂಬರ್(ಸ)ರು ತಮ್ಮ ಕುದುರೆಗೆ ತಡಿ ಹಾಕಿದರೆ, ಅದು ಸ್ವಲ್ಪ ವೇಗವಾಗಿ ಹೋಗುತ್ತಿತ್ತು. ಆ ಸಮಯದಲ್ಲಿ ಹಝ್ರತ್ ಪೈಗಂಬರ್(ಸ)ರ ಮೇಲೆ ದೈವವಾಣಿ ಅವತರಿಸಲು ಪ್ರಾರಂಭಿಸಿತು. ಹಝ್ರತ್ ಝೈದ್ ಬಿನ್ ಅರ್ಕಮ್(ರ) ರವರು ಹೇಳುವಂತೆ ನಾನು ಹಝ್ರತ್ ಪೈಗಂಬರ್(ಸ)ರನ್ನು ನೋಡಿದೆನು. ಅವರು(ಸ) ತೀಕ್ಷ್ಣತೆಯು ಆವರಿಸಿತು ಅವರ(ಸ) ಹಣೆಯು ಬೆವರಿತು ಮತ್ತು ಅದರ ತೀಕ್ಷ್ಣತೆಯು ಎಷ್ಟರ ಮಟ್ಟಿಗೆ ಇತ್ತು ಎಂದರೆ ಅದು ಅವರ ಸವಾರಿಯ ಮುಂಗಾಲುಗಳನ್ನು ಬಹುತೇಕ ತಿರುಗಿಸುವವರೆಗೆ ಭಾರವಾದವು, ಅಂದರೆ ಅದರ ಕಾಲುಗಳು ತಿರುಚಿದವು. ನನಗೆ ಹಝ್ರತ್ ಪೈಗಂಬರ್(ಸ)ರಿಗೆ ದೈವವಾಣಿ ಅವತರಿಸುತ್ತಿದೆ ಎಂದು ತಿಳಿಯಿತು ಏಕೆಂದರೆ ಇಂತಹ ಪರಿಸ್ಥಿತಿಯು ದೈವವಾಣಿಯನ್ನು ಸ್ವೀಕರಿಸುವ ಸಮಯದಲ್ಲಿಯೇ ಉಂಟಾಗುತ್ತಿತ್ತು ಮತ್ತು ಆ ದೈವವಾಣಿಯಲ್ಲಿ ನನ್ನ ದೃಢೀಕರಣವನ್ನು ನಾನು ಆಶಿಸಿದ್ದೆ. ಹಝ್ರತ್ ಝೈದ್ ಬಿನ್ ಅರ್ಕಮ್(ರ) ಹೇಳುತ್ತಾರೆ, ಹಝ್ರತ್ ಪೈಗಂಬರ್(ಸ)ರ ಈ ಪರಿಸ್ಥಿತಿಯನ್ನು ಮುಗಿದಾಗ, ಹಝ್ರತ್ ಪೈಗಂಬರ್(ಸ)ರು ನನ್ನ ಕಿವಿಯನ್ನು ಹಿಡಿದರು ಮತ್ತು ನಾನು ನನ್ನ ಸವಾರಿಯ ಮೇಲೆಯೇ ಇದ್ದೆ. ಆಗ ಹಝ್ರತ್ ಪೈಗಂಬರ್(ಸ) ಹೇಳಿದರು, ಓ ಹುಡುಗ! ನಿಮ್ಮ ಕಿವಿ ನಿಷ್ಠವಾಗಿತ್ತು ಮತ್ತು ಸರ್ವಶಕ್ತನಾದ ಅಲ್ಲಾಹನು ನೀನು ಹೇಳಿದ್ದನ್ನು ದೃಢಪಡಿಸಿದನು, ಅದು ಬಹಿರಂಗವಾಗಿದೆ. (ಸಬ್ಲುಲ್ ಹುಡ ವರ್‌ರಶಾದ್, ಸಂಪುಟ-4, ಪುಟ-354, ದಾರುಲ್ ಕುತುಬ್ ಇಲ್‌ಮಿಯಾ ಬೈರುತ್)

**(ಮುಂದುವರಿಯುವುದು)**

**"ಮೇಲಿನ ಕೈ ಕೆಳಗಿನ ಕೈಗಿಂತ ಉತ್ತಮವಾಗಿದೆ. (ಎಂದರೆ ಧಾನಧರ್ಮ ಕೊಡುವವನು ಅದನ್ನು ಪಡೆದುಕೊಳ್ಳುವವನಿಗಿಂತ ಉತ್ತಮವಾಗಿದ್ದಾನೆ)"**
(ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿವ ಸಲ್ಲಮ್)

**ದುಆವಿನ ಆಕಾಂಕ್ಷಿ:**
**M.B. Nasir Ahmed & Family, Bengaluru, Karnataka**

**"ಯಾರು ಜನರಿಗೆ ಕೃತಜ್ಞತೆ ಸಲ್ಲಿಸುವುದಿಲ್ಲವೋ ಅವನು ಅಲ್ಲಾಹನಿಗೂ ಕೃತಜ್ಞತೆ ಸಲ್ಲಿಸುವುದಿಲ್ಲ."**
(ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿವ ಸಲ್ಲಮ್)

**ದುಆವಿನ ಆಕಾಂಕ್ಷಿ:**
**Mubarak Ahmed Naseem & Family, Shimoga, Karnataka**

EDITOR
TARIQ AHMED IDRIS.
Mobile : +91 9902678609
e-mail: kannadabadar@gmail.com
website:www.akhbarbadr.in

REGISTERED WITH THE REGISTRAR OF THE NEWSPAPER FOR INDIA AT NO RN PUNKAN/2020/78613
Weekly **BADAR** Qadian
Distt: Gurdaspur (Pb.) INDIA Qadian - 143516
Postal Reg. No: 3000039689/2023-25 Vol No.05, Thursday, 12 September 2024, Issue No. 37

MANAGER
SHAIKH MUJAHID AHMAD.
Mobile : +91 99153 79255
e-mail:managerbadrqnd@gmail.com
www.alislam.org/badr

ANNUAL SUBSCRIPTION: Rs.600/- (Per Issue: 10/- ) (WEIGHT: 20-50, grms / issue)

# ಸೈಯಿದುನಾ ಹಝ್ರತ್ ಅಮೀರುಲ್ ಮುಮಿನೀನ್ ಖಲೀಫತುಲ್ ಮಸೀಹ್ ಖಾಮಿಸ್(ಅತಬಿಅ)ರವರ ಜರ್ಮನಿಯ ಪ್ರವಾಸ ಆಗಸ್ಟ್, ಸೆಪ್ಟೆಂಬರ್ 2023

*(ಬದರ್ ಸಂಚಿಕೆ-35ರ ಉಳಿದ ಭಾಗ ಮುಂದುವರಿಸಲಾಗಿದೆ)*

**ಹುಝೂರೆ ಅನ್ವರ್(ಅಬಿಅ) ರವರ ಸಂಬೋಧನೆ**

ಸಾಂಪ್ರದಾಯಿಕ ಪ್ರಾರ್ಥನೆಗಳನ್ನು ಮಾಡಿದ ನಂತರ ಅಹ್ಮದಿಯಾ ಜಮಾಅತ್‌ನ ಪಂಚಮ ಖಲೀಫರು ಹೇಳಿದರು: ಅಸ್ಸಲಾಮು ಅಲೈಕುಮ್ ವ ರಹ್ಮತುಲ್ಲಾಹಿ ವಬರಕಾತುಹೂ – ನಿಮ್ಮೆಲ್ಲರ ಮೇಲೆ ಅಲ್ಲಾಹನ ಶಾಂತಿ ಮತ್ತು ಅನುಗ್ರಹ ಸುರಿಸಲ್ಪಡಲಿ.

ದೀರ್ಘಕಾಲದ ನಂತರ ಈ ನಗರದಲ್ಲಿ ಒಂದು ಚಿಕ್ಕ ಮಸ್‌ಜಿದನ್ನು ನಿರ್ಮಿಸಲು ಸಾಧ್ಯವಾದುದಕ್ಕೆ ನಾವು ಸರ್ವಶಕ್ತನಾದ ಅಲ್ಲಾಹನಿಗೆ ಕೃತಜ್ಞತೆ ಅರ್ಪಿಸುತ್ತೇವೆ. ಈ ನಗರದ ಮೇಯರ್, ಕೌನ್ಸಿಲರ್‌ಗಳು ಮತ್ತು ಈ ಪ್ರದೇಶದ ನಿವಾಸಿಗಳು ಈ ಮಸ್‌ಜಿದ್ ನಿರ್ಮಾಣವನ್ನು ಮಾಡಲು ಸಹಕರಿಸಿದುದಕ್ಕಾಗಿ ನಾವು ಅವರಿಗೂ ಕೃತಜ್ಞರಾಗಿದ್ದೇವೆ. ನಾವು ಈ ಕೃತಜ್ಞತೆ ಪ್ರಕಟಿಸುವುದು ಕೇವಲ ಬಾಯಿಮಾತಿನಲ್ಲಿ ಅಲ್ಲ. ಅದು ನಮ್ಮ ಧಾರ್ಮಿಕ ಕರ್ತವ್ಯ ಸಹ ಆಗಿದೆ. ಇಸ್ಲಾಮ್ ಧರ್ಮದ ಪವಿತ್ರ ಸ್ಥಾಪಕರು ಹೀಗೆ ಹೇಳಿದ್ದಾರೆ; ನೀವು ಜನರಿಗೆ ಕೃತಜ್ಞತೆ ಸಲ್ಲಿಸುವುದಿಲ್ಲವಾದರೆ ನೀವು ಸರ್ವಶಕ್ತನಾದ ಅಲ್ಲಾಹನಿಗೂ ಕೃತಜ್ಞತೆ ಸಲ್ಲಿಸುವವರಾಗಲಾರಿರಿ. ಆದುದರಿಂದ ನೀವು ನಮಗೆ ಮಸ್‌ಜಿದ್ ನಿರ್ಮಾಣ ಕಾರ್ಯದಲ್ಲಿ ನೆರವು ನೀಡಿದುದರಿಂದ ನಿಮಗೆ ಕೃತಜ್ಞತೆ ಸಲ್ಲಿಸುವುದು ನಮ್ಮ ಧಾರ್ಮಿಕ ಕರ್ತವ್ಯವಾಗಿದೆ. ಸರ್ವಶಕ್ತನಾದ ಅಲ್ಲಾಹನ ಅನುಗ್ರಹದಿಂದ ಅಹ್ಮದಿಯಾ ಮುಸ್ಲಿಮ್ ಜಮಾಅತಿಗೆ ಕರ್ಬೆನ್ ನಗರದಲ್ಲಿ ಒಂದು ಸುಂದರವಾದ ಚಿಕ್ಕ ಮಸ್‌ಜಿದ್ ದಯಪಾಲಿಸಲ್ಪಟ್ಟಿದೆ.

ಜರ್ಮನಿಯ ಅಹ್ಮದಿಯಾ ಮುಸ್ಲಿಮ್ ಜಮಾಅತಿನ ಅಧ್ಯಕ್ಷರಾದ ಅಬ್ದುಲ್ಲ ವಾಗಿಶೌಸರ್ ಈ ನಗರದ ಚರಿತ್ರೆ ವಿವರಿಸುವಾಗ ಹೇಳಿದರು – ಈ ಮಸ್‌ಜಿದ್ ನಗರದ ಮಧ್ಯಭಾಗದಲ್ಲಿ ನಿರ್ಮಿಸಲ್ಪಟ್ಟಿದೆ ಎಂದು. ಇದು ಬಹಳ ಒಳ್ಳೆಯದೇ ಆಗಿದೆ. ಏಕೆಂದರೆ ಈ ನಗರದಲ್ಲಿ ಲೌಕಿಕ ಕಾರ್ಯಕಲಾಪಗಳಿಗೆ ವಿವಿಧ ಅನುಕೂಲತೆಗಳಿರುವಾಗ ಧರ್ಮಾವಲಂಬಿಗಳಿಗೆ ಒಟ್ಟಿಗೆ ಸೇರಿಕೊಂಡು ದೇವನನ್ನು ಆರಾಧಿಸುವುದಕ್ಕಾಗಿ ಒಂದು ಕೇಂದ್ರವಿರುವುದು ಆವಶ್ಯಕವಾಗಿದೆ. ಅಂತಹ ಕೇಂದ್ರ ಮಸ್‌ಜಿದ್, ಚರ್ಚ್ ಅಥವಾ ಬೇರೆ ಆರಾಧನಾಲಯವಾಗಿರಬಹುದು. ಆದರೆ ಅಂತಹ ಕೇಂದ್ರಗಳಿರುವುದು ಆವಶ್ಯಕವಾಗಿದೆ. ಇಂತಹ ಆರಾಧನಾಲಯಗಳು ಒಂದು ಸ್ಥಳದಲ್ಲಿ ಸ್ಥಾಪಿಸಲ್ಪಡುವಾಗ ನಮಗೆ ಸ್ಪಷ್ಟವಾಗಿ ತಿಳಿದು ಬರುವುದೇನೆಂದರೆ, ಧರ್ಮವು ಸಹಕಾರ ಮನೋಭಾವವನ್ನೂ ಸೌಹಾರ್ದವನ್ನೂ ಉಪದೇಶಿಸುತ್ತದೆ. ಯಾವುದೇ ಧರ್ಮ ಅಥವಾ ಯಾವುದೇ ಧರ್ಮದ ಸ್ಥಾಪಕ ಉಗ್ರವಾದವನ್ನು ಉಪದೇಶಿಸಿಲ್ಲ ಮತ್ತು ಧರ್ಮದ ಅನುಯಾಯಿಗಳಿಗೆ ಭಯೋತ್ಪಾದನೆಯ ಉಪದೇಶ ನೀಡಿಲ್ಲ.

ನಮ್ಮ ನಂಬಿಕೆ ಪ್ರಕಾರ ಸರ್ವಶಕ್ತನಾದ ದೇವನು ಎಲ್ಲ ಪ್ರವಾದಿಗಳನ್ನು ಈ ಉಪದೇಶದೊಂದಿಗೆ ಕಳುಹಿಸಿರುವನು: ಏಕ ದೇವನನ್ನು ಆರಾಧಿಸಬೇಕು ಮತ್ತು ಜನರು ಒಬ್ಬರಿನ್ನೊಬ್ಬರ ಹಕ್ಕುಗಳನ್ನು ಈಡೇರಿಸಿಕೊಡುತ್ತಾ ಶಾಂತಿ, ಪ್ರೀತಿ ಮತ್ತು ಭ್ರಾತೃಭಾವನೆಯನ್ನು ಸಮಾಜದಲ್ಲಿ ಬೆಳೆಸಬೇಕು.

ನಗರದ ಕೇಂದ್ರ ಭಾಗದಲ್ಲಿ ಮಸ್‌ಜಿದ್ ನಿರ್ಮಿಸುವ ಭಾಗ್ಯ ನಮಗೆ ದೊರಕಿರುವುದರಿಂದ ನಾವು ನಮ್ಮ ಮಸ್‌ಜಿದ್‌ಗೆ ಸಮೀಪವಾಗಿ ಸುತ್ತು ಮುತ್ತಲಿನ ಜನರಿಗೆ ಇಸ್ಲಾಮಿನ ನೈಜ ತತ್ವಗಳ ಬಗ್ಗೆ ಮಾಹಿತಿ ನೀಡಲು ಸಾಧ್ಯವಾಗುವುದು.

ಇಸ್ಲಾಮ್ ಧರ್ಮದ ಬಗ್ಗೆ ಕೆಲವು ತಪ್ಪು ಗ್ರಹಿಕೆಗಳು ತಪ್ಪಾಗಿ ವರ್ತಿಸುವ ಕೆಲವು ಮುಸ್ಲಿಮರ ಕಾರಣದಿಂದ ಉದ್ಭವಿಸಿವೆ. ದುರದೃಷ್ಟಕರವಾಗಿ ಬಹುತೇಕ ಮುಸ್ಲಿಮರು ಇಂತಹ ತಪ್ಪಾಗಿ ವರ್ತಿಸುವ ಮುಸ್ಲಿಮರ ತಪ್ಪಾದ ಕಲ್ಪನೆಗಳ ಪ್ರಕಾರ ವರ್ತಿಸುತ್ತಾರೆ. ನಾವು ಅವರನ್ನು ಪ್ರತಿರೋಧಿಸುತ್ತೇವೆ. ಪವಿತ್ರ ಖುರ್‌ಆನ್ ಮತ್ತು ಇಸ್ಲಾಮ್ ಧರ್ಮದ ಪವಿತ್ರ ಪೈಗಂಬರ್‌ರವರ ನಡೆವಳಿಕೆ ಮೂಲಕ ನಾವು ಇಸ್ಲಾಮ್ ಧರ್ಮದ ನೈಜ ತತ್ವಗಳು ಶಾಂತಿ, ಪ್ರೀತಿ, ವಾತ್ಸಲ್ಯ ಮತ್ತು ಸಾಮರಸ್ಯಗಳಾಗಿವೆ ಎಂದು ತೋರಿಸಿಕೊಡುತ್ತೇವೆ.

ಆರಂಭದಲ್ಲಿ ಕೆಲವರು ಈ ಮಸ್‌ಜಿದ್ ನಿರ್ಮಾಣವನ್ನು ವಿರೋಧಿಸಿದರೆಂದು ಜರ್ಮನಿಯ ಅಹ್ಮದಿಯಾ ಜಮಾಅತಿನ ಅಧ್ಯಕ್ಷರು ಹೇಳಿದರು. ಅವರ ವಿರೋಧ ಸ್ವಲ್ಪ ಮಟ್ಟಿಗೆ ಸರಿಯಾಗಿರಬಹುದು. ಏಕೆಂದರೆ ಅವರು ನಾನು ಹಿಂದೆ ಹೇಳಿದ ಹಾಗಿರುವ ಕೆಲವು ಮುಸ್ಲಿಮರ ವರ್ತನೆಯನ್ನು ವೀಕ್ಷಿಸಿರಬಹುದು. ಮುಸ್ಲಿಮರಲ್ಲಿ ತೀವ್ರವಾದವಿದೆ ಎಂದು ಅವರು ನೋಡಿರಬಹುದು. ಬಹುತೇಕ ಮುಸ್ಲಿಮ್ ದೇಶಗಳಲ್ಲಿ ಜನರ ಹಕ್ಕುಗಳು ಸಂರಕ್ಷಿಸಲ್ಪಡುವುದಿಲ್ಲ ಎಂದು ಅವರು ನೋಡಿರಬಹುದು. ಈ ಕಾರಣದಿಂದ ಅವರು ಆತಂಕ ಭರಿತರಾಗಿರಬಹುದು. ಆದರೆ ಅವರು ನಮ್ಮ ಮಸ್‌ಜಿದನ್ನು ನೋಡುವಾಗ, ಅಹ್ಮದಿ ಮುಸ್ಲಿಮರ ನಡೆವಳಿಕೆಗಳನ್ನು ಕಾಣುವಾಗ, ನೈಜ ಇಸ್ಲಾಮಿನ ಉದಾಹರಣೆಯನ್ನು ಕಾಣುವಾಗ ಅವರ ಸಂಶಯಗಳು ಮತ್ತು ಅನುಮಾನಗಳು ನಿವಾರಿಸಲ್ಪಡುವುವು.

ಈಗಾಗಲೇ ಇದು ಸಂಭವಿಸಿದೆ. ನಮ್ಮನ್ನು ವಿರೋಧಿಸುತ್ತಾ ಇದ್ದವರು ಈಗ ನಮ್ಮ ಸ್ನೇಹಿತರಾಗಿದ್ದಾರೆ ಮತ್ತು ವಿರೋಧವನ್ನು ತ್ಯಜಿಸಿದ್ದಾರೆ. ನಮ್ಮನ್ನು ವಿರೋಧಿಸುವವರ ಸಂಖ್ಯೆ ಕ್ರಮೇಣ ಕಡಿಮೆಯಾಗುತ್ತಾ ಹೋಗುವುದು ಮತ್ತು ಅವರು ಮಸ್‌ಜಿದ್ ಮತ್ತು ಇಸ್ಲಾಮ್ ಧರ್ಮದ ಬಗ್ಗೆ ಅರಿತುಕೊಳ್ಳುವಾಗ ಇದು ಸಂಭವಿಸುವುದು. ಹಾಗೆ ನಮ್ಮ ಸ್ನೇಹಿತರ ವಲಯ ವರ್ಧಿಸುವುದೆಂದು ನಾವು ಪ್ರತೀಕ್ಷಿಸುತ್ತೇವೆ.

ಕೇಂದ್ರ ಸರಕಾರದ ಕಮಿಶನರ್ ಆಫ್ ಮೈನೋರಿಟೀಸ್ (ಅಲ್ಪಸಂಖ್ಯಾತರ ಆಯೋಗದ ಮುಖ್ಯಸ್ಥರು) ಇಲ್ಲಿ ಉಪಸ್ಥಿತರಿದ್ದಾರೆ. ಆಕೆ ಹೇಳಿದರು: ಧಾರ್ಮಿಕ ಸ್ವಾತಂತ್ರ್ಯ ಇರಲೇಬೇಕಾಗಿದೆ. ಜರ್ಮನ್ ನಿಯಮಗಳು ಸಂಪೂರ್ಣ ಧಾರ್ಮಿಕ ಸ್ವಾತಂತ್ರ್ಯ ನೀಡುತ್ತಿದೆ. ನಾವು ಇದರ ಬಗ್ಗೆ ಸರಕಾರಕ್ಕೆ ಕೃತಜ್ಞರಾಗಿದ್ದೇವೆ. ಈ ಧಾರ್ಮಿಕ ಸ್ವಾತಂತ್ರ್ಯದ ಕಾರಣದಿಂದಲೇ ಅನೇಕ ಪಾಕಿಸ್ಥಾನಿ ಪ್ರಜೆಗಳು ಇಲ್ಲಿಗೆ ವಲಸೆ ಬಂದರು. ಅವರಿಗೆ ತಮ್ಮ ದೇಶದಲ್ಲಿ ಧಾರ್ಮಿಕ ಸ್ವಾತಂತ್ರ್ಯವಿರಲಿಲ್ಲ. ಇಲ್ಲಿ ಅವರು ಸರಕಾರದ ಸಂರಕ್ಷಣೆಯಲ್ಲಿ ಧಾರ್ಮಿಕ ಸ್ವಾತಂತ್ರ್ಯವನ್ನು ಸುಲಭವಾಗಿ ಗಳಿಸಿದ್ದಾರೆ.

ಆಕೆ ಹೇಳಿದ ಇನ್ನೊಂದು ಅಂಶ ಇದಾಗಿದೆ: ವಿವಿಧ ಧರ್ಮಗಳ ಅನುಯಾಯಿಗಳಾದ ಜನರು ಇಲ್ಲಿ ಪ್ರೀತಿ ಮತ್ತು ಸೌಹಾರ್ದದಿಂದ ಜೀವಿಸುತ್ತಿದ್ದಾರೆ. ನಾನು ಇದರ ಮೊದಲು ಹೇಳಿದ ಹಾಗೆ ಪ್ರತಿಯೊಂದು ಧರ್ಮದ ಸ್ಥಾಪಕರು ಹೀಗೆಯೇ ಉಪದೇಶಿಸುತ್ತಾ ಇದ್ದರು. ನಿಮ್ಮ ಸೃಷ್ಟಿಕರ್ತನನ್ನು ಆರಾಧಿಸಿರಿ, ಪರಸ್ಪರ ಹಕ್ಕುಗಳನ್ನು ಈಡೇರಿಸಿರಿ ಮತ್ತು ಪರಸ್ಪರ ಕರುಣೆಯಿಂದ ವರ್ತಿಸಿರಿ.

ಅನ್ಯರ ಹಕ್ಕುಗಳನ್ನು ಈಡೇರಿಸಿಕೊಡಬೇಕು ಎನ್ನುವುದು ಇಸ್ಲಾಮ್ ಧರ್ಮದ ಮೂಲ ತತ್ವಗಳಲ್ಲಿ ಒಂದಾಗಿದೆ. ಮುಸ್ಲಿಮರು ತಮ್ಮ ಹಕ್ಕುಗಳಿಗೋಸ್ಕರ ಮಾತ್ರ ಹೋರಾಡಬೇಕೆಂದು ಇಸ್ಲಾಮ್ ಹೇಳುವುದಿಲ್ಲ. ಹೋರಾಡಿ ಅನ್ಯರ ಹಕ್ಕುಗಳನ್ನೂ ಈಡೇರಿಸಿಕೊಡಬೇಕೆಂದು ಇಸ್ಲಾಮ್ ಆಜ್ಞಾಪಿಸುತ್ತದೆ. ನೀವು ಅನ್ಯರ ಹಕ್ಕುಗಳನ್ನು ಈಡೇರಿಸಲು ಪರಿಶ್ರಮಿಸುವಾಗ ಲೋಕದಲ್ಲಿ ಶಾಂತಿ ಸ್ಥಾಪಿಸಲ್ಪಡುವುದು ಮತ್ತು ಪ್ರೀತಿ ಸೌಹಾರ್ದಭರಿತ ಸಮಾಜವು ನಿರ್ಮಿಸಲ್ಪಡುವುದು. ಇಂದಿನ ಲೋಕದಲ್ಲಿ ಇದು ಅತ್ಯಂತ ಆವಶ್ಯಕವಾಗಿದೆ. **(ಮುಂದುವರಿಯುವುದು)**

**ಇಸ್ಲಾಮ್ ಮತ್ತು ಅಹ್ಮದಿಯ್ಯತ್‌ನ ಮಾಹಿತಿಗಾಗಿ ನಮ್ಮನ್ನು ಸಂಪರ್ಕಿಸಿ:**

**NATIONAL TOLL FREE : 1800-103-2131**

**ಸಮಯ: ಬೆಳಿಗ್ಗೆ 08:30 ಯಿಂದ ರಾತ್ರಿ 10:30ಯವರೆಗೆ**

**(ಶುಕ್ರವಾರ ರಜೆ)**

Printed & Published by: Jameel Ahmed Nasir on behalf of Nigran Board of Badar. Name of Owner: Nigran Board of Badar. And printed at Fazle-Umar Printing Press. Harchowal Road, Qadian, Distt. Gurdaspur-143516, Punjab. And published at office of the Weekly Badar Mohallah - Ahmadiyya, Qadian Distt. Gsp-143516, Punjab. India. Editor: Tariq Ahmed Idris.